ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 19 | ಮೇ 2-8-2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com




ಸೌಹಾರ್ದ ಮೇ ದಿನ

HAPPY MAY DAY

ಶಕ್ತಿಯುತ ಐಕ್ಯ ಹೋರಾಟಕ್ಕೆ ಕಾರ್ಮಿಕ ವರ್ಗಕ್ಕೆ ಕರೆ





ಆರ್ಥಿಕ ಬಿಕ್ಕಟ್ಟು ಆಳಕ್ಕಿಳಿಯುತ್ತಿದೆ ದ್ವೇಷ, ಹಿಂಸಾಚಾರ ಏರುತ್ತಿದೆ.



ಸ್ವತಂತ್ರ ಶಕ್ತಿಯ ಬೆಳವಣಿಗೆ ಸಿಪಿಐ(ಎಂ) ಗೆ ಇರುವ ಏಕೈಕ ಮಾರ್ಗ

मराठी मराठी हिन्दी
తెలుగు లిపి ગુજરાતી മലയാളം
भाषा বাংলা
ଓଡ଼ିଆ ଭାଷା ಕನ್ನಡ संस्कृतम्
விக்கிப்பீடியா اُردُو অসমীয়া

ಹಿಂದಿ ಭಾಷಾ ಯಜಮಾನಿಕೆ ಕೂಡದು



ಫ್ರಾನ್ಸ್: ಎಡ ಶಕ್ತಿಗಳ ಮುನ್ನಡೆ, ಗೆದ್ದು ಸೋತ ಮ್ಯಾಕಾನ್

ಎಲ್‌ಐಸಿ ಯ ಐಪಿಒ ವನ್ನು ತಕ್ಷಣವೇ ನಿಲ್ಲಿಸಬೇಕು

– ಸಿಪಿಐ(ಎಂ) ಪೊಲಿಟ್‌ಬ್ಯುರೊ

"ಈ ಪ್ರಕ್ರಿಯೆಯಲ್ಲಿ ಒಟ್ಟಾರೆ ಅನುಚಿತತೆ ಮತ್ತು ದುರ್ನಡತೆಯ ವಾಸನೆ ಬರುತ್ತಿದೆ"

ಎಲ್‌ಐಸಿ ಆರಂಭಿಕ ಶೇರು ಮಾರಾಟ(ಐಪಿಒ) ಮೇ 4ರಂದು ಆರಂಭವಾಗಲಿದೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತಾ ಸಿಪಿಐ(ಎಂ) ಪೊಲಿಟ್ ಬ್ಯುರೊ, ಸರಕಾರ ಈ ಪ್ರಕ್ರಿಯೆಯನ್ನು ಎಲ್‌ಐಸಿ ಯ ನೈಜ ಮೌಲ್ಯವನ್ನು ಕಡಿಮೆ ಮಾಡುವ ಮತ್ತು ಪಾಲಿಸಿದಾರರ ಹಿತಾಸಕ್ತಿಗಳನ್ನು ದುರ್ಬಲಗೊಳಿಸುವ ರೀತಿಯಲ್ಲಿ ಆಕ್ರಾಮಕವಾಗಿ ನಡಸುತ್ತಿರುವುದು ಆಕ್ರೋಶಕಾರಿ ಎಂದು ಹೇಳಿದೆ.

ಇದರಲ್ಲಿ ಒಟ್ಟಾರೆ ಅನುಚಿತತೆ ಮತ್ತು ಹಣಕಾಸು ದುರ್ನಡತೆಯ ವಾಸನೆ ಬರುತ್ತಿದೆ. ಆದ್ದರಿಂದ, ಈ ಐಪಿಒ ನ್ನು ಸಾಧ್ಯವಾದಷ್ಟು ವ್ಯಾಪಕವಾಗಿ ವಿರೋಧಿಸಬೇಕು ಎಂದು ಅದು ಆಗ್ರಹಿಸಿದೆ. ಈ ನಿಟ್ಟಿನಲ್ಲಿ ಎಲ್.ಐ.ಸಿ. ಯ ನೌಕರರು ಮತ್ತು ಪಾಲಿಸಿದಾರರ ನಿರಂತರ ಹೋರಾಟಕ್ಕೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ, ಸರ್ಕಾರವು ಈ ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕೆಂದು ಅದು ಒತ್ತಾಯಿಸಿದೆ.

ಎಲ್‌ಐಸಿ ಯ ಐಪಿಒವನ್ನು ಆರಂಭಿಸುವಲ್ಲಿ ಕೇಂದ್ರ ಸರ್ಕಾರ ನಡೆದುಕೊಳ್ಳುವ ರೀತಿಯನ್ನು ದೃಢವಾಗಿ ವಿರೋಧಿಸುತ್ತ ಸಿಪಿಐ(ಎಂ) ಪೊಲಿಟ್ ಬ್ಯೂರೋ, ಇದು ಎಲ್‌ಐಸಿಯ ಸಾರ್ವಜನಿಕ ಸ್ವರೂಪವನ್ನು ನಾಶಪಡಿಸುವ ಮತ್ತು ಎಲ್‌ಐಸಿಯ ಸುಮಾರು 29 ಕೋಟಿ ಪಾಲಿಸಿದಾರರ ಒಡೆತನದ ಬೆಲೆಬಾಳುವ ಹಣಕಾಸು ಆಸ್ತಿಗಳನ್ನು ಹಸ್ತಾಂತರಿಸುವತ್ತ ಒಂದು ಹೆಜ್ಜೆಯಾಗಿದೆ ಎಂದು ವರ್ಣಿಸಿದೆ.

ವಿಮಾ ಜಗತ್ತಿನಲ್ಲಿ ಎಲ್‌ಐಸಿ ಗೆ ಅನನ್ಯ ಸ್ಥಾನವಿದೆ. ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುವ ಸಲುವಾಗಿ ಖಾಸಗಿ ವಿಮಾ ಕಂಪನಿಗಳ ರಾಷ್ಟ್ರೀಕರಣದ ಮೂಲಕ ಇದನ್ನು ರಚಿಸಲಾಗಿದೆ. ಉಳಿತಾಯ– ಮತ್ತು ಆಪತ್ತಿನಿಂದ ರಕ್ಷಣೆಯ ಅಂಶಗಳನ್ನು ಮೇಳವಿಸಿದ ಒಂದು ನವೀನ ಸಮ್ಮಿಶ್ರ ಉತ್ಪನ್ನವನ್ನು ಪ್ರಸ್ತುತಪಡಿಸಲಾಯಿತು. ಇದು ಸಾಮಾನ್ಯ ಜನರಲ್ಲಿ ಜನಪ್ರಿಯವಾಗಿ ವಿಮಾ ವ್ಯವಹಾರ ತ್ವರಿತವಾಗಿ ವಿಸ್ತರಣೆಗೊಳ್ಳುವಂತಾಯಿತು. ಭಾರತ ಸರಕಾರ ಕೇವಲ 5 ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿತ್ತು, ಆದರೆ ಇಂದು ಒಟ್ಟು ಜೀವ ನಿಧಿಯು(ಲೈಫ್ ಫಂಡ್) 34 ಲಕ್ಷ ಕೋಟಿ ರೂಪಾಯಿಯಾಗಿದೆ.

ಈಗ ಸರ್ಕಾರ ಪಾಲಿಸಿದಾರರ ಟ್ರಸ್ಟ್‌ನ ಸ್ವರೂಪ ಹೊಂದಿರುವ ಈ ಹಣಕಾಸು ಸಂಸ್ಥೆಯನ್ನು ಲಾಭವನ್ನು ಗರಿಷ್ಟಗೊಳಿಸುವ ಷೇರುದಾರರ ಒಡೆತನದ ಕಂಪನಿಯಾಗಿ ಬದಲಾಯಿಸ ಬೇಕೆಂದಿದೆ. ಎಲ್‌ಐಸಿಯ ಷೇರುಗಳ ಮಾರಾಟವೆಂದರೆ, ನಿಜಾರ್ಥದಲ್ಲಿ ಪಾಲಿಸಿದಾರರ ಭವಿಷ್ಯದ ಆದಾಯದ ಹರಿವಿನ ಮಾರಾಟವೇ ಆಗಿದೆ. ಆದರೆ ಅವರೊಂದಿಗೆ ಸಮಾಲೋಚನೆಯನ್ನೂ ನಡೆಸಿಲ್ಲ, ಮತ್ತು ಐಪಿಒದ ಪರಿಣಾಮಗಳ ಬಗ್ಗೆ ಅವರಿಗೆ ತಿಳಿಸಿಯೂ ಇಲ್ಲ ಎಂಬ ಸಂಗತಿಯತ್ತ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಈ ಅಸಹ್ಯಕರ ಪ್ರಕ್ರಿಯೆಯ ವಿವರಗಳು ಈಗ ಅನಾವರಣಗೊಳ್ಳುತ್ತಿವೆ. ಎಲ್‌ಐಸಿಯ 'ಹುದುಗಿರುವ ಮೌಲ್ಯ'ದ (ಎಂಬೆಡ್ಡೆಡ್ ವ್ಯಾಲ್ಯು–ಇವಿ) ಇತ್ತೀಚಿನ ಅಂದಾಜು 5.40 ಲಕ್ಷ ಕೋಟಿ ರೂ. ಎನ್ನಲಾಗಿತ್ತು. ಸುಮಾರು ಎರಡು ತಿಂಗಳ ಹಿಂದೆ, ಎಲ್‌ಐಸಿ ಷೇರಿನ ನೈಜ ಮೌಲ್ಯವನ್ನು 2.5 ಮತ್ತು 3 ರ ನಡುವಿನ ಗುಣಕಾಂಶವನ್ನು ಅನ್ವಯಿಸುವ ಮೂಲಕ ನಿರ್ಧರಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ, ಈಗ ಅಂತರಾಷ್ಟ್ರೀಯ ಹೂಡಿಕೆದಾರರ ಪುಸಲಾವಣೆಗೆ ತಲೆಬಾಗಿ ಸರ್ಕಾರವು 1.1 ಗುಣಕಾಂಶವನ್ನು ಬಳಸಿ ಮೌಲ್ಯಮಾಪನವನ್ನು ಗಮನಾರ್ಹವಾಗಿ ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ.

ವಿಮಾ ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆದು ಕಾಲು ಶತಮಾನವಾಗಿದ್ದರೂ, ಎಲ್‌ಐಸಿ ಈಗಲೂ ದೇಶದಲ್ಲಿ 73% ಪಾಲಿಸಿಗಳನ್ನು ಮತ್ತು 61 %ದಷ್ಟು ಮೊದಲ ವರ್ಷದ ಪ್ರೀಮಿಯಂ ಪಾಲನ್ನು ಹೊಂದಿದೆ. ಇದು ವಿಶ್ವದ ಅತ್ಯಂತ ಮೌಲ್ಯಯುತ ವಿಮಾ ಬ್ರಾಂಡ್‌ಗಳಲ್ಲಿ ಒಂದಾಗಿದೆ. ಇದರ ಆಸ್ತಿ ಒಟ್ಟು ರೂ. 38 ಲಕ್ಷ ಕೋಟಿ ಮತ್ತು ಇದು ದೇಶಾದ್ಯಂತ ಹರಡಿರುವ ಒಂದು ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳು ಮತ್ತು 14 ಲಕ್ಷ ಏಜೆಂಟರನ್ನು ಹೊಂದಿದೆ ಭಾರತದಲ್ಲಿ ಜೀವ ವಿಮೆಯ ಹರಿಕಾರನಾಗಿದ್ದು, ಸುಮಾರು ಮೂರನೇ ಎರಡರಷ್ಟು ಮಾರುಕಟ್ಟೆ ಪಾಲನ್ನು ಹೊಂದಿರುವ ಮತ್ತು ಆರು ದಶಕಗಳ ಕಳಂಕರಹಿತ ದಾಖಲೆಯನ್ನು ಹೊಂದಿರುವ ಒಂದು ಕಂಪನಿಯ ಮೌಲ್ಯವನ್ನು ಕೋಟ್ಯಂತರ ಪಾಲಿಸಿದಾರರ ಹಿತವನ್ನು ಬಲಿಗೊಟ್ಟು, ಆದಷ್ಟು ಬೇಗನೇ ಹಣಮಾಡಿಕೊಳ್ಳುವ ಧಾವಂತದಲ್ಲಿರುವ ಚಪಲ ಅಂತರರಾಷ್ಟ್ರೀಯ ಹೂಡಿಕೆದಾರರು ಅಳೆಯಲು ಅವಕಾಶ ಮಾಡಿಕೊಡಲಾಗಿದೆ.

ಇದರಲ್ಲಿ ಒಟ್ಟಾರೆ ಅನುಚಿತತೆ ಮತ್ತು ಹಣಕಾಸು ದುರ್ನಡತೆಯ ವಾಸನೆ ಬರುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ, ತಾನು ತಾತ್ವಿಕವಾಗಿ, ಕೋಟ್ಯಂತರ ಪಾಲಿಸಿದಾರರ ಆಸ್ತಿಯನ್ನು ಹೊಂದಿರುವ ಸಂಸ್ಥೆಯ ಐಪಿಒವನ್ನು ವಿರೋಧಿಸುವುದೇ ಅಲ್ಲದೆ, ವಿಶೇಷವಾಗಿ ಎಲ್‌ಐಸಿ ಯ ನೈಜ ಮೌಲ್ಯವನ್ನು ಕಡಿಮೆ ಮಾಡುವ ಮತ್ತು ಪಾಲಿಸಿದಾರರ ಹಿತಾಸಕ್ತಿಗಳನ್ನು ದುರ್ಬಲಗೊಳಿಸುವ ರೀತಿಯಲ್ಲಿ ಸರ್ಕಾರವು ಆಕ್ರಾಮಕವಾಗಿ ನಡೆದುಕೊಳ್ಳುತ್ತಿರುವುದು ಆಕ್ರೋಶಕಾರಿ ಎಂದಿದೆ. ಆದ್ದರಿಂದ, ಈ ಐಪಿಒ ನ್ನು ಸಾಧ್ಯವಾದಷ್ಟು ವ್ಯಾಪಕವಾಗಿ ವಿರೋಧಿಸಬೇಕು ಎಂದು ಅದು ಆಗ್ರಹಿಸಿದೆ. ಈ ನಿಟ್ಟಿನಲ್ಲಿ ಎಲ್‌ಐಸಿ ಯ ನೌಕರರು ಮತ್ತು ಪಾಲಿಸಿದಾರರ ನಿರಂತರ ಹೋರಾಟಕ್ಕೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ, ಸರ್ಕಾರವು ಈ ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕೆಂದು ಅದು ಒತ್ತಾಯಿಸಿದೆ.

ವಿದೇಶಿ 'ಹೂಡಿಕೆದಾರ'ರಿಗೆ ತಲೆಬಾಗಿದ ಹುಸಿ 'ರಾಷ್ಟ್ರೀಯವಾದಿ'ಗಳು– ಸಿಐಟಿಯು

ಸಿಐಟಯು ಕೂಡ ಪ್ರತ್ಯೇಕ ಹೇಳಿಕೆಯೊಂದರಲ್ಲಿ ಈ ಐಪಿಒ ಪ್ರಕ್ರಿಯನ್ನು ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದೆ.

ದೇಶದ ಅತ್ಯಂತ ದೊಡ್ಡ ಹಣಕಾಸು ಸಂಸ್ಥೆಯನ್ನು ನುಂಗಿ ಬಿಡಲು ಬಹಳ ಕಾಲದಿಂದ ಹೊಂಚು ಹಾಕುತ್ತಿರುವ ವಿದೇಶಿ ಮತ್ತು ದೇಶಿ 'ಹೂಡಿಕೆದಾರ'ರ ಆಗ್ರಹಗಳಿಗೆ ತಲೆಬಾಗಿದ ಬಿಜೆಪಿ ಸರಕಾರ ಈ ಪ್ರಕ್ರಿಯೆಯನ್ನು ಆರಂಭಿಸಿದೆ. ಈ ಮೂಲಕ ಸದಾ ರಾಷ್ಟ್ರೀಯವಾದದ ಸೋಗು ಹಾಕುವ ಬಿಜೆಪಿ ತನ್ನ ನಿಜ ಬಣ್ಣವನ್ನು ತೋರಿಸಿದೆ ಎಂದು ಅದು ಹೇಳಿದೆ.

ಖಾಸಗಿ ವಿಮಾ ಕಂಪನಿಗಳನ್ನು ರಾಷ್ಟ್ರೀಕರಿಸಿ ಭಾರತ ಸರಕಾರ ಕೇವಲ 5 ಕೋಟಿ ರೂ. ಹೂಡಿಕೆ ಮಾಡಿ ಎಲ್‌ಐಸಿಯನ್ನು ಸ್ಥಪಿಸಿತು ಎಂಬುದನ್ನು ನೆನಪಿಸಿರುವ ಸಿಐಟಿಯು, ಇಂತಹ ಸಂಸ್ಥೆ ಈಗ ಕೋಟ್ಯಂತರ ಪಾಲಿಸಿದಾರರ ವಿಶ್ವಾಸವನ್ನು ಗಳಿಸಿರುವುದಷ್ಟೇ ಅಲ್ಲ, ರಾಷ್ಟ್ರನಿರ್ಮಾಣದಲ್ಲಿ ಅಪಾರ ಕೊಡುಗೆಗಳನ್ನು ನೀಡಿದೆ ಎಂದಿದೆ.

ಮೋದಿ ನೇತೃತ್ವದ ಬಿಜೆಪಿ ಸರಕಾರ ತನ್ನ ಕಾರ್ಪೊರೇಟ್ ಯಜಮಾನರುಗಳ ಸೇವೆಗೆ ಎಷ್ಟು ತತ್ಪರವಾಗಿದೆಯೆಂದರೆ, ಎಲ್‌ಐಸಿಯ ಮೌಲ್ಯಮಾಪನವನ್ನು ಬೇಕಾಬಿಟ್ಟಿಯಾಗಿ ಅರ್ಧಕ್ಕೆ ಇಳಿಸಿ ಬಿಡಿಗಾಸಿಗೆ ಎಲ್‌ಐಸಿ ಶೇರುಗಳನ್ನು ಪಡೆಯಲು ಅವರಿಗೆ ಅನುಕೂಲ ಕಲ್ಪಿಸಿಕೊಟ್ಟಿದೆ ಎಂದು ಹೇಳಿರುವ ಸಿಐಟಿಯು ಸರಕಾರ ಈ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದೆ ಹಾಗೂ ತನ್ನ ಸದಸ್ಯರು ಮತ್ತು ಸಮಸ್ತ ಕಾರ್ಮಿಕ ವರ್ಗ ಇದನ್ನು ಬಲವಾಗಿ ಪ್ರತಿಭಟಿಸಬೇಕು ಮತ್ತು ಜನಗಳನ್ನು ಈ ರಾಷ್ಟ್ರ–ವಿರೋಧಿ ಕ್ರಮದ ವಿರುದ್ಧ ಅಣಿನೆರೆಸಬೇಕು ಎಂದು ಕರೆ ನೀಡಿದೆ.

ಅಂಗನವಾಡಿ ನೌಕರರ ಗ್ರಾಚ್ಯುಟಿ ಮತ್ತು ಕೆಲಸದ ಪರಿಸ್ಥಿತಿಗಳ ಸುಧಾರಣೆ: ಸುಪ್ರೀಂ ಕೋರ್ಟ್ ಆದೇಶವನ್ನು ತಕ್ಷಣವೇ ಜಾರಿಗೊಳಿಸಬೇಕು–ಸಿಐಟಿಯು ಆಗ್ರಹ

ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಒಕ್ಕೂಟ(ಎಐಎಫ್‌ಎಡಬ್ಲ್ಯುಹೆಚ್)ಕ್ಕೆ ಸಂಯೋಜಿತ ವಾಗಿರುವ ಗುಜರಾತ್ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘ ಮತ್ತು ಅಖಿಲ ಭಾರತ ವಕೀಲರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಹಿರಿಯ ವಕೀಲ ಪಿ.ವಿ. ಸುರೇಂದ್ರನಾಥ್ ಮತ್ತು ವಕೀಲ ಸುಭಾಷ್ ಚಂದ್ರನ್ ಅವರ ನಿರಂತರ ಕಾನೂನು ಹೋರಾಟದ ಫಲವಾಗಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಗ್ರಾಚ್ಯುಟಿಯ ಕಾನೂನು ಹಕ್ಕನ್ನು ಹೊಂದಿದ್ದಾರೆ ಎಂದು ಹೇಳುವ ಸುಪ್ರಿಂ ಕೋರ್ಟ್ ತೀರ್ಪು ಬಂದಿದೆ. ಈ ಐತಿಹಾಸಿಕ ತೀರ್ಪಿನ ಮೂಲಕ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಕಾನೂನು ಹಕ್ಕುಗಳ ಬಗ್ಗೆ ಯಾವುದೇ ನಿಲುವು ತೆಗೆದುಕೊಳ್ಳಲು ಈ ಹಿಂದೆ ನಿರಾಕರಿಸಿದ್ದ ತನ್ನ ತೀರ್ಪನ್ನು ಸುಪ್ರೀಂ ಕೋರ್ಟ್ ಸರಿಪಡಿಸಿಕೊಂಡಂತಾಗಿದೆ ಎಂದು ಸಿಐಟಿಯುಗೆ

ಪುಟ 6 ಕ್ಕೆ

ಅಗಾಧ ಸಾಮಾಜಿಕ ಬೆದರಿಕೆಯೆದುರು ಪ್ರಧಾನಿಗಳ ದಿವ್ಯ ಮೌನ!

ದ್ವೇಷ ರಾಜಕೀಯವನ್ನು ನಿಲ್ಲಿಸಲು ಕರೆ ನೀಡಿ–ನಿವೃತ್ತ ನಾಗರಿಕ ಅಧಿಕಾರಿಗಳ ಬಹಿರಂಗ ಪತ್ರ

ಭಾರತೀಯ ಜನತಾ ಪಕ್ಷದ ನಿಯಂತ್ರಣದಲ್ಲಿರುವ ಸರ್ಕಾರಗಳು ಬಹಳ "ತತ್ಪರತೆಯಿಂದ ದ್ವೇಷದ ರಾಜಕೀಯ"ವನ್ನು ನಡೆಸುತ್ತಿವೆ, ಅದನ್ನು ನಿಲ್ಲಿಸುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡುತ್ತಾರೆ ಎಂಬ ಆಶಾಭಾವನೆಯನ್ನು ನೂರಕ್ಕೂ ಹೆಚ್ಚು ನಿವೃತ್ತ ಐಎಎಸ್ ಮುಂತಾದ ಆಡಳಿತಾಧಿಕಾರಿಗಳು ಅವರಿಗೆ ಬರೆದಿರುವ ಬಹಿರಂಗ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ.

"ದೇಶದಲ್ಲಿ ದ್ವೇಷ ತುಂಬಿದ ವಿನಾಶದ ಉನ್ಮಾದವನ್ನು ನಾವು ನೋಡುತ್ತಿದ್ದೇವೆ, ಅಲ್ಲಿ ಬಲಿಪೀಠದ ಮೇಲೆ ಕೇವಲ ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರು ಮಾತ್ರವಲ್ಲ, ಸ್ವತಃ ಸಂವಿಧಾನವೇ ಇದೆ" ಎಂದು ಈ ಪತ್ರದಲ್ಲಿ ಅವರು ತಮ್ಮ ಅತೀವ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ದೆಹಲಿಯ ಮಾಜಿ ಉಪರಾಜ್ಯಪಾಲ ನಜೀಬ್ ಜಂಗ್, ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಶಿವಶಂಕರ್ ಮೆನನ್, ಮಾಜಿ ವಿದೇಶಾಂಗ ಕಾರ್ಯದರ್ಶಿ ಸುಜಾತಾ ಸಿಂಗ್, ಮಾಜಿ ಗೃಹ ಕಾರ್ಯದರ್ಶಿ ಜಿ.ಕೆ. ಪಿಳ್ಳೈ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಮುಖ್ಯ ಕಾರ್ಯದರ್ಶಿಯಾಗಿದ್ದ ಟಿ.ಕೆ.ಎ. ನಾಯರ್ ಸೇರಿದಂತೆ 108 ಮಂದಿ ಪತ್ರಕ್ಕೆ ಸಹಿ ಹಾಕಿದ್ದಾರೆ.

"ನಾಗರಿಕ ಸೇವೆಯಲ್ಲಿದ್ದವರಾಗಿ, ನಾವು ಸಾಮಾನ್ಯವಾಗಿ ಇಂತಹ ತೀವ್ರ ಪದಗಳಲ್ಲಿ ನಮ್ಮನ್ನು ವ್ಯಕ್ತಪಡಿಸಲು ಬಯಸುವುದಿಲ್ಲ, ಆದರೆ ನಮ್ಮ ಸ್ಥಾಪಕ ಪಿತೃಗಳು ನಿರ್ಮಿಸಿದ ಸಾಂವಿಧಾನಿಕ ಸೌಧವನ್ನು ಪಟ್ಟುಬಿಡದೆ ವೇಗವಾಗಿ ಧ್ವಂಸಗೊಳಿಸುತ್ತಿರುವುದನ್ನು ಕಂಡಾಗ ನಮ್ಮ ಆಕ್ರೋಶವನ್ನು ಮತ್ತು ದುಃಖವನ್ನು ನಾವು ವ್ಯಕ್ತಗೊಳಿಸಲೇ ಬೇಕಾಗಿದೆ" ಎಂದು ಪತ್ರ ಹೇಳಿದೆ.

ಅಸ್ಸಾಂ, ದೆಹಲಿ, ಗುಜರಾತ್, ಹರಿಯಾಣ, ಕರ್ನಾಟಕ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಉತ್ತರಾಖಂಡ, ಬಿಜೆಪಿ ಇರುವ ಎಲ್ಲಾ ರಾಜ್ಯಗಳಲ್ಲಿ ಕಳೆದ ಕೆಲವು ವರ್ಷಗಳು ಮತ್ತು ತಿಂಗಳುಗಳಲ್ಲಿ ಅಲ್ಪಸಂಖ್ಯಾತ ಸಮುದಾಯಗಳು, ವಿಶೇಷವಾಗಿ ಮುಸ್ಲಿಮರ ವಿರುದ್ಧ ದ್ವೇಷದ ಹಿಂಸಾಚಾರವು ಉಲ್ಬಣಗೊಂಡಿದ್ದು ಭೀತಿಕಾರಕ ಆಯಾಮವನ್ನು ಪಡೆಯುತ್ತಿದೆ . ಈ ಎಲ್ಲ ರಾಜ್ಯಗಳಲ್ಲಿ, ದಿಲ್ಲಿಯನ್ನು ಹೊರತುಪಡಿಸಿ, ಬಿಜೆಪಿ ಅಧಿಕಾರ ನಡೆಸುತ್ತಿದೆ. ದಿಲ್ಲಿಯಲ್ಲೂ ಪೋಲೀಸ್ ಇಲಾಖೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ.

ಇದು ಅಭೂತಪೂರ್ವ ಬೆದರಿಕೆ, ಈಗ ಅಪಾಯಕ್ಕೊಳಗಾಗಿರುವುದು ಕೇವಲ ಸಾಂವಿಧಾನಿಕ ನೈತಿಕತೆ ಮತ್ತು ನಡವಳಿಕೆಯಷ್ಟೇ ಅಲ್ಲ, ನಮ್ಮ ವಿಶಿಷ್ಟ ಸಮ್ಮಿಶ್ರ ಸಾಮಾಜಿಕ ಹಂದರವನ್ನೇ ಇದು ಚಿಂದಿ ಮಾಡುವ ಸಾಧ್ಯತೆ ಇದೆ ಎಂಬುದು ತಮ್ಮ ನಂಬಿಕೆ ಎಂದಿರುವ ಈ ನಿವೃತ್ತ ಉನ್ನತಾಧಿಕಾರಿಗಳು ಈ ಸಮ್ಮಿಶ್ರ ಸಾಮಾಜಿಕ ಹಂದರ ನಮ್ಮ ನಾಗರಿಕತೆಯ ಶ್ರೇಷ್ಠ ಪರಂಪರೆ, ಇದನ್ನು ಸಂರಕ್ಷಿಸಲು ನಮ್ಮ ಸಂವಿಧಾನವನ್ನು ಬಹಳ ಶ್ರಮಪಟ್ಟು ರೂಪಿಸಲಾಗಿದೆ ಎಂದು ನೆನಪಿಸಿದ್ದಾರೆ.

"ಈ ಅಗಾಧ ಸಾಮಾಜಿಕ ಬೆದರಿಕೆ ಎದುರು ನಿಮ್ಮ ಮೌನ ಕಿವುಡಾಗಿಸುವಂತದ್ದು" ಎಂದು ಈ ಬಹಿರಂಗ ಪತ್ರ ಪ್ರಧಾನ ಮಂತ್ರಿಯವರಿಗೆ ಹೇಳಿದೆ.

"ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್" ಎಂಬ ನಿಮ್ಮ ಆಶ್ವಾಸನೆಯಿಂದ ಹೃನ್ಮನ ತುಂಬಿಸಿಕೊಂಡಿರುವ ನಾವು ನಿಮ್ಮ ಆತ್ಮಸಾಕ್ಷಿಗೆ ಮನವಿ ಮಾಡುತ್ತೇವೆ" ಎಂದಿರುವ ಈ ನಿವೃತ್ತ ಹಿರಿಯ ಅಧಿಕಾರಿಗಳು "'ಆಜಾದಿ ಕಾ ಅಮೃತ್ ಮಹೋತ್ಸವ'ದ ಈ ವರ್ಷದಲ್ಲಿ ಪಕ್ಷಪಾತೀ ಪರಿಗಣನೆಗಳನ್ನು ಮೀರಿ ನಿಂತು, ನಿಮ್ಮ ಪಕ್ಷದ ನಿಯಂತ್ರಣದಲ್ಲಿರುವ ಸರ್ಕಾರಗಳು ತುಂಬಾ ತತ್ಪರತೆಯಿಂದ ನಡೆಸುತ್ತಿರುವ ದ್ವೇಷದ ರಾಜಕಾರಣವನ್ನು ಕೊನೆಗೊಳಿಸಲು ನೀವು ಕರೆ ನೀಡುತ್ತೀರಿ ಎಂಬುದು ನಮ್ಮ ಅಕ್ಕರೆಯ ಆಶಯವಾಗಿದೆ" ಎಂದು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಭಾಷಾ ಯಜಮಾನಿಕೆಯ ಹೇರಿಕೆ ಕೂಡದು

ಸಂಪಾದಕೀಯ

ರಾಷ್ಟ್ರೀಯ ಭಾಷೆ ಯಾವುದು ಎನ್ನುವುದರ ಕುರಿತ ಭಾರತೀಯ ಚಿತ್ರರಂಗದ ಇಬ್ಬರು ನಟರ ನಡುವಿನ ಟ್ವೀಟ್ ಸಂದೇಶಗಳ ವಾಗ್ವಾದ ಮತ್ತೆ ರಾಷ್ಟ್ರಭಾಷೆಯ ಈ ಪ್ರಶ್ನೆಯನ್ನು ಚರ್ಚೆಯ ಮುನ್ನೆಲೆಗೆ ತಂದಿದೆ. ಇದೇ ತಿಂಗಳ ಮಧ್ಯದಲ್ಲಿ 37ನೆಯ ಭಾಷಾ ಸಂಸದೀಯ ಸಮಿತಿಯ ಸಭೆಯಲ್ಲಿ ಮಾತನಾಡುತ್ತಾ ಕೇಂದ್ರ ಗೃಹ ಸಚಿವ ಅಮಿತ್ ಶಾ ರವರು ಇಂಗ್ಲೀಷ್ ಗೆ ಪರ್ಯಾಯವಾಗಿ ಹಿಂದಿಯನ್ನು ಒಪ್ಪಿಕೊಳ್ಳುವಂತೆ ಎಲ್ಲ ರಾಜ್ಯಗಳ ಜನರು ಹಿಂದಿಯನ್ನು ಸಂಪರ್ಕ ಭಾಷೆಯನ್ನಾಗಿ ಅಳವಡಿಸಿ ಕೊಳ್ಳುವಂತೆ ತಿಳಿಸಿದ್ದರು. ಅತ್ಯಂತ ಜಾಣತನದಿಂದ ಹಿಂದಿಯ ಪ್ರಾಧಾನ್ಯತೆಯನ್ನು ಅಮಿತ್ ಶಾ ರವರು ಮಂಡಿಸಿದ್ದರು. ಹಿಂದಿ ಭಾಷೆ ದೇಶವನ್ನು ಒಗ್ಗೂಡಿಸುವ ಸಾಧನ ಎಂದು ಹೇಳುವ ಮೂಲಕ ಪ್ರಾದೇಶಿಕ ಭಾಷೆಗಳು ರಾಷ್ಟ್ರದ ಸಮಗ್ರತೆಗೆ ಪೂರಕವಲ್ಲ ಎನ್ನುವುದನ್ನು ಪ್ರತಿಪಾದಿಸಿದ್ದರು. ರಾಷ್ಟ್ರಭಾಷೆ ಹಿಂದಿ ಎನ್ನುವುದನ್ನು ಪರೋಕ್ಷವಾಗಿ ಪ್ರತಿಪಾದಿಸಿ ಪ್ರಾದೇಶಿಕ ಭಾಷೆಗಳನ್ನು ನಿರ್ಲಕ್ಷಿಸಿ ಆಡಿದ ಮಾತಿಗೆ ದೇಶದಲ್ಲಿ ತೀವ್ರತರವಾದ ವಿರೋಧ ಎದುರಿಸಬೇಕಾಗಿ ಬಂದಿತ್ತು. ಇದೀಗ ಹಿಂದಿ ಭಾಷಾ ಚಲನಚಿತ್ರ ನಟ ಅಜಯ್ ದೇವಗನ್ ರವರು ಹಿಂದಿ ರಾಷ್ಟ್ರಭಾಷೆ ಅಲ್ಲವಾದರೆ ಹಿಂದಿಗೇಕೆ ಕನ್ನಡದ ಚಿತ್ರಗಳನ್ನು ಡಬ್ ಮಾಡುತ್ತೀರಿ ಎಂದು ಟ್ವೀಟ್ ಮಾಡಿರುವುದು ಮತ್ತು ಅದಕ್ಕೆ ಕನ್ನಡದ ಚಲನಚಿತ್ರ ನಟ ಸುದೀಪ್ ರವರು ಪ್ರತಿಕ್ರಿಯಿಸಿ ಹಿಂದಿ ಉಳಿದ ಭಾಷೆಗಳಂತೆ ಒಂದು ಭಾಷೆ, ಕನ್ನಡವೂ ಸಹ ರಾಷ್ಟ್ರಭಾಷೆ ಎಂದು ಸಾರ್ವಜನಿಕವಾಗಿ ಪ್ರತಿಪಾದಿಸಿರುವುದು ಪ್ರಸಕ್ತವಾಗಿ ಬಾರತೀಯ ಭಾಷೆಗಳ ಸ್ಥಾನಮಾನದ ಪ್ರಶ್ನೆಯನ್ನು ಚರ್ಚೆಗೆ ತಂದಿದೆ.

ದೇಶದ ಮಟ್ಟದಲ್ಲಿ ಆಗಲಿ ಅಥವಾ ರಾಜ್ಯಗಳಲ್ಲಿ ಆಗಿರಲಿ ಆರ್ಥಿಕ, ರಾಜಕೀಯ ಬಿಕ್ಕಟ್ಟುಗಳು ಸಂಭವಿಸಿದಾಗ ಜನತೆಯನ್ನು ಹಾದಿತಪ್ಪಿಸಲು ಗಮನ ಬೇರೆ ಕಡೆಗೆ ತಿರುಗಿಸಲು ಗಡಿ, ಭಾಷೆಯಂತಹ ಭಾವನಾತ್ಮಕ ಪ್ರಶ್ನೆಗಳನ್ನು ಬಲಪಂಥೀಯ ಪಕ್ಷಗಳು ಕೆದಕುವುದು ಸಾಮಾನ್ಯವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಅದರಲ್ಲಿಯೂ ಎರಡನೆಯ ಅವಧಿಗೆ ಮೋದಿ ಪ್ರಧಾನಿಯಾದ ನಂತರ ಹಿಂದಿಯನ್ನು ಎಲ್ಲದರ ಮೇಲೆ ಪ್ರತಿಷ್ಠಾಪಿಸುವ, ಅದರ ಮೇಲಿರಿಮೆಯನ್ನು ಸಾರುವ ಪ್ರಯತ್ನಗಳು ನಿರಂತರ ನಡೆಯುತ್ತಲೇ ಬಂದಿವೆ ಎನ್ನುವುದನ್ನು ಗಮನಿಸಬೇಕು. 2018 ರಲ್ಲಿ ಕೇಂದ್ರದ ಸರ್ಕಾರ ಹಿಂದಿಯನ್ನು ಪ್ರೋತ್ಸಾಹಿಸಲು ಸುಮಾರು 400 ಕೋಟಿ ರೂ.ಗಳ ಖರ್ಚು ಮಾಡಿ ಅಭಿಯಾನವನ್ನು ನಡೆಸಿತು. 2019ರ ಸೆಪ್ಟೆಂಬರ್ 14 ರಂದು ಆಚರಿಸಲಾದ "ಹಿಂದಿ ದಿವಸ್" ಸಂದರ್ಭದಲ್ಲಿ ಹಿಂದಿ ದೇಶದಲ್ಲಿ ಅತಿ ಹೆಚ್ಚು ಮಾತನಾಡುವ ಭಾಷೆಯಾಗಿದ್ದು ಅದೇ ರಾಷ್ಟ್ರಭಾಷೆ ಯಾಗಲು ಸೂಕ್ತ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದರು. ಶೇ 43 ರಷ್ಟು ಜನ ಹಿಂದಿ ಭಾಷಿಕರಿದ್ದಾರೆ ಎನ್ನುವುದು ಒಂದು ಮಿಥ್ಯೆ ಎನ್ನುವುದನ್ನು ಮರೆ ಮಾಚಿದ್ದರು. ಇತ್ತೀಚೆಗೆ ತಂದ ನೂತನ ಶಿಕ್ಷಣ ನೀತಿಯ ಕರಡು ಹಿಂದಿಯೇತರ ರಾಜ್ಯಗಳಲ್ಲಿ 6ನೇ ತರಗತಿಯಿಂದಲೇ ಹಿಂದಿಯನ್ನು ಕಲಿಯುವುದು ಕಡ್ಡಾಯ ಎಂಬ ನೀತಿಯ ಪ್ರಸ್ತಾಪವನ್ನು ಒಳಗೊಂಡಿತ್ತು. ಇವೆಲ್ಲವನ್ನೂ ಅನುಸರಿಸಿ ದೂರದರ್ಶನ, ಆಕಾಶವಾಣಿ, ರೈಲ್ವೆ, ಸಂಪರ್ಕ ಇತ್ಯಾದಿಗಳಲ್ಲಿ ಹಿಂದಿಯನ್ನು ಮತ್ತು ಸಂಸ್ಕೃತವನ್ನು ಪ್ರೋತ್ಸಾಹಿಸುವ ವಿಶಿಷ್ಟ ಕಾರ್ಯಕ್ರಮಗಳು ನಡೆಯುತ್ತಲೇ ಬಂದಿವೆ.

ವಾಸ್ತವದಲ್ಲಿ ಭಾಷೆಯೆನ್ನುವುದು ಭಾವನೆಗಳನ್ನು ಅಭಿವ್ಯಕ್ತಿಸುವ ಒಂದು ಪ್ರಮುಖ ಸಾಧನ. ಅಷ್ಟು ಮಾತ್ರವೇ ಅಲ್ಲ ಭಾಷೆ ಎನ್ನುವುದು ಬದುಕಿನ ಅವಿಭಾಜ್ಯ ಅಂಗವಾಗಿದೆ, ಅದು ಸಮಾಜದ ಸಂಸ್ಕೃತಿಯೂ ಆಗಿದೆ. ಅತ್ಯಂತ ಪ್ರಾಚೀನ ನಾಗರಿಕತೆಯ ದೇಶವಾಗಿರುವ ಭಾರತದಲ್ಲಿ ನೂರಾರು ಭಾಷೆಗಳಿವೆ. ಅದರಲ್ಲಿ 22 ಭಾಷೆಗಳನ್ನು ಮಾತ್ರ ಸಂವಿಧಾನದ 8 ನೆಯ ಷೆಡ್ಯೂಲ್ ಗೆ ಸೇರಿಸಲಾಗಿದೆ. ಕನ್ನಡ, ಮರಾಠಿ, ತೆಲುಗು, ತಮಿಳು, ಮಲೆಯಾಳಿ, ಹಿಂದಿ, ಬಂಗಾಳಿ ಇತ್ಯಾದಿ ಭಾಷೆಗಳೂ ಕೂಡ ಸಮಾನವಾದ ಸ್ಥಾನವನ್ನು ಹೊಂದಿವೆ. ವೈಜ್ಞಾನಿಕವಾಗಿ ಭಾಷೆ ಎನ್ನುವುದು ಆ ಭಾಷಿಕರ ರಾಷ್ಟ್ರೀಯತೆಯೂ ಆಗಿದೆ. ಈ ಅರ್ಥದಲ್ಲಿ ಈ ಎಲ್ಲಾ ಭಾಷೆಗಳೂ ರಾಷ್ಟ್ರೀಯ ಭಾಷೆಗಳಾಗಿವೆ. ನಮ್ಮ ಸಂವಿಧಾನವು ಎಲ್ಲ ಭಾಷೆಗಳಿಗೂ ಸಮಾನವಾದ ಸ್ಥಾನಮಾನವನ್ನು ಕಲ್ಪಿಸಿದೆ. ಯಾವುದೇ ಒಂದು ಭಾಷೆಯನ್ನು ಇಡೀ ದೇಶಕ್ಕೆ ಅನ್ವಯಿಸುವ ರಾಷ್ಟ್ರಭಾಷೆ ಎಂದು ಸಂವಿಧಾನ ಹೇಳಿಲ್ಲ. ವಿಭಿನ್ನ ಭಾಷೆಗಳಿರುವ ಭಾರತದಲ್ಲಿ ವಿವಿಧ ಪ್ರದೇಶಗಳ ಒಕ್ಕೂಟದ ಸರ್ಕಾರಗಳೊಂದಿಗೆ ವ್ಯವಹಾರವನ್ನು ನಡೆಸಲು ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳನ್ನು ಸಂಪರ್ಕಕ್ಕೆ ರಾಜ್ ಭಾಷಾ ಸ್ಥಾನಮಾನವನ್ನು ಸಂವಿಧಾನದ 343, 351 ವಿಧಿಗಳ ಮೂಲಕ ನೀಡಲಾಗಿದೆ.

2010 ರಲ್ಲಿ ಗುಜರಾತ್ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠ ಹಿಂದಿ ಒಂದು ಭಾಷೆಯೇ ಹೊರತು ರಾಷ್ಟ್ರಭಾಷೆ ಅಲ್ಲ ಎಂದು ಸ್ಪಷ್ಟವಾಗಿ ತೀರ್ಪನ್ನು ನೀಡಿದೆ. ಇಷ್ಟೆಲ್ಲಾ ಸ್ಪಷ್ಟತೆ ಇರುವಾಗಲೂ ಪದೇ ಪದೇ ಬಿಜೆಪಿ ಮತ್ತು ಸಂಘ ಪರಿವಾರ ಹಿಂದಿಯನ್ನು ಏಕೈಕ ರಾಷ್ಟ್ರ ಭಾಷೆ ಎನ್ನುವುದಾಗಿ ಪ್ರತಿಪಾದಿಸಿ ಅದನ್ನು ಇಡೀ ದೇಶಕ್ಕೆ ಮೊದಲನೆಯ ಆದ್ಯತೆಯ ಸ್ಥಾನಮಾನವನ್ನು ಕಲ್ಪಿಸಿ ಆಳುವ ಭಾಷೆಯನ್ನಾಗಿ ಮಾಡಲು ಸತತವಾಗಿ ಪ್ರಯತ್ನಿಸುತ್ತಾ ಬರುತ್ತಿದೆ.

ಆಗೀಗ ಎದ್ದು ಬರುವ ಭಾಷಾ ಸ್ಥಾನಮಾನದ ಪ್ರಶ್ನೆ, ಹುಟ್ಟು ಹಾಕಲಾಗುವ ವಿವಾದಗಳು ಮೇಲ್ನೋಟದಲ್ಲಿ ಆಕಸ್ಮಿಕವೆನ್ನುವಂತೆ ಕಂಡು ಬಂದರೂ ಅದರ ಹಿಂದುಗಡೆಯಲ್ಲಿ ಅತ್ಯಂತ ಶಕ್ತಿಯುತವಾದ ಅಜೆಂಡಾ ಅಡಗಿರುವುದನ್ನು ನಿರ್ಲಕ್ಷಿಸಲಾಗದು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಮತ್ತು ಸಂಘ ಪರಿವಾರ ಹಿಂದಿಯನ್ನು ರಾಷ್ಟ್ರಭಾಷೆ ಎಂದು ಅದನ್ನು ಅನುಸರಿಸಲು ಒತ್ತಾಯಿಸುವುದರ ಹಿಂದೆ ಅದರ ಸ್ಪಷ್ಟ ಕಾರ್ಯಸೂಚಿ ಇದೆ. ಹಿಂದಿ ಭಾಷೆಗೆ 120 ವರ್ಷಗಳ ಇತಿಹಾಸವಿದೆ ಎನ್ನಲಾಗುತ್ತದೆ. ಆದರೆ ಇತರೆ ಭಾರತೀಯ ಭಾಷೆಗಳು ಸಾವಿರಾರು ವರ್ಷಗಳ ಇತಿಹಾಸದಲ್ಲಿ ವಿಕಸನಗೊಂಡಿವೆ. ಭಾರತದ ವೈಶಿಷ್ಟತೆಯಾಗಿರುವ ಭಾಷಾ ವೈವಿಧ್ಯತೆಯನ್ನು ನಾಶಗೊಳಿಸಿ ಏಕಭಾಷೆಯನ್ನು ಹೇರುವುದರ ಹಿಂದೆ ಫ್ಯಾಸಿಸ್ಟ್ ಮಾದರಿಯ ಆರ್ಥಿಕ, ಅದಕ್ಕೆ ಹೊಂದಿಕೊಂಡ ಸಾಂಸ್ಕೃತಿಕ ಚಿಂತನೆಯಿದೆ. ಒಂದೇ ರಾಷ್ಟ್ರ ಒಂದೇ ಭಾಷೆ ಎನ್ನುವುದು ಹಿಂದಿ,ಹಿಂದು–ಹಿಂದುಸ್ಥಾನ್, ಹಿಂದುತ್ವ ಎನ್ನುವ ಕೋಮುವಾದಿ ಫ್ಯಾಶಿಸ್ಟ್ ಚಿಂತನೆಯೊಂದಿಗೆ ಬೆಸೆದಿದೆ. ಒಂದೇ ದೇಶ, ಒಂದೇ ಭಾಷೆ ಎನ್ನುವ ವಾದವೂ ವೈವಿಧ್ಯತೆ ಮತ್ತು ವೈಶಿಷ್ಟತೆಗಳನ್ನು

ಪುಟ 4 ಕ್ಕೆ

ಶಿಕ್ಷಕರ ನೇಮಕಾತಿ ಇದೆಂಥ ತಾರತಮ್ಯದ ನೀತಿ?

ಎಸ್.ವೈ. ಗುರುಶಾಂತ್

ಕರ್ನಾಟಕದ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸುಮಾರು 27000 ಹುದ್ದೆಗಳಿಗೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ. ಶಿಕ್ಷಕರ ನೇಮಕಾತಿ ಅತ್ಯಂತ ತುರ್ತಾಗಿ ಆಗಬೇಕಾದ ಕೆಲಸ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಈಗ ನೇಮಕಾತಿ ಮಾಡಿಕೊಳ್ಳುತ್ತಿರುವುದು ಕಾಯಂ ನೌಕರಿಯಲ್ಲ, ಬದಲಾಗಿ ಯಾವಾಗ ಬೇಕಾದರೂ ಕಿತ್ತೆಸೆಯ ಬಹುದಾದ ಗುತ್ತಿಗೆ ಆಧಾರದಲ್ಲಿ. ಅದೂ ಒಂದು ವರ್ಷವಂತೆ. ಖಾಯಂ ಶಿಕ್ಷಕರ ನೇಮಕಾತಿ ಆಗವವರೆಗೆ!

ಈ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಗೌರವಧನ ರೂ. 7500, ಹೈಸ್ಕೂಲ್ ಶಿಕ್ಷಕರಿಗೆ ರೂ. 8,000 ವೇತನ ನಿಗದಿಯಂತೆ!. ಅಂದರೆ ಶಿಕ್ಷಕರಿಗೆ ಸಿಗುವ ದಿನಗೂಲಿ ರೂ. 250 ಗಳು ಮಾತ್ರ. ಹೈಸ್ಕೂಲ್ ಶಿಕ್ಷಕರಿಗೆ ತಿಂಗಳಿಗೆ ಹೆಚ್ಚುವರಿ ರೂ. 500 ಅಷ್ಟೇ!

ಸಧೃಡ, ಸಮೃದ್ಧ ಭಾರತವನ್ನು ನಿರ್ಮಾಣ ಮಾಡಲು ಮಾನವ ಸಂಪನ್ಮೂಲ ಅತ್ಯಂತ ಅಗತ್ಯ ಸಮಾಜದ ಬೆಳವಣಿಗೆಗೆ ಶಿಕ್ಷಣ ಅತ್ಯಂತ ಪ್ರಮುಖ ಸಾಧನ ಶಿಕ್ಷಣದ ಮಹತ್ವ ಅದರಲ್ಲೂ ಪ್ರಾಥಮಿಕ ಶಿಕ್ಷಣದ ಮಹತ್ವದ ಕುರಿತು ಸರ್ಕಾರದ ಮಂತ್ರಿಗಳು, ಮುಖ್ಯಮಂತ್ರಿಗಳು, ಸ್ವಯಂ ಸೇವಕರು ದಿನಗಟ್ಟಲೇ ಮಾತನಾಡಬಲ್ಲವರು! ಶಿಕ್ಷಕರ ಹುದ್ದೆ ಅವರ ಪಾತ್ರವನ್ನು ಕೊಂಡಾಡದವರು ಯಾರೂ ಇರಲಿಕ್ಕಿಲ್ಲ. ಅದರಲ್ಲೂ ಬಿಜೆಪಿ ಆರೆಸ್ಸೆಸ್ಸಿಗರು ವರುಷಕ್ಕೊಮ್ಮೆ ಚಾಚೂ ತಪ್ಪದಂತೆ ಗುರುವಂದನೆಯನ್ನು ಅದ್ದೂರಿಯಾಗಿ ನಡೆಸುತ್ತಾರೆ! ಮುಚ್ಚಿದ ಲಕೋಟೆಯಲ್ಲಿ ಭರ್ಜರಿ ಕಾಣಿಕೆ ಕೊಡಿಸುತ್ತಾರೆ! ಗುರುಗಳ ಮಹಿಮೆಯನ್ನು ಕೊಂಡಾಡುತ್ತಾರೆ! ಆದರೆ ಅವರೇ ನಡೆಸುವ ಶಾಲೆಗಳಲ್ಲಿ ಇಂತಹ ಗುರುಗಳು ಬದುಕಲು ಕನಿಷ್ಠವಾದ ಅಗತ್ಯವಿರುವ ಸಂಬಳ ಸೌಲಭ್ಯಗಳು ಇರುವುದಿಲ್ಲ ಎನ್ನುವುದು ಜನಜನಿತ. ಆದರೆ ಇವರಿಗೆ ಪುಕ್ಕಟೆ ಪ್ರಶಂಸೆ ಮತ್ತು ಗುರುವಿನ ಪಾತ್ರದ ಮಹಾನ್ ಮಹಿಮೆಗಳನ್ನು ಕೊಂಡಾಡುವ ಮಾತುಗಳಿಗೆ ಅಲ್ಲೇನು ಬರವಿಲ್ಲ.

ಈ ವಾರ

ಇಂದು ಮನುಷ್ಯನೊಬ್ಬ ಬದುಕಬೇಕೆಂದರೆ ಕನಿಷ್ಠ ಪ್ರಮಾಣದ ಆಹಾರವನ್ನು ಸೇವಿಸುವುದು ಮತ್ತು ಆರೋಗ್ಯ, ಬಟ್ಟೆ, ವಸತಿ ಇಂತಹ ಕನಿಷ್ಠ ಮೂಲಸೌಲಭ್ಯಗಳನ್ನು ಉಳಿಸಿಕೊಳ್ಳಬೇಕೆಂದರೆ ಕನಿಷ್ಠ ರೂ. 26000 ಕೊಡಬೇಕು, ಬೆಂಗಳೂರಿನಂತಹ ಕಡೆ ಇನ್ನೂ ಹೆಚ್ಚು ಕೊಡಬೇಕು ಎನ್ನುವುದು ಶಿಫಾರಸು. ಬೆಲೆ ಏರಿಕೆಯ ದಿನಗಳಲ್ಲಿ ನಿ ಜ ಆದಾಯ ಕುಸಿಯುತ್ತಾ ಹೋಗುವಾಗ ಖರ್ಚುವೆಚ್ಚಗಳು ಹೆಚ್ಚುತ್ತಿರುವಾಗ ಇಂತಹ ಅಂದಾಜು ಸಹ ಅತ್ಯಂತ ಬೇಗನೆ ಬದಲಾಗಿ ಬಿಡುತ್ತದೆ. ಇಂತಹ ಜೀವನಕ್ಕೆ ಅಗತ್ಯವಾದ ಕನಿಷ್ಠ ವೇತನವನ್ನು ಕೊಡಬೇಕಾದ ಸರ್ಕಾರ ಕಡಿಮೆ ವೇತನವನ್ನು ಕೊಟ್ಟು ಹೆಚ್ಚು ದುಡಿಸಿಕೊಳ್ಳುವ ನೀತಿ ಅಮಾನವೀಯ, ಖಂಡನೀಯ.

ನಿರುದ್ಯೋಗ, ಬಡತನದಿಂದ ಬಳಲುತ್ತಿರುವ ಯುವಕ–ಯುವತಿಯರ ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಳ್ಳುವ ದುಷ್ಟ ಚಿಂತನೆಯನ್ನು ಸರ್ಕಾರ ಮಾಡುತ್ತಿದೆ. ಶಿಕ್ಷಣ ಒಂದು ಅತ್ಯಂತ ಪ್ರಾಶಸ್ತ್ಯದ ಕ್ಷೇತ್ರವಾಗಿರುವಾಗ ಹೆಚ್ಚಿನ ಹಣ ಹೂಡಿಕೆ ಮಾಡಿ ಉತ್ತಮ ಶಿಕ್ಷಣವನ್ನು ದೊರೆಯುವಂತೆ ಮಾಡಬೇಕಾದುದು ಸರ್ಕಾರದ ಮುಖ್ಯ ಕರ್ತವ್ಯ. ಅತ್ಯಂತ ಕಡಿಮೆ ಕೂಲಿಯನ್ನು ಕೊಟ್ಟು ದುಡಿಸಿಕೊಳ್ಳುವುದಾದಲ್ಲಿ ಅದೆಂತಹ ಗುಣಮಟ್ಟದ ಬೋಧನೆಯನ್ನು ಮಾಡಲಿಕ್ಕೆ ಸಾಧ್ಯ? ಸರ್ಕಾರಿ ಶಾಲೆಗಳಿಗೆ ಸೇರುವ ಮಕ್ಕಳ ಗುಣಮಟ್ಟ ಕುಸಿದಿರುವ ಸ್ಥಿತಿಯಲ್ಲಿ ಅಂತಹ ವ್ಯವಸ್ಥೆಯನ್ನು ಸರ್ಕಾರವೇ ಮತ್ತಷ್ಟು ಕುಸಿಯುವ ಸಂದರ್ಭ ಕಲ್ಪಿಸಿ ಕೊಡುತ್ತದೆ ಎಂದರೆ ಏನರ್ಥ? ಹೊಸ ಶಿಕ್ಷಣದ ನೀತಿಯ ಹೆಸರಿನಲ್ಲಿ ಶಿಕ್ಷಣವನ್ನೇ ಇಲ್ಲವಾಗಿಸುವ ಈ ನೀತಿ ಜನ ವಿರೋಧಿಯಾಗಿದೆ. ಕೂಡಲೇ ಸರ್ಕಾರ ತನ್ನ ನೀತಿಯನ್ನು ಬದಲಿಸಿ ಸೂಕ್ತವಾದ ವೇತನದೊಂದಿಗೆ ಖಾಯಮ್ಮಾಗಿ ಅಗತ್ಯವಿರುವ ಶಿಕ್ಷಕರನ್ನು ನೇಮಿಸಿಕೊಳ್ಳಬೇಕು. ಮಕ್ಕಳ ಶಿಕ್ಷಣದ ಹಕ್ಕನ್ನು, ಶಿಕ್ಷಣದ ಗುಣಮಟ್ಟವನ್ನು ರಕ್ಷಿಸಬೇಕು.

ಸಬ್ ಇನ್ಸ್ಪೆಕ್ಟರ್ ನೇಮಕಾತಿ ಹಗರಣ ಭಂಡತನ ತೋರುತ್ತಿರುವ ಸರಕಾರ!

545 ಸಬ್ ಇನ್ಸ್ಪೆಕ್ಟರ್ ಗಳ ನೇಮಕದ ಹಗರಣ ಪ್ರತಿದಿನವೂ ಹೊಸ ತಿರುವುಗಳನ್ನು ಪಡೆದುಕೊಳ್ಳುತ್ತಿದೆ. ಈ ಹಗರಣದ ತನಿಖೆ ಮುಂದುವರಿದಿರುವಾಗಲೇ ಭಾಗಿಯಾಗಿರುವ ಪ್ರಮುಖ ಆರೋಪಿಗಳನ್ನು ಸರ್ಕಾರವೇ ರಕ್ಷಿಸುತ್ತಿದೆ ಎನ್ನುವ ಆರೋಪಗಳು ದಟ್ಟವಾಗಿ ಕೇಳಿಬರುತ್ತಿವೆ. ಮುಖ್ಯವಾಗಿ, ಬಿಜೆಪಿಯ ನಾಯಕಿ ದಿವ್ಯಾ ಹಾಗರಗಿ ಯನ್ನು ಕ್ಷಿಪ್ರವಾಗಿ ಬಂಧಿಸದೇ ವಿಳಂಬಿಸಿದ್ದು ನಿರೀಕ್ಷಣಾ ಜಾಮೀನು ಸಿಗಲೆಂದೇ ಎಂದು ಹೇಳಲಾಗುತ್ತಿದೆ. ಕೊನೆಗೆ ದಿವ್ಯಾ ಅವರು ಅವರ ಅತ್ಯಂತ ನಿಕಟವಾಗಿರುವ ಉದ್ಯಮಿಯೊಬ್ಬರ ಮನೆಯಲ್ಲಿಯೇ ಸಿಕ್ಕಿಬಿದ್ದಿದ್ದಾರೆ. ಉಳಿದಂತೆ ಇನ್ನು ಕೆಲವರನ್ನು ಬಂಧಿಸಿದ್ದಾರೆ. ಈ ಹಂತದ ತನಿಖೆಯಲ್ಲಿ ಭಾರೀ ಅಕ್ರಮಗಳು ನಡೆದಿರುವುದು ನಿಚ್ಚಳವಾಗಿ ಕಂಡಿದೆ. ಅದರಿಂದಾಗಿ ಸರ್ಕಾರ ಈಗ ನಡೆದಿದ್ದ ಪರೀಕ್ಷೆಗಳನ್ನು ರದ್ದುಪಡಿಸಿ ಹೊಸದಾಗಿ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಿದೆ. ಜೊತೆಗೆ ಅಂದು ಹಿರಿಯ ಪೊಲೀಸ್ ಅಧಿಕಾರಿಯಾಗಿದ್ದ ಪಾಲ್ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಲಾಗಿದೆ. ಈ ಮೂಲಕ ಅನಿವಾರ್ಯವಾಗಿ ಇದೊಂದು ಬಹುದೊಡ್ಡ ಹಗರಣ ಎನ್ನುವುದನ್ನು ಮೊದಲ ಹಂತದಲ್ಲಿಯೇ ಸರ್ಕಾರ ಒಪ್ಪಿಕೊಂಡಿದೆ.

ಈ ಹಗರಣದಲ್ಲಿ ಕೇವಲ ಉನ್ನತ ಅಧಿಕಾರಿಗಳು ಮಾತ್ರವಲ್ಲ, ಗೃಹಮಂತ್ರಿಗಳು ಮತ್ತು ಸರ್ಕಾರದ ಇನ್ನಿತರೆ ಅತ್ಯಂತ ಆಯಕಟ್ಟಿನ ಜಾಗದಲ್ಲಿರುವ ಪ್ರಮುಖ ರಾಜಕಾರಣಿಗಳು, ಅಧಿಕಾರಿಗಳು ಶಾಮೀಲಾಗಿರುವುದು ತೋರಿಸುತ್ತಿವೆ. ವಿಚಿತ್ರವೆಂದರೆ ಇಂತಹ ಆರೋಪದ ಸುಳಿಯಲ್ಲಿರುವ ಗೃಹಸಚಿವರ ನೇತೃತ್ವದಲ್ಲಿ ಪೊಲೀಸ್ ತಂಡಗಳು ವಿಚಾರಣೆ ನಡೆಸುತ್ತಿವೆ! ಅಂದರೆ ಈ ವಿಚಾರಣೆ ಮುಂದಿನ ದಿನಗಳಲ್ಲಿ ಯಾವ ರೀತಿಯಲ್ಲಿ ಸಾಗಬಹುದು ಎನ್ನುವ ಅನುಮಾನಕ್ಕೆ ಎಡೆ ಮಾಡಿದೆ. ಕನಿಷ್ಠ ಗೃಹ ಸಚಿವರು ರಾಜೀನಾಮೆ ಕೊಡಬೇಕಾದದ್ದು ನೈತಿಕ ಕರ್ತವ್ಯ. ಆದರೆ ಅಂತಹ ಯಾವ ಲಕ್ಷಣಗಳನ್ನು, ಸಂವೇದನೆಗಳನ್ನು ಈ ಸರ್ಕಾರ ತೋರಿಸುತ್ತಿಲ್ಲ. ಹೋಗಲಿ ಮುಖ್ಯಮಂತ್ರಿಗಳಾದರೂ ನಿಸ್ಸಂಶಯವಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ ರವರ ರಾಜೀನಾಮೆಯನ್ನು ಪಡೆಯಬೇಕಾದದ್ದು ಕೂಡ ಮುಖ್ಯವಾದ ಹೊಣೆಗಾರಿಕೆಯಾಗಿದೆ. ಆದರೆ ಅಂತಹ ಯಾವ ಸೂಚನೆಯೂ ಬೊಮ್ಮಾಯಿಯವರಲ್ಲಿ ಕಾಣುತ್ತಿಲ್ಲ. ಹೀಗಾಗಿ ಇಡೀ ಪ್ರಕರಣ ನಿಷ್ಪಕ್ಷಪಾತವಾಗಿ ನಡೆದು ಸತ್ಯ ಹೊರ ಬರುವಂತಾಗಲು ಸಚಿವರ ರಾಜೀನಾಮೆಯನ್ನು ಪಡೆಯಬೇಕು ಮತ್ತು ಇದರ ತನಿಖೆಯ ಹೊಣೆಗಾರಿಕೆಯನ್ನು ಬೇರೆ ಸಂಸ್ಥೆಗಳಿಗೆ ಮುಖ್ಯವಾಗಿ ನ್ಯಾಯಾಧೀಶರ ನೇತೃತ್ವದಲ್ಲಿ ನಡೆಸಬೇಕು.

ತಾರತಮ್ಯಕ್ಕೊಳಗಾದವರ ಮೀಸಲಾತಿ ರಕ್ಷಿಸಿರಿ ಮತ್ತು ಜನಸಂಖ್ಯೆಗನುಗುಣವಾಗಿ ವಿಸ್ತರಿಸಿರಿ-ಸಿಪಿಐ(ಎಂ)

ಕೇಂದ್ರ ಹಾಗೂ ರಾಜ್ಯ ಸರಕಾರಗಳ ತಾರತಮ್ಯಕ್ಕೊಳಗಾದವರ ವಿರೋಧಿ ನೀತಿಗಳಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳು ಅವರ ಮೀಸಲಾತಿ ಸೌಲಭ್ಯಗಳನ್ನು ವ್ಯಾಪಕವಾಗಿ ಕಿತ್ತುಕೊಂಡಿವೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ದುರ್ಬಲರ ಶಿಕ್ಷಣದ ಹಕ್ಕನ್ನು ಕಿತ್ತುಕೊಳ್ಳಯತ್ತಿದ್ದರೇ, ಖಾಲಿ ಇರುವ ದಶಲಕ್ಷಾಂತರ ಸರಕಾರಿ ನೌಕರಿಗಳನ್ನು ತುಂಬದೇ ಇರುವ ಮತ್ತು ಗುತ್ತಿಗೆ ಆಧಾರದಲ್ಲಿ ಕಡಿಮೆ ವೇತನಕ್ಕೆ ದುಡಿಸಿಕೊಳ್ಳುವ ಲೂಟಿಕೋರ ನೀತಿಯು ಹಾಗೂ ಸಾರ್ವಜನಿಕ ಉದ್ದಿಮೆಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸಿಕೊಡುವ ನೀತಿಗಳು ಅವರ ಉದ್ಯೋಗಾವಕಾಶಗಳನ್ನು ಕಿತ್ತುಕೊಂಡಿವೆ.

ಭೂಸುಧಾರಣಾ ತಿದ್ದುಪಡಿ ಕಾಯ್ದೆ-2020, ಎಪಿಎಂಸಿ ತಿದ್ದುಪಡಿ ಕಾಯ್ದೆ-2020, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ-2020 ಮತ್ತು ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ ಇವುಗಳು, ಇವರ ಹೊಟ್ಟೆಯ ಮೇಲೆ ಹಾಗೂ ಬದುಕುವ ಹಕ್ಕಿನ ಮೇಲೆ ಹೊಡೆದಿವೆ.

ಖಾಸಗೀ ಉದ್ಯಮಗಳಿಗೆ ಸರಕಾರ ಭೂಮಿ, ನೀರು ವಿದ್ಯುತ್, ಐದು ವರ್ಷಗಳ ಕಾಲ ಬಡ್ಡಿ ಇರದ ಸಾವಿರಾರು ಕೋಟಿ ರೂ.ಗಳ ಸಾರ್ವಜನಿಕ ಬ್ಯಾಂಕುಗಳ ಸಾಲ, ತೆರಿಗೆ ರಿಯಾಯಿತಿ ಮುಂತಾಗಿ ನೀಡಿದರೂ ಉದ್ಯೋಗದಲ್ಲಿ ಮೀಸಲಾತಿಗೆ ಕ್ರಮವಹಿಸುತ್ತಿಲ್ಲ

ಈ ಎಲ್ಲ ಕಾಯ್ದೆಗಳನ್ನು ವಾಪಾಸು ಪಡೆಯದೇ ದುರ್ಬಲ ಹಾಗೂ ತಾರತಮ್ಯಕ್ಕೊಳಗಾದ ಜನತೆಯ ಬದುಕುವ ಹಕ್ಕನ್ನು ಮತ್ತು ಮೀಸಲಾತಿ ಹಕ್ಕನ್ನು ಉಳಿಸಿಕೊಳ್ಳಲಾಗದು. ಆದ್ದರಿಂದ ತಕ್ಷಣವೇ ಈ ನೀತಿಗಳನ್ನು ವಾಪಾಸು ಪಡೆಯುವಂತೆ ಮತ್ತು ತಾರತಮ್ಯಕ್ಕೊಳಗಾದ ದುರ್ಬಲರ ಮೀಸಲಾತಿಯನ್ನು ಸಂರಕ್ಷಿಸುವಂತೆ ಖಾಸಗಿ ರಂಗಕ್ಕೂ ವಿಸ್ತರಿಸುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಅದೇ ಸಂದರ್ಭದಲ್ಲಿ ಈ ದುರ್ಬಲ ಹಾಗೂ ತಾರತಮ್ಯಕ್ಕೊಳಗಾದ ಜನ ಸಮುದಾಯಗಳ ಜನಸಂಖ್ಯೆಗನುಗುಣವಾದ ಅನುದಾನವನ್ನು ಬಜೆಟ್ ನಲ್ಲಿ ಒದಗಿಸಬೇಕು ಮತ್ತು ಜನ ಸಂಖ್ಯೆಗನುಗುಣವಾಗಿ ಮೀಸಲಾತಿ ಸೌಲಭ್ಯವನ್ನು ವಿಸ್ತರಿಸುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಕರ್ನಾಟಕ ಸರಕಾರ ಈಗಾಗಲೇ ಸರಕಾರಕ್ಕೆ ಸಲ್ಲಿಸಲಾಗಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನಸಂಖ್ಯೆ ಅನುಗುಣವಾಗಿ ಮೀಸಲಾತಿಯನ್ನು ಹೆಚ್ಚಿಸುವ ಸಂಬಂಧದ ಜ. ನಾಗಮೋಹನ್ ದಾಸ್ ರವರ ವರದಿಯನ್ನು ಅಂಗೀಕರಿಸದೇ ಅಥವಾ ತಿರಸ್ಕರಿಸದೇ, ಆ ಕುರಿತು ಏನೊಂದು ಕ್ರಮವಹಿಸದೇ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನತೆಯ ವಿರೋಧವಾದ ಉದಾಸೀನ ನೀತಿಯನ್ನು ಅನುಸರಿಸುತ್ತಿರುವುದನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ. ಕೂಡಲೇ ಜ. ನಾಗಮೋಹನ್ ದಾಸ್ ವರದಿಯ ಕುರಿತ ಸರಕಾರದ ಅಭಿಪ್ರಾಯವನ್ನು ಮತ್ತು ವರದಿಯನ್ನು ಬಹಿರಂಗ ಪಡಿಸುವಂತೆ ಬಲವಾಗಿ ಒತ್ತಾಯಿಸಿದೆ.

SC-ST ಮೀಸಲಾತಿ ಹೆಚ್ಚಳಕ್ಕಾಗಿ ನಡೆದಿರುವ ಹೋರಾಟಕ್ಕೆ ಸಿಪಿಐಎಂ ಬೆಂಬಲ


ಈ ಕುರಿತು ರಾಜ್ಯದಾದ್ಯಂತ ನಡೆದಿರುವ, ಕರ್ನಾಟಕ ರಾಜ್ಯ ಸ್ವಾಭಿಮಾನಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿಯ ಚಳುವಳಿಯನ್ನು ಸಿಪಿಐ(ಎಂ) ಬೆಂಬಲಿಸುತ್ತದೆ ಮಾತ್ರವಲ್ಲಾ, ಸದರಿ ಹೋರಾಟ ಸಮಿತಿಯು ಮೀಸಲಾತಿಯನ್ನು ಇಲ್ಲದಂತೆ ಮಾಡುವ ಕಾಯ್ದೆಗಳನ್ನು ವಾಪಾಸು ಪಡೆಯುವಂತೆ ಒತ್ತಾಯಿಸಲು ಆ ಹಕ್ಕೊತ್ತಾಯಗಳನ್ನು ಹಕ್ಕೊತ್ತಾಯಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡಿಕೊಳ್ಳುವಂತೆ ವಿನಂತಿಸಿದೆ.

ಶಿಕ್ಷಣ ಹಾಗೂ ಉದ್ಯೋಗ ಹಾಗೂ ಬದುಕನ್ನು ಕಟ್ಟಿ ಕೊಡದ ಮೀಸಲಾತಿ ಯಿಂದ ಜನ ಸಾಮಾನ್ಯರಿಗೇನು ಪ್ರಯೋಜನವಾಗದೆಂಬುದನ್ನು ಇಲ್ಲಿ ನಾವು ಗಮನಿಸಬೇಕಿದೆ ಗಮನಿಸಬೇಕಿದೆ ಎಂದು ಕಾರ್ಯದರ್ಶಿ ಯು. ಬಸವರಾಜ್ ರವರು ತಿಳಿಸಿದ್ದಾರೆ.

ಕಾರ್ಮಿಕ ದಿನಾಚರಣೆ ಮೆರವಣಿಗೆ ನಿಷೇಧಿಸಿ ತೀರ್ಪು: ಸುಪ್ರೀಂ ಕೋರ್ಟ್ ನ ವಿಶ್ರಾಂತ ನ್ಯಾಯಮೂರ್ತಿ ವಿ. ಗೋಪಾಲಗೌಡ ತೀವ್ರ ವಿರೋಧ

ಮೇ 1 ವಿಶ್ವ ಕಾರ್ಮಿಕ ದಿನಾಚರಣೆ. ಕಾರ್ಮಿಕರ ಹಕ್ಕುಗಳನ್ನು ಹೋರಾಟದ ಮೂಲಕ ಪಡೆದುಕೊಂಡ ವಿಜಯ ದಿನ. ವಿಶ್ವದೆಲ್ಲೆಡೆ ಕಾರ್ಮಿಕರೆಲ್ಲೂ ಹೋರಾಟದ ದಿನವನ್ನಾಗಿಯೇ ಇಂದು ಆಚರಣೆ ಮಾಡುತ್ತಾರೆ. ಆದರೆ, ಕರ್ನಾಟಕದ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಕಾರ್ಮಿಕ ದಿನದ ಮೆರವಣಿಗೆ ನಡೆಸಲು ಅವಕಾಶವಿಲ್ಲವೆಂದು ಹೈಕೋರ್ಟ್ ನೀಡಿರುವ ತೀರ್ಪು ಹೋರಾಟಗಳನ್ನು ಉದ್ದೇಶಪೂರ್ವಕವಾಗಿ ದುರ್ಬಲಗೊಳಿಸುತ್ತದೆ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಹೇಳಿದ್ದಾರೆ.

ಮೇ 1 ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ಶಾಂತಿಯುತ ಮೆರವಣಿಗೆ ನಡೆಸಲು ಅನುಮತಿ ಕೋರಿ ಕಾರ್ಮಿಕ ಸಂಘಟನೆಗಳು ಕರ್ನಾಟಕ ಹೈಕೋರ್ಟ್‌ನಲ್ಲಿ ಮನವಿ ಮಾಡಿದ್ದವು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ದೇವದಾಸ್ ಮತ್ತು ನ್ಯಾಯಮೂರ್ತಿ



ಕೆ.ಎಸ್. ಹೇಮಲೇಖಾ ಅವರ ನ್ಯಾಯಪೀಠ, "2022 ಮಾರ್ಚ್ 3 ರ ಆದೇಶದಲ್ಲಿ ಸ್ವಾತಂತ್ರ್ಯ ಉದ್ಯಾನವನ ಹೊರತುಪಡಿಸಿ ನಗರದ ಯಾವುದೇ ಭಾಗದಲ್ಲಿ ಪ್ರತಿಭಟನೆ ಅಥವಾ ಮೆರವಣಿಗೆಗಳನ್ನು ನಡೆಸದಂತೆ ರಾಜ್ಯ ಸರ್ಕಾರದ ಸ್ಪಷ್ಟ ನಿರ್ದೇಶನವಿದೆ. ಈ ನಿರ್ದೇಶನದ ಅನುಸಾರ ಮೆರವಣಿಗೆಗೆ ಅನುಮತಿ ನೀಡಲು ಸಾಧ್ಯವಿಲ್ಲ" ಎಂದು ಹೇಳಿ ತೀರ್ಪು ನೀಡಿತ್ತು.

ತೀರ್ಪಿನ ಬಗ್ಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಪತ್ರದ ಮೂಲಕ ವಿರೋಧಿಸಿದ್ದಾರೆ.

ಗೋಪಾಲಗೌಡ ರವರ ಪತ್ರದ ವಿವರ ಹೀಗಿದೆ:

ಕಾರ್ಮಿಕರ ಹೋರಾಟ ಗುರುತಿಸಲು ಮತ್ತು ಅವರ ಹಕ್ಕುಗಳು ಮತ್ತು ಜೀವನೋಪಾಯವನ್ನು ಭದ್ರಪಡಿಸಲು ಪ್ರಪಂಚದಾದ್ಯಂತ ಅನೇಕ ದೇಶಗಳಲ್ಲಿ ಪ್ರತಿ ವರ್ಷ ಮೇ 1 ರಂದು ಅಂತಾರಾಷ್ಟ್ರೀಯ ಕಾರ್ಮಿಕ ದಿನ ಅಥವಾ ಮೇ ದಿನವನ್ನು ಆಚರಿಸಲಾಗುತ್ತದೆ. ಕಾರ್ಮಿಕರು ಇತಿಹಾಸದುದ್ದಕ್ಕೂ ತುಳಿತಕ್ಕೊಳಗಾಗುತ್ತಲೇ ಬಂದಿದ್ದಾರೆ.

ಶತಮಾನಗಳಿಗೂ ಹೆಚ್ಚು ಕಾಲ ನಡೆದಿರುವ ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧ ಈಗ ಹೋರಾಡಬೇಕಾಗಿದೆ. ಮಾರುಕಟ್ಟೆ ಶಕ್ತಿಗಳು ಮತ್ತು ಮಾಲಕರ ಪರವಾಗಿ ವಾಲಿದ ಅಧಿಕಾರದ ಅಸಮತೋಲನವು ಕಾರ್ಮಿಕರನ್ನು ಶೋಷಣೆಗೆ ಗುರಿಪಡಿಸುತ್ತಲೇ ಇದೆ. ಮೇ ದಿನ ಅಥವಾ ಕಾರ್ಮಿಕ ದಿನವನ್ನು ಪ್ರತಿ ವರ್ಷವೂ ಆಚರಿಸಲಾಗುತ್ತದೆ. ಕಾರ್ಮಿಕರ ಹಕ್ಕುಗಳು ಚಳವಳಿಗಳಲ್ಲಿ ಅಡಗಿವೆ. ಕಾರ್ಮಿಕರಿಗೆ ಸಾಧಿಸಬೇಕಾದದ್ದನ್ನು ಪ್ರತಿಬಿಂಬಿಸಲು ಮತ್ತು ವಿಶ್ಲೇಷಿಸಲು ಈ ಹಕ್ಕುಗಳು ಬೇಕಿವೆ.

ಹೈಕೋರ್ಟ್ ಜಾರಿಗೊಳಿಸಿದ ಆದೇಶವು ಭಾರತದ ಸಂವಿಧಾನದ 19ನೇ ಪರಿಚ್ಛೇದದ ಅಡಿಯಲ್ಲಿ ಖಾತರಿಪಡಿಸಲಾದ ಶಾಂತಿಯುತ ಸಭೆಯ ಸ್ವಾತಂತ್ರ್ಯದ ಹಕ್ಕಿನ ಹೃದಯಭಾಗಕ್ಕೇ ಪೆಟ್ಟು ನೀಡಿದೆ. ಇದು ಮಧು ಲಿಮಾಯೆ ವಿರುದ್ಧ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ (1970) ರ ಪ್ರಸಿದ್ಧ ತೀರ್ಪು ಸೇರಿದಂತೆ, ಈ ವಿಷಯದ ಕುರಿತು ಸುಪ್ರೀಂ ಕೋರ್ಟ್‌ನ ಶ್ರೀಮಂತ ನ್ಯಾಯಶಾಸ್ತ್ರವನ್ನು ನಿರ್ಲಕ್ಷಿಸಿ 'ಸಾರ್ವಜನಿಕ ಆದೇಶ' ಎಂಬ ಪದಗುಚ್ಛದ ಸರಳವಾದ ನೋಟವನ್ನು ತೆಗೆದುಕೊಳ್ಳುತ್ತದೆ. ಪ್ರತಿಭಟಿಸುವ ಮೂಲಭೂತ ಹಕ್ಕು ಮತ್ತು ಶಾಂತಿಯುತ ಸಭೆಗಳ ಹಕ್ಕನ್ನು ಎತ್ತಿ ಹಿಡಿಯುವ ಕಾಳಜಿಯು ಪ್ರಯಾಣಿಕರಿಗೆ ಮತ್ತು ವಾಹನ ಚಾಲಕರಿಗೆ ಉಂಟಾಗಬಹುದಾದ ಯಾವುದೇ ಕಲ್ಪಿತ ಅನಾನುಕೂಲತೆಗಿಂತ ಮೀರಿದ ಆದ್ಯತೆಯನ್ನು ಹೊಂದಿರಬೇಕು. ಇದನ್ನು ಸಾಂವಿಧಾನಿಕ ನ್ಯಾಯಾಲಯಗಳು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಕಾರ್ಮಿಕ ದಿನಾಚರಣೆ ಸ್ಮರಿಸುವ ಮೆರವಣಿಗೆಯನ್ನು ನಿಲ್ಲಿಸುವುದು ಇಡೀ ಚಳವಳಿಯ ಮಹತ್ವವನ್ನು ಕಡೆಗಣಿಸುತ್ತದೆ ಮತ್ತು ಕಾರ್ಮಿಕರ ಹೋರಾಟಗಳನ್ನು ದುರ್ಬಲಗೊಳಿಸುತ್ತದೆ. ಸ್ವಾತಂತ್ರ್ಯದ 75 ವರ್ಷಗಳ ಹೊರತಾಗಿಯೂ, ಸ್ವತಂತ್ರ ಭಾರತದಲ್ಲಿ ಕಾರ್ಮಿಕರು ಎರಡನೇ ದರ್ಜೆಯ ಪ್ರಜೆಗಳಾಗಿಯೇ ಉಳಿದಿದ್ದಾರೆ ಎಂಬ ಕಟುವಾದ ವಾಸ್ತವವನ್ನು ಇದು ಮತ್ತೊಮ್ಮೆ ನೆನಪಿಸಿದೆ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ರವರು ಬರೆದಿದ್ದಾರೆ.

ಭಾಷಾ ಯಜಮಾನಿಕೆಯ ಹೇರಿಕೆ ಕೂಡದು....... ಪುಟ 3 ರಿಂದ

ಒಳಗೊಂಡಿರುವ ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ನಾಶ ಮಾಡುವಂತಹುದಾಗಿದೆ. ಪ್ರಭುತ್ವದ ಬಲದೊಂದಿಗೆ ಒಂದೇ ಭಾಷೆಯ ಯಜಮಾನಿಕೆಯ ದುರಾಕ್ರಮಣವು ಯಾವುದೇ ಒಂದು ಸಶಕ್ತ ಭಾಷೆಯನ್ನೂ ನಾಶಪಡಿಸಬಹುದು. ಒಂದು ಭಾಷೆಯ ಸಾವು ಜನಸಮುದಾಯದ ಅಂತಸ್ಸತ್ವದ ಸಾವು ಕೂಡ ಆಗಿರುತ್ತದೆ. ಹಾಗೆ ನೋಡಿದರೆ ಭಾರತದಲ್ಲಿ 750 ಕ್ಕಿಂತಲೂ ಹೆಚ್ಚಿಗಿದ್ದ ಭಾಷೆಗಳಲ್ಲಿ ಆಳುವವರ ನಿರ್ಲಕ್ಷತೆ ಮತ್ತು ಭಾಷಾ ಯಜಮಾನಿಕೆಯ ಅತಿಕ್ರಮಣದ ಕಾರಣಗಳಿಂದ 120 ಕ್ಕೂ ಹೆಚ್ಚು ಭಾಷೆಗಳು ನಶಿಸಿವೆ. ಏಕಸ್ವಾಮ್ಯ ಬಂಡವಾಳವನ್ನು ಬೆಳೆಸುತ್ತಿರುವ ಮಾರುಕಟ್ಟೆಯ ಏಕಸ್ವಾಮ್ಯವನ್ನು ಬಯಸುತ್ತಿರುವ ಬಿಜೆಪಿಯ ಆರ್ಥಿಕ ನೀತಿಗಳೊಂದಿಗೆ ರಾಜಕೀಯ ಮತ್ತು ಸಾಮಾಜಿಕ ನೀತಿಗಳು ತಳಕುಹಾಕಿಕೊಂಡಿವೆ. ಭಾಷಾ ಯಜಮಾನಿಕೆಯ ಹೇರಿಕೆಯ ವಿರುದ್ಧ ತೀವ್ರತರ ಪ್ರತಿರೋಧಗಳು ಇದ್ದಾಗ್ಯೂ ಬಿಜೆಪಿ ಮತ್ತೆ ಮತ್ತೆ ತನ್ನ ದುರಾಕ್ರಮಣವನ್ನು ಮುಂದುವರಿಸಿದೆ. ಹಾಗಾಗಿಯೆ ತನ್ನ ಹಿಂಬಾಲಕರ ಮೂಲಕ ಕೂಡ ದುರಾಕ್ರಮಣ ಜೀವಂತವಾಗಿರುವಂತೆ ನೋಡಿಕೊಳ್ಳುತ್ತದೆ.

ಯಾವುದೇ ಭಾಷೆ ಸ್ವಭಾವತಃ ದುರಾಕ್ರಮಣ ಕಾರಿಯೇನಲ್ಲ. ಆದರೆ, ಆಳುವವರ ಕೈಯಲ್ಲಿ ಪ್ರಭುತ್ವದ ಹಿತಾಸಕ್ತಿಗೆ ಅದು ಆಯುಧವೂ ಆಗಬಲ್ಲದು. ಭಾರತೀಯ ಎಲ್ಲಾ ಭಾಷೆಗಳಿಗೂ ಸಮಾನವಾದ ಸ್ಥಾನಮಾನ, ಗೌರವ ಮತ್ತು ಅದರ ಬೆಳವಣಿಗೆಗೆ ಎಲ್ಲ ರೀತಿಯ ಪ್ರೋತ್ಸಾಹ ಬೆಂಬಲ ಕೊಡುವುದು ಒಕ್ಕೂಟದ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದರೆ ಕೇಂದ್ರದ ಬಿಜೆಪಿ ಸರ್ಕಾರ ಸಂವಿಧಾನಾತ್ಮಕ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಮತ್ತು ತದ್ವಿರುದ್ಧವಾಗಿ ಕಾರ್ಯವೆಸಗುತ್ತಿದೆ. ಈಗಲಾದರೂ ಭಾಷೆಯ ಮೂಲಕವಾಗಿ ಜನತೆಯನ್ನು ಎತ್ತಿಕಟ್ಟುವ ಮೇಲು ಕೀಳಿನ ವ್ಯವಸ್ಥೆಯನ್ನು ಬಲಗೊಳಿಸುವ ಕೃತ್ಯಗಳನ್ನು ಎಲ್ಲರೂ ನಿಲ್ಲಿಸಬೇಕು. ಬಿಜೆಪಿ ಇಂತಹ ದುರಾಕ್ರಮಣದ ನೀತಿಗಳನ್ನು ಮುಂದೊತ್ತುವ ಮೂಲಕ ಇಡೀ ಭಾರತದ ಸಮಗ್ರತೆ ಮತ್ತು ಐಕ್ಯತೆಗೆ ಧಕ್ಕೆ ಉಂಟು ಮಾಡುವ ಛಿದ್ರಕಾರಿ ರಾಜಕಾರಣವನ್ನು ನಿಲ್ಲಿಸಬೇಕು. ಸಿನಿಮಾ ಮಾರುಕಟ್ಟೆಯ ಪ್ರಶ್ನೆಗಳನ್ನು ದೇಶದ ಐಕ್ಯತೆ, ಒಕ್ಕೂಟ ವ್ಯವಸ್ಥೆಯಂತಹ ಅಮೂಲ್ಯ, ಸೂಕ್ಷ್ಮ ಪ್ರಶ್ನೆಗಳಿಗೆ ತಳುಕು ಹಾಕುವುದನ್ನು ನಟ ಅಜಯ್ ದೇವಗನ್ ರಂಥವರು ನಿಲ್ಲಿಸಬೇಕು. ನಾವೆಲ್ಲರೂ ಭಾರತೀಯರು ಭಾರತದ ಎಲ್ಲ ಭಾಷೆಗಳು ಸಮಾನ ಸ್ಥಾನಮಾನವನ್ನು ಮತ್ತು ಸಂಪದ್ಭರಿತ ಸಂಸ್ಕೃತಿಯನ್ನು ಹೊಂದಿವೆ ಎನ್ನುವುದನ್ನು ಗೌರವಿಸುವಂತಾಗಲಿ.

ಚಳುವಳಿ ಜೊತೆಗೆ ಸಹಕಾರಿ ಕೃಷಿ ಮಾತ್ರವೇ ರೈತರನ್ನು ಉಳಿಸಲು ಸಾಧ್ಯ– ಕೃಷ್ಣಪ್ರಸಾದ್



ದೇಶದ ಕೃಷಿ ಅತ್ಯಂತ ಬಿಕ್ಕಟಿನಲ್ಲಿದ್ದು ಕೃಷಿ ಕ್ಷೇತ್ರವನ್ನು ಉಳಿಸಿ ಆಮೂಲಕ ರೈತರನ್ನು ರಕ್ಷಿಸಬೇಕಾದರೆ ಪ್ರಭಲ ರೈತ ಚಳುವಳಿಯ ಜೊತೆಗೆ ಪರ್ಯಾಯ ಸಹಕಾರಿ ಕೃಷಿಯನ್ನು ಬಲಪಡಿಸಬೇಕೆಂದು ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರ ಮುಖಂಡರಾದ ಕೃಷ್ಣಪ್ರಸಾದ್ ಹೇಳಿದರು.

ಲೀಟರ್ ಹಾಲಿಗೆ ಕನಿಷ್ಟ 50 ರೂ ಗಾಗಿ, ಹೈನುಗಾರಿಕೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಂದ ರಕ್ಷಿಸಲು, 'ಸಹಕಾರಿ ಕ್ಷೇತ್ರ'ವನ್ನು ಮತ್ತಷ್ಟು ಬಲಪಡಿಸುವುದಕ್ಕಾಗಿ ಆಗ್ರಹಿಸಿ ಚಿಕ್ಕಬಳ್ಳಾಪುರದ ಅಂಬೇಡ್ಕರ್ ಭವನದಲ್ಲಿ ನಡೆದ ಹಾಲು ಉತ್ಪಾದಕರ ರಾಜ್ಯಮಟ್ಟದ ಸಮಾವೇಶವನ್ನು ಉಧ್ಘಾಟಿಸಿ ಮಾತನಾಡುತ್ತಿದ್ದ ಕೃಷ್ಣಪ್ರಸಾದ್ ರವರು ದೇಶಾದ್ಯಂತ ಸಣ್ಣ ಮತ್ತು ಮಧ್ಯಮ ರೈತರು ದೊಡ್ಡ ಸಂಖ್ಯೆಯಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಆದರೆ ಈ ಹೈನುಗಾರಿಕೆಯಿಂದ ರೈತರಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚಾಗುತ್ತಿದೆ. ಪ್ರತಿ ಲೀಟರ್ ಹಾಲು ಉತ್ಪಾದನೆಗೆ ಕನಿಷ್ಟ 35 ರೂ ವೆಚ್ಚವಾಗುತ್ತಿದ್ದು ರೈತರು ಪ್ರೋತ್ಸಾಹ ಧನವನ್ನೂ ಸೇರಿ ಲೀಟರ್ ಗೆ ಕೇವಲ 30 ರೂ ಪಡೆಯುತ್ತಿದ್ದು, ಪ್ರತಿ ಲೀಟರ್ ಗೆ 5 ರೂ ನಷ್ಟವಾಗುತ್ತಿದೆ. ಕೃಷಿ ತಜ್ಞ ಎಂ.ಎಸ್ ಸ್ವಾಮಿನಾಥನ್ ರವರ ವರದಿಯ ಶಿಫಾರಸ್ಸಿನಂತೆ ಹಾಲಿನ ಪ್ರತಿ ಲೀಟರ್ ಗೆ ಕನಿಷ್ಟ 50 ರೂ ಬೆಂಬಲ ಬೆಲೆಯನ್ನು ಖಾತ್ರಿಪಡಿಸಬೇಕೆಂದು ಆಗ್ರಹಿಸಿದರು.

ಹೈನುಗಾರಿಕೆಯ ಸಂಕಷ್ಟದ ಪರಿಸ್ಥಿತಿಯನ್ನು ಬದಲಾಯಿಸಲು ಖಅಇಕ ಯಂತಹ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಬಲಿಷ್ಟವಾದ ರೈತ ಚಳುವಳಿಯನ್ನು ಸಂಘಟಿಸಬೇಕು. ಇದರ ಜೊತೆ ರೈತರ ನೇತೃತ್ವದಲ್ಲಿ ಪರ್ಯಾಯ ಸಹಕಾರಿ ಕೃಷಿಯನ್ನು ಬೆಳೆಸಬೇಕು ಎಂದರು.

ಕೇರಳದಲ್ಲಿ ಡೈರಿ ಸಹಕಾರಿ ಸಂಘಗಳ ಜೊತೆಗೆ, ರೈತರ ಕಲ್ಯಾಣ ಮಂಡಳಿಗಳ ಮೂಲಕ ಹೈನುಗಾರಿಕೆಯಲ್ಲಿ ತೊಡಗಿರುವ ರೈತರ ಮಕ್ಕಳ ಮದುವೆಗೆ 5000 ರೂ ಪ್ರೋತ್ಸಾಹ ಧನ, ಶಿಕ್ಷಣ, ಆರೋಗ್ಯಕ್ಕೆ ಸಹಾಯ ಧನವನ್ನು ನೀಡಲಾಗುತ್ತಿದೆ. ಪ್ರತಿ ರೈತರಿಗೂ ತಿಂಗಳಿಗೆ 1600 ರೂ ಕುಟುಂಬ ಪಿಂಚಣಿ ನೀಡಲಾಗುತ್ತಿದೆ. 550 ರೂ ರೈತ ವಿದವಾ ಪಿಂಚಣಿಯನ್ನು ನೀಡಲಾಗುತ್ತಿದೆ. ಹಾಲು ಉತ್ಪನ್ನಗಳ ಮೌಲ್ಯವರ್ಧನೆಗೆ ಬೇಕಾದ ಗಮನವನ್ನು ನೀಡಬೇಕು. ಇದರ ಮೂಲಕ ಬರುವ ಎಲ್ಲಾ ಲಾಭವನ್ನು ನೇರವಾಗಿ ರೈತರಿಗೆ ವರ್ಗಾಹಿಸಬೇಕು.

ಬಿಜೆಪಿ ಅಧಿಕಾರದಲ್ಲಿರುವ ಕರ್ನಾಟಕದಂತಹ ರಾಜ್ಯಗಳಲ್ಲಿ ಜಾರಿಗೆ ತಂದಿರುವ ಗೋಹತ್ಯೆ ನಿಷೇಧ ಕಾಯ್ದೆಯಿಂದ ಹಾಲು ಉತ್ಪಾದಕ ರೈತರು ಅತ್ಯಂತ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ಈ ಕಾಯ್ದೆಯನ್ನು ರಾಜ್ಯ ಸರ್ಕಾರ ಕೂಡಲೇ ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು.

ಸಮಾವೇಶದಲ್ಲಿ ಕೆಪಿಆರ್ಎಸ್‌ನ ನ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಯು. ಬಸವರಾಜು, ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಒಕ್ಕೂಟದ ಮಾಜಿ ಅದ್ಯಕ್ಷರಾದ ಕಾಡೇನಹಳ್ಳಿ ನಾಗರಾಜ್, ನಿರ್ದೇಶಕರುಗಳಾದ ಭರಣಿ ವೆಂಕಟೇಶ್, ಆದಿನಾರಾಯಣ ರೆಡ್ಡಿ, ಕೆಪಿಆರ್ಎಸ್‌ನ ಜಲ್ಲಾ ಮುಖಂಡರಾದ ಮಂಜುನಾಥರೆಡ್ಡಿ, ಲಕ್ಷ್ಮೀನಾರಾಯಣ, ಮುನಿಕೃಷ್ಣಪ್ಪ ಭಾಗವಹಿಸಿದ್ದರು, ಸಮಾವೇಶದ ಅಧ್ಯಕ್ಷತೆಯನ್ನ ವೆಂಕಟಾಚಲಯ್ಯ ವಹಿಸಿದ್ದರು.





ಕರ್ನಾಟಕ ಜಾನುವಾರು ಸಂರಕ್ಷಣಾ ಹಾಗೂ ಹತ್ಯೆ ನಿಷೇಧ ಕಾಯ್ದೆ 2020 ರದ್ದು ಪಡಿಸಲು ಆಗ್ರಹಿಸಿ ಹಾಲು ಉತ್ಪಾದಕರ ರಾಜ್ಯ ಸಮಾವೇಶದ ಒತ್ತಾಯ

ಹೈನುಗಾರಿಕೆ, ಉಳುಮೆ, ಕೃಷಿ ಕೆಲಸದ ಸಾಗಾಣಿಕೆ ಮತ್ತಿತರೆ ಅಗತ್ಯಗಳಿಗಾಗಿ ಜಾನುವಾರುಗಳನ್ನು ಅವಲಂಬಿಸಿರುವ ರೈತರ ಹಿತಕ್ಕೆ ಮಾರಕವಾಗಿರುವ ಕರ್ನಾಟಕ ಜಾನುವಾರು ಸಂರಕ್ಷಣಾ ಹಾಗೂ ಹತ್ಯೆ ನಿಷೇಧ ಕಾಯ್ದೆ 2020 ಅನ್ನು ರದ್ದುಪಡಿಸಲು ಹಾಲು ಉತ್ಪಾದಕರ ರಾಜ್ಯ ಸಮಾವೇಶ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಹಸು, ದನ, ಎಮ್ಮೆ, ಕೋಣ ಮುಂತಾದ ಎಲ್ಲಾ ರೀತಿಯ ಜಾನುವಾರುಗಳ ಮಾರಾಟ, ಕೊಳ್ಳುವಿಕೆ, ಸಾಗಾಣಿಕೆ ಮುಂತಾದ ಎಲ್ಲ ಆರ್ಥಿಕ ಚಟುವಟಿಕೆಗಳನ್ನು ನಿಷೇಧಿಸಿರುವ ಈ ಕಾಯ್ದೆಯಿಂದ ಕೃಷಿ ಜೀವನದ ಆರ್ಥಿಕ ಚಕ್ರವೇ ತುಂಡಾಗಿದೆ. ರೈತರ ಆದಾಯದಲ್ಲಿ ಜಾನುವಾರುಗಳ ಮಾರಾಟದ ಗಳಿಕೆ ಶೇಕಡಾ 25 ಕ್ಕಿಂತ ಹೆಚ್ಚಿನ ಪಾಲು ಹೊಂದಿರುವಾಗ ಜಾನುವಾರು ಆಧಾರಿತ ಆರ್ಥಿಕ ಚಟುವಟಿಕೆಗಳನ್ನು ನಿಷೇಧಿಸಿರುವುದು ಸಂಕಷ್ಟಕ್ಕೆ ಹಣ ಹೊಂದಿಸಿಕೊಳ್ಳುವ ರೈತರಿಗಿದ್ದ ಅವಕಾಶವನ್ನು ಕಿತ್ತುಕೊಂಡಂತಾಗಿದೆ. ಇದರಿಂದ ಈಗಾಗಲೇ ಕೃಷಿ ಬಿಕ್ಕಟ್ಟಿನಿಂದ ನರಳುತ್ತಿರುವ ರೈತರ ಗಾಯದ ಮೇಲೆ ಉಪ್ಪು ಸವರಿದಂತಾಗಿದೆ.

ಏಳು ವರ್ಷಗಳಿಗೂ ಹೆಚ್ಚಿನ ಜೈಲು ಶಿಕ್ಷೆ ಹಾಗೂ ಸಹಸ್ರಾರು ರೂಪಾಯಿಗಳ ದುಬಾರಿ ದಂಡ ವಿಧಿಸಲು ಅವಕಾಶ ಇರುವ ಕರ್ನಾಟಕ ಜಾನುವಾರು ಸಂರಕ್ಷಣಾ ಹಾಗೂ ಹತ್ಯೆ ನಿಷೇಧ ಕಾಯ್ದೆ ಹೈನುಗಾರಿಕೆಗೆ ಭಾರೀ ಮಾರಕವಾಗಿ ಪರಿಣಮಿಸಿದೆ. ಅನುಪಯುಕ್ತ, ಕರಾವು ನಿಂತು ಹೋದ, ಗಂಡು ಕರು ಮುಂತಾದ ರಾಸುಗಳನ್ನು ವಿಲೇವಾರಿ ಮಾಡುವುದು ಈ ಕರಾಳ ಕಾಯ್ದೆಯಿಂದ ರೈತರಿಗೆ ಭಾರಿ ದೊಡ್ಡ ತಲೆ ನೋವಾಗಿದೆ .ಮಾತ್ರವಲ್ಲ ರಾಸುಗಳ ವಹಿವಾಟಿನಿಂದ ಸಿಗುತ್ತಿದ್ದ ಆದಾಯಕ್ಕೂ ಕಲ್ಲು ಬಿದ್ದಿದೆ. ಹಸುಗಳನ್ನು ಖರೀದಿಸಲು ಹಾಗೂ ಮಾರಾಟ ಮಾಡಲು ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಪಶುಸಂಗೋಪನೆ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ಕಿರುಕುಳ ಅನುಭವಿಸಬೇಕಾಗಿ ಬಂದಿದೆ. ಮುಕ್ತವಾಗಿ ಸಾಗಾಣಿಕೆ ಮಾಡುವ ರೈತರ ಸ್ವಾತಂತ್ರ್ಯ ವನ್ನು ಈ ಕಾಯ್ದೆ ಕಿತ್ತುಕೊಂಡಿದೆ. ಜಾನುವಾರು ರಕ್ಷಕರು ಎಂದು ಹೇಳಿಕೊಂಡು ಗೂಂಡಾಗಿರಿ ,ದೌರ್ಜನ್ಯ, ಕಿರುಕುಳ ನೀಡುವವರಿಗೆ ಈ ಕಾಯ್ದೆ ರಕ್ಷಣೆ ನೀಡಿದೆ. ಸ್ವಯಂಪ್ರೇರಿತ ವಾಗಿ ಕೇಸು ದಾಖಲಿಸಿಕೊಂಡು ರಾಸುಗಳನ್ನು ಜಪ್ತಿ ಮಾಡಿ ಕಿರುಕುಳ ನೀಡುವ ಅವಕಾಶವನ್ನು ಪೊಲೀಸರಿಗೆ ಈ ಕಾಯ್ದೆ ಕಲ್ಪಿಸಿಕೊಟ್ಟಿದೆ.

ಈ ಕಾಯ್ದೆ ಜಾರಿಗೆ ಬಂದ ಮೇಲೆ ಜಾನುವಾರುಗಳನ್ನು ಹೈನುಗಾರಿಕೆಗೆ ಹಾಗೂ ಕೃಷಿ ಕೆಲಸಕ್ಕೆ ಕೊಳ್ಳುವ ಅಥವಾ ಮಾರಾಟ ಮಾಡುವ ರೈತರು ಭಯದಿಂದ ವ್ಯವಹರಿಸಬೇಕಾದ ಪರಿಸ್ಥಿತಿಯನ್ನು ಉಂಟು ಮಾಡಿದೆ. ರಾಜ್ಯದ ಹಲವು ಕಡೆ ರೈತರ ಜಾನುವಾರು ಸಾಗಾಣಿಕೆ ವಾಹನಗಳನ್ನು ಅಡ್ಡಗಟ್ಟಿ ಹಲ್ಲೆ ನಡೆದಿರುವ ಘಟನೆಗಳು ವರದಿಯಾಗಿವೆ.ಕೆಲವು ಕಡೆ ಪೊಲೀಸ್ ಠಾಣೆಗೆ ಬಲವಂತವಾಗಿ ಕರೆದೊಯ್ದು ಕೇಸು ದಾಖಲಿಸಲಾಗಿದೆ. ಈ ಕಾಯ್ದೆ ಜಾರಿಗೆ ಬಂದ ಮೇಲೆ ಕಸಾಯಿಖಾನೆ ಹೆಸರಿನಲ್ಲಿ ರೈತರ ರಾಸುಗಳನ್ನು ಜಪ್ತಿ ಮಾಡಿ ಗೋಶಾಲೆಗೆ ಅಕ್ರಮವಾಗಿ ತೆಗೆದುಕೊಂಡು ಹೋಗುವ ಮಾಫಿಯಾಗೆ ಭಾರೀ ಬಲ ಬಂದಿದೆ. ಒಂದು ಕಡೆ ಗೋಶಾಲೆ ಹೆಸರಿನಲ್ಲಿ ಸರ್ಕಾರದಿಂದ ಅನುದಾನವನ್ನು ಕೊಳ್ಳೆ ಹೊಡೆಯಲಾಗುತ್ತಿದ್ದರೆ ಇನ್ನೊಂದು ಕಡೆ ಗೋಶಾಲೆಯಿಂದ ಅಕ್ರಮವಾಗಿ ರಾಸುಗಳನ್ನು ಕಾರ್ಪೊರೇಟ್ ಮಾಂಸ ಕಂಪನಿಗಳಿಗೆ ಮಾರಲಾಗುತ್ತಿದೆ.ಈ ಕಾಯ್ದೆಯಿಂದ ಸಾಂಪ್ರದಾಯಿಕ ಜಾನುವಾರು ಜಾತ್ರೆಗಳೇ ಬಹಳ ದೊಡ್ಡ ಆತಂಕವನ್ನು ಎದುರಿಸುತ್ತಿವೆ.

ಆದರೆ ಈ ಕಾಯ್ದೆಯು ಗೋಮಾಂಸ ಸೇವನೆಯನ್ನಾಗಲಿ ಅಥವಾ ಗೋಮಾಂಸ ಮಾರಾಟವನ್ನಾಗಲಿ ನಿಷೇಧಿಸಿಲ್ಲ. ಗೋ ಮಾಂಸ ರಫ್ತು ಮಾಡುವ ಕಾರ್ಪೊರೇಟ್ ಕಂಪನಿಗಳ ಜಾನುವಾರು ಕಸಾಯಿಖಾನೆಗಳನ್ನು ನಿಷೇಧಿಸಿಲ್ಲ. ಆದರೆ ಅದೇ ಸಂದರ್ಭದಲ್ಲಿ ಬಡವರು, ದಲಿತರ ಆಹಾರದ ಹಕ್ಕನ್ನು ಕಸಿದುಕೊಳ್ಳಲಾಗಿದೆ ಮಾತ್ರವಲ್ಲ ಈ ಕ್ಷೇತ್ರದಲ್ಲಿ ವ್ಯಾಪಾರ ಮಾಡಿ ಜೀವನ ಮಾಡುತ್ತಿದ್ದ ಸಾಮಾನ್ಯ ಜನರ ಬದುಕಿನ ಮೇಲೆ ದಾಳಿಯನ್ನು ನಡೆಸಲಾಗುತ್ತಿದೆ. ಇದು ಬಹಳ ಸ್ಪಷ್ಟವಾಗಿ ಒಂದು ಕಡೆ ರೈತಾಪಿ ಕೃಷಿ ಹಾಗೂ ಹೈನುಗಾರಿಕೆ ಯನ್ನು ನಿರುತ್ಸಾಹಗೊಳಿಸುವ ಉದ್ದೇಶವನ್ನು ಹೊಂದಿದ್ದರೆ ಇನ್ನೊಂದು ಕಡೆ ಕಾರ್ಪೊರೇಟ್ ಕಂಪನಿಗಳ ಹೈನುಗಾರಿಕೆ ಹಾಗೂ ಮಾಂಸ ಮಾರಾಟ ಮತ್ತು ರಫ್ತು ಉದ್ಯಮದ ಹಿತಾಸಕ್ತಿಗಳನ್ನು ಪೋಷಿಸುತ್ತಿದೆ. ವರ್ಷದಿಂದ ವರ್ಷಕ್ಕೆ ಕೃಷಿ ಹಾಗೂ ಹೈನುಗಾರಿಕೆಯನ್ನು ತೊರೆಯುತ್ತಿರುವ ರೈತರ ಸಂಖ್ಯೆ ಹೆಚ್ಚುತ್ತಿರುವಾಗಲೇ ದೊಡ್ಡ ದೊಡ್ಡ ಮಾಲ್ ಗಳಲ್ಲಿ ದನದ ಮಾಂಸ ಮಾರಾಟ ವಹಿವಾಟು ಹಾಗೂ ರಫ್ತು ವಹಿವಾಟು ಹೆಚ್ಚುತ್ತಿರುವುದು ಈ ಕಾಯ್ದೆಯ ಕಾರ್ಪೊರೇಟ್ ಪಕ್ಷಪಾತವನ್ನು ಪುಷ್ಠಿಕರಿಸುತ್ತದೆ.

ರೈತರು ಜಾನುವಾರುಗಳನ್ನು ಪೋಷಿಸುತ್ತಿರುವುದರಿಂದಲೇ ಜಾನುವಾರು ಸಂತತಿ ಉಳಿದಿದೆ. ಜಾನುವಾರು ಪೋಷಣೆಯಿಂದ ರೈತರನ್ನು ದೂರ ತಳ್ಳುವ ಇಂತಹ ಈ ಕಾಯ್ದೆಯಿಂದ ವಾಸ್ತವವಾಗಿ ಇಡೀ ಜಾನುವಾರು ಸಂತತಿಯೇ ಅಪಾಯಕ್ಕೆ ಸಿಲುಕುತ್ತದೆ. ಅದ್ದರಿಂದ ಈ ಹಿಂದಿನಂತೆ ಭಯಮುಕ್ತವಾಗಿ, ಯಾವುದೇ ಕಿರುಕುಳ ಇಲ್ಲದೇ ಜಾನುವಾರು ಮಾರುಕಟ್ಟೆ ನಡೆಯುವಂತಾಗಲು ಕರ್ನಾಟಕ ಜಾನುವಾರು ಸಂರಕ್ಷಣಾ ಹಾಗೂ ಹತ್ಯೆ ನಿಷೇಧ ಕಾಯ್ದೆ 2020 ಅನ್ನು ರದ್ದುಪಡಿಸಬೇಕು. ದೇಶೀಯ ಜಾನುವಾರು ತಳಿಗಳನ್ನು ಅಭಿವೃದ್ಧಿ ಪಡಿಸಿ ರಕ್ಷಿಸಲು ವಿಶೇಷವಾದ ಪ್ರೋತ್ಸಾಹ ಗಳನ್ನು ನೀಡಬೇಕು. ಆ ಮೂಲಕ ಹೈನುಗಾರಿಕೆ ಅವಲಂಬಿಸಿರುವ ರಾಜ್ಯದ ಸುಮಾರು 25 ಲಕ್ಷ ಕುಟುಂಬಗಳು ಸೇರಿದಂತೆ ರೈತಾಪಿ ಬೇಸಾಯದಲ್ಲಿ ತೊಡಗಿರುವ ಸುಮಾರು 75 ಲಕ್ಷ ರೈತ ಕುಟುಂಬಗಳನ್ನು ರಕ್ಷಿಸಬೇಕು ಎಂದು ಹಾಲು ಉತ್ಪಾದಕರ ರಾಜ್ಯ ಸಮಾವೇಶ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ. ಈ ಕಾಯ್ದೆಯನ್ನು ವಾಪಸ್ಸು ಪಡೆಯುವವರೆಗೆ ರೈತರ ಅನುಪಯುಕ್ತ ದನ, ಕರುಗಳನ್ನು ಮಾರುಕಟ್ಟೆಯ ದರದಲ್ಲಿ ರಾಜ್ಯ ಸರ್ಕಾರವೇ ಖರೀದಿಸಬೇಕೆಂದು ಈ ಸಮಾವೇಶವು ಆಗ್ರಹಿಸಿದೆ.

ಮಂಡನೆ: ಟಿ. ಯಶವಂತ್
ಅನುಮೋದನೆ: ಆರ್.ಕೆ. ದೇಸಾಯಿ

ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಇಬ್ಬರು ದಲಿತ ಯುವಕರ ಹತ್ಯೆ ಖಂಡಿಸಿ ಪ್ರತಿಭಟನೆ

ಹತ್ಯೆಯ ಸಂಬಂಧಿಸಿದಂತೆ ಪೆದ್ದನಹಳ್ಳಿಗೆ ಡಿಹೆಚ್ಎಸ್ ನಿಯೋಗ ಬೇಟಿ

ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಾ ಇರುತ್ತವೆ. ದಲಿತರ ಪ್ರಜ್ಞಾವಂತ ಕಾನೂನು ಬದ್ಧ ಜಾಗೃತಿ ಚಟುವಟಿಕೆಗಳನ್ನು ಮೇಲ್ ಜಾತಿ ಪಟ್ಟಭದ್ರ ಹಿತಾಶಕ್ತಿಗಳು ಸಹಿಸಿಕೊಳುತ್ತಿಲ್ಲ ಎಂಬುದು ಗೋಚರವಾಗುತ್ತಿದೆ. ಗುಬ್ಬಿಯಲ್ಲಿ ಅಭಿಷೇಕನ ದೌರ್ಜನ್ಯದಿಂದ ಹಿಡಿದು ಅನೇಕ ಬೀಕರವಾಗಿ ನಡೆದಿವೆ. ಆದರೂ ಸರ್ಕಾರ ಮತ್ತು ಜಿಲ್ಲಾ ಆಡಳಿತ ವಿಫಲವಾಗಿದೆ.

ಪೆದ್ದನಹಳ್ಳಿಯಲ್ಲಿ ಕೊಲ್ಲಾಪುರದಮ್ಮನ ಜಾತ್ರೆ ಹಬ್ಬದ ಸಂಭ್ರಮದಲ್ಲಿದ್ದಾಗ ದಲಿತ ಯುವಕ ಗಿರೀಶ್ ಮೂಡಲಗಿರಿಯ್ಯ ಅವರ ಪಕ್ಕದ ಮನೆ ಸಂಬಂಧಿ ಹುಡುಗ ನಂದೀಶ ಸರಸರ ಬಂದವನೆ ಹೊರಗೆ ಕರೆದುಕೊಂಡು ಹೋದ ಎಂದು ತಾಯಿ ಗೌರಮ್ಮ ಗೋಳಾಡಿದಳು. ಕಾರಣ ತನಿಖೆಯಿಂದ ಹೊರಬರಬೇಕಾಗಿದೆ.

ರಾತ್ರಿ ಹಬ್ಬದ ಸಂಭ್ರಮ ಒಂದು ಕಡೆಯಾದರೆ, ಊರಿನ ಕೆಲವು ಪುಂಡ ಪಟ್ಟಾಲಂ ಊರ ಹೊರಗೆ ಗಿರೀಶ್ ಮೂಡಲಗಿರಿಯ್ಯನನ್ನು ಮತ್ತು ಪಕ್ಕದ ಊರಿನ ಗಿರೀಶ್ ಕೆಂಪಣ್ಣ ಎಂಬ ದಲಿತ ಯುವಕರನ್ನು ಥಳಿಸಿ ಬರ್ಬರವಾಗಿ ಹೊಡೆದು ಹತ್ಯೆ ಮಾಡಿದ್ದಾರೆ. ಗಿರೀಶ್ ಮೂಡಲಗಿರಿಯ್ಯನ ಶವವು ಬೆಳಗಾಗುತ್ತಿದ್ದಂತೆ ಕೆರೆಯಲ್ಲಿ ತೇಲುತ್ತಿತು. ಬರ್ಬರ ಗಾಯಗಳಿಂದ ಸತ್ತ ಗಿರೀಶ್ ಕೆಂಪಣ್ಣ ಶವವು ಹಾದಿಯಲ್ಲಿ ಬಿದ್ದಿತ್ತು.

ಪೋಲಿಸರು ಕಳ್ಳತನದ ಆರೋಪದ ಮೇಲೆ ಕೇಸು ದಾಖಲು ಮಾಡಿದ್ದಾರೆ. ರೈತರು ಈ ಕಾರಣಗಳಿಂದ ಹೊಡೆದು ಸಾಯಿಸಿದ್ದಾರೆಂದು ತಿಳಿಸಿ ದಿಕ್ಕು ತಪ್ಪಿಸುತ್ತಿದ್ದಾರೆ. ಇದು ಒಂದು ವ್ಯವಸ್ಥಿತ ಸಂಚಿನಿಂದ ಮಾಡಿದ ಹತ್ಯೆಯಾಗಿದೆ. ಸತ್ತ ದೇಹದ ಗಾಯಗಳನ್ನು ಸುಡಲಾಗಿದೆ ಎಂದು ತಿಳಿದು ಬಂದಿದೆ. ಈ ರೀತಿ ಮಾಡುವುದರಿಂದ ಸಾಕ್ಷಿಗಳು ನಾಶವಾಗುತ್ತವೆ.

ಈ ಕೊಲೆಗೆ ಕಾರಣ ಹುಡಕಲು ದಲಿತ ಹಕ್ಕುಗಳ ರಾಜ್ಯ ಸಮಿತಿ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ನೇತೃತ್ವದಲ್ಲಿ ಆಊಖ ರಾಜ್ಯ ಸಮಿತಿ ಸದಸ್ಯರಾದ ಅನಿಕೇತನ ಮೇಸ್ತ್ರು, ಕಾರ್ಮಿಕ ಮುಖಂಡರಾದ ಕಾಂ. ಎನ್.ಕೆ. ಸುಬ್ರಮಣ್ಯ ಮತ್ತಿತರರ ನಿಯೋಗ ಊರಿನ ದಲಿತ ಕುಟುಂಬವನ್ನು ಬೇಟಿ ಮಾಡಿ ನೋದ ಕುಟುಂಬಕ್ಕೆ ಸಾಂತ್ವನ ಹೇಳಿದೆ. ಇದೇ ಸಮಯದಲ್ಲಿ ತಿಳಿದು ಬಂದ ಸಂಗತಿ ಎಂದರೆ ಗಿರೀಶನ ದೊಡ್ಡಪ್ಪ ಗ್ರಾಮ ಪಂಚಾಯತಿ ಸದಸ್ಯನಾಗಿದ್ದು ಪ್ರಕರಣ ಒಂದರಲ್ಲಿ ವಿನಾಕಾರಣ ಅವನನ್ನು ಜೈಲಿಗೆ ಕಳುಹಿಸಲಾಗಿತ್ತು. ಇಂತಹ ಸಂದರ್ಭದಲ್ಲಿ ಗೀರಿಶ ಬಿಡಿಸಿಕೊಂಡು ಬಂದಿದ್ದ ಅಲ್ಲದೆ ರಾಜಕೀಯವಾಗಿ ಬೆಳವಣಿಗೆಯತ್ತ ಸಾಗುತ್ತಿದ್ದ ಎಂದೂ ತಿಳಿದು ಬಂದಿದೆ.

ದಲಿತ ಯುವಕರು, ಸಾರ್ವಜನಿಕ ಚಟುವಟಿಕೆಯಲ್ಲಿ ಮುಂಚೂಣಿಗೆ ಬರುತ್ತಿರುವುದನ್ನು ಜಾತಿವಾದಿ ಮನಸ್ಸುಗಳು ಸಹಿಸುತ್ತಿಲ್ಲವೆಂಬುದು ಈ ಘಟನೆ ಸೇರಿದಂತೆ ಹಲವು ಸಂದರ್ಭದಲ್ಲಿ ಕಂಡಿದ್ದೇವೆ. ಈ ಜೋಡಿ ಕೊಲೆ ಸಂಚಿನಿಂದ ಕೂಡಿದೆ. ಏಪ್ರಿಲ್ 29 ತುಮಕೂರು ಎಸ್.ಪಿ. ಕಛೇರಿ ಎದುರು ಹೋರಾಟ ನಡೆಸಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯವರಿಗೆ ಮನವಿ ನೀಡಲಾಯಿತು. ಸಮಗ್ರ ನ್ಯಾಯಬದ್ಧ ತನಿಖೆಯನ್ನು ಸರ್ಕಾರ ನಡೆಸಬೇಕೆಂದು ಒತ್ತಾಯಿಸಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ತಿಳಿಸಿದ್ದಾರೆ.

ದಲಿತ ಹಕ್ಕುಗಳ ಸಮಿತಿ (DHS) ಕರ್ನಾಟಕ, ತುಮಕೂರು ಜಿಲ್ಲೆ ಪೌರ ಕಾರ್ಮಿಕರ ಸಂಘಟನೆ ಅದರ ಮುಖಂಡರಾದ ನಾಗರಾಜ್ ಹಾಗೂ ತುಮಕೂರು ಜಿಲ್ಲಾ ಕೊಳಗೇರಿ ಹಿತರಕ್ಷಣ ಸಮಿತಿ ಮುಖಂಡರಾದ ನರಸಿಂಹ ಮೂರ್ತಿಯವರು ಮಾತನಾಡಿ ತಕ್ಷಣ ಸೂಕ್ತ ಪರಿಹಾರ ನೀಡಬೇಕೆಂದು ಎಂದು ಹೇಳಿದ್ದಾರೆ.


ಪ್ರತಿಭಟನೆ


ಪೆದ್ದನಹಳ್ಳಿಗೆ ಡಿಹೆಚ್ಎಸ್ ನಿಯೋಗ ಬೇಟಿ

ಸುಪ್ರೀಂ ಕೋರ್ಟ್ ಆದೇಶವನ್ನು..........

ಪುಟ 2 ರಿಂದ

ಸಂಯೋಜಿತವಾಗಿರುವ ಎಐಎಫ್‌ಎಡಬ್ಲ್ಯುಹೆಚ್‌ನ ಪ್ರಧಾನ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಗುಜರಾತ್ ಬಿಜೆಪಿ ಸರ್ಕಾರದ ತೀವ್ರ ದಬ್ಬಾಳಿಕೆ ಮತ್ತು ಬೆದರಿಕೆಗಳನ್ನು ಎದುರಿಸಿ ಬೀದಿಗಿಳಿದು ಹೋರಾಟಗಳನ್ನು ನಡೆಸಿರುವ ಗುಜರಾತ್ ಅಂಗನವಾಡಿ ನೌಕರರ ಸಂಘವನ್ನು ಮತ್ತು ಅದಕ್ಕೆ ನೆರವಾದ ವಕೀಲರನ್ನು ಅದು ಅಭಿನಂದಿಸಿದೆ. ಸಿಐಟಿಯು ಕೂಡ ಎಐಎಫ್‌ಎಡಬ್ಲ್ಯುಹೆಚ್, ಅದರ ಗುಜರಾತ್ ಘಟಕ ಹಾಗೂ ಈ ಇಬ್ಬರು ವಕೀಲರನ್ನು ಈ ಕಾನೂನು ಗೆಲುವಿಗಾಗಿ ಅಭಿನಂದಿಸಿದೆ.

ಗ್ರಾಚ್ಯುಟಿ ನೀಡುವಂತೆ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ನಿರ್ದೇಶನ ನೀಡಿದ್ದಲ್ಲದೆ, ಶೇ. 10 ರಷ್ಟು ಬಡ್ಡಿ ನೀಡಿ ಮೂರು ತಿಂಗಳೊಳಗೆ ಜಾರಿಗೊಳಿಸುವಂತೆ ಸೂಚಿಸಿದೆ. ಅಲ್ಲದೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಕೆಲಸದ ಪರಿಸ್ಥಿತಿಗಳನ್ನು ಪರಾಮರ್ಶಿಸಬೇಕು ಮತ್ತು ವೇತನ ಹೆಚ್ಚಳ ಸೇರಿದಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದೂ ಭಾರತ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಅಂಗನವಾಡಿ ನೌಕರರು ಗ್ರಾಚ್ಯುಟಿ ಪಾವತಿ ಕಾಯ್ದೆ, 1972ರ ಅಡಿಯಲ್ಲಿ ಗ್ರಾಚ್ಯುಟಿ ಪಡೆಯಲು ಅರ್ಹರಾಗಿದ್ದಾರೆ ಎಂದು ಸ್ಪಷ್ಟಪಡಿಸಿರುವ ಈ ಸುಪ್ರಿಂ ಕೋರ್ಟ್ ಆದೇಶ ಸಿಐಟಿಯು ಮತ್ತು ಇತರ ಕೇಂದ್ರೀಯ ಕಾರ್ಮಿಕ ಸಂಘಗಳು ಹೇಳುತ್ತ ಬಂದಿರುವುದನ್ನು ಎತ್ತಿ ಹಿಡಿದಿದೆ. ಇದು ಸ್ಕೀಮ್ ಕೆಲಸಗಾರರ ಅಂದೋಲನದ ಮೇಲೆ ಮಹತ್ತರ ಪರಿಣಾಮ ಬೀರಲಿದೆ ಎಂದು ಸಿಐಟಿಯು ಹೇಳಿದೆ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಪಾತ್ರವನ್ನು ಗುರುತಿಸಲು ನಿರಾಕರಿಸುತ್ತ, ಅದನ್ನು ಸಮರ್ಥಿಸಿಕೊಳ್ಳಲು ಭಾರತ ಸರಕಾರ ಸರ್ವೋಚ್ಚ ನ್ಯಾಯಾಲಯದ ಕಡೆಗೆ ಬೊಟ್ಟುಮಾಡಿ ತೋರಿಸುತ್ತ ಬಂದಿದೆ. ಈಗಲಾದರೂ ಈ ಸರ್ಕಾರ ತಕ್ಷಣವೇ ಸುಪ್ರೀಂ ಕೋರ್ಟ್ ಆದೇಶವನ್ನು ಜಾರಿಗೊಳಿಸಬೇಕು ಮತ್ತು ದೇಶ ಎದುರಿಸುತ್ತಿರುವ ದೊಡ್ಡ ಸವಾಲಾದ, ಅಪೌಷ್ಟಿಕತೆಯ ವಿರುದ್ಧ ಹೋರಾಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಪಾತ್ರವನ್ನು ಗುರುತಿಸಬೇಕು ಎಂದು ಎಐಎಫ್‌ಎಡಬ್ಲ್ಯುಹೆಚ್ ಹಾಗೂ ಸಿಐಟಿಯು ಆಗ್ರಹಿಸಿವೆ.

ಸ್ಕೀಮ್ ಕೆಲಸಗಾರರ ಹಕ್ಕುಗಳು– ಕಾರ್ಮಿಕರೆಂಬ ಸ್ಥಾನಮಾನ, ಕನಿಷ್ಠ ವೇತನ ಮತ್ತು ಪಿಂಚಣಿ, ಇಎಸ್‌ಐ, ಪಿಎಫ್ ಇತ್ಯಾದಿಗಳ ಕುರಿತು 45 ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸುಗಳನ್ನು ತಕ್ಷಣವೇ ಜಾರಿಗೆ ತರಬೇಕೆಂದು ಕೂಡ ಅವು ಭಾರತ ಸರ್ಕಾರವನ್ನು ಒತ್ತಾಯಿಸಿವೆ.

ಚಂಡೀಗಢದಲ್ಲಿ ಏಪ್ರಿಲ್ 24–25 ರಂದು ಸಭೆ ಸೇರಿದ ಎಐಎಫ್‌ಎಡಬ್ಲ್ಯುಹೆಚ್ ಕಾರ್ಯಕಾರಿ ಸಮಿತಿಯು ಈ ತೀರ್ಪನ್ನು ಸ್ವಾಗತಿಸುತ್ತ ಮೂಲಭೂತ ಹಕ್ಕುಗಳ ನ್ಯಾಯಯುತ ಬೇಡಿಕೆಗಳಿಗಾಗಿ ತನ್ನ ಹೋರಾಟಗಳನ್ನು ತೀವ್ರಗೊಳಿಸಲು ನಿರ್ಧರಿಸಿದೆ.

ಹರ್ಯಾಣ ಮತ್ತು ದೆಹಲಿಯಂತಹ ರಾಜ್ಯಗಳಲ್ಲಿ ಕಾರ್ಮಿಕರು ಮತ್ತು ಸಹಾಯಕರನ್ನು ಕಾನೂನು ಬಾಹಿರವಾಗಿ ವಜಾಗೊಳಿಸುವುದು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹೋರಾಟಗಳನ್ನು ಸಾಧ್ಯವಿರುವ ಎಲ್ಲ ರೀತಿಯಲ್ಲಿ ಹತ್ತಿಕ್ಕಲು ಮೋದಿ ಸರ್ಕಾರದ ನಿರ್ದೇಶನದ ವಿಷಯವನ್ನು ಕೈಗೆತ್ತಿಕೊಳ್ಳಲು ಅದು ನಿರ್ಧರಿಸಿದೆ.

ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಒಕ್ಕೂಟ ಹೋರಾಟಗಳನ್ನು ತೀವ್ರಗೊಳಿಸುತ್ತದೆ ಮತ್ತು ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಸಂಸತ್ತು ಮತ್ತು ಪಡವ್‌ಗೆ ಬೃಹತ್ ಸಂಸತ್ ಚಲೋ ಮತ್ತು ಮಹಾಪಡಾವ್ ನಡೆಸಲು ನಿರ್ಧರಿಸಿದೆ.

ಸರಕಾರ ಸಾರ್ವಜನಿಕ ವಲಯ ಮತ್ತು ಐಸಿಡಿಎಸ್ ನಂತಹ ಸಾರ್ವಜನಿಕ ಸೇವೆಗಳನ್ನು ಖಾಸಗೀಕರಿಸುವ ಧಾವಂತದಲ್ಲಿರುವ ಒಂದು ಸಂದರ್ಭದಲ್ಲಿ ಅಂಗನವಾಡಿ ಮತ್ತು ಇತರ ಸ್ಕೀಂ ನೌಕರರ ಹೋರಾಟಗಳನ್ನು ತೀವ್ರಗೊಳಿಸುವ ತನ್ನ ದೃಢನಿರ್ಧಾರವನ್ನು ಸಿಐಟಿಯು ಪುನರುಚ್ಚರಿಸಿದೆ.



ಸಾಂವಿಧಾನಿಕ ಪ್ರಕರಣಗಳಲ್ಲಿ ನ್ಯಾಯಾಂಗದ ನುಣುಚಿಕೊಳ್ಳುವಿಕೆ

ಸುಪ್ರೀಂ ಕೋರ್ಟ್‌ನ ಅಸಮರ್ಥನೀಯ ನಡೆ

ಪ್ರಕಾಶ್ ಕಾರಟ್

ಸಂವಿಧಾನದ 370ನೇ ವಿಧಿಯನ್ನು ತೆಗೆದು ಹಾಕಿದ್ದು ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಸರ್ಜಿಸಿ ಎರಡು ಕೇಂದ್ರಾಡಳಿತ ಪ್ರದೇಶಗಳ ರಚನೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಬೇಸಿಗೆ ರಜೆ ನಂತರ ಜುಲೈನಲ್ಲಿ ಆರಂಭಿಸುವ ಬಗ್ಗೆ ಪರಿಶೀಲಿಸುವುದಾಗಿ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ. ರಮಣ ಕೋರ್ಟ್‌ನಲ್ಲೇ ಹೇಳಿದ್ದಾರೆ. ಪ್ರಕರಣದ ತ್ವರಿತ ವಿಚಾರಣೆ ನಡೆಸಬೇಕೆಂದು ಹಿರಿಯ ವಕೀಲರು ಮಾಡಿದ್ದ ಮನವಿಯ ಮೇರೆಗೆ ನ್ಯಾ. ರಮಣ ಈ ವಿಷಯ ತಿಳಿಸಿದ್ದಾರೆ. ಪ್ರಕರಣದ ವಿಚಾರಣೆ ನಡೆಸುತ್ತಿದ್ದ ನ್ಯಾಯಪೀಠದ ಐವರು ಜಡ್ಜ್‌ಗಳಲ್ಲಿ ಒಬ್ಬರು ನಿವೃತ್ತರಾಗಿರುವುದರಿಂದ ಪೀಠದ ಪುನರ್‌ರಚನೆ ಅಗತ್ಯವಾಗಿದೆ ಎಂದವರು ಹೇಳಿದ್ದಾರೆ. ಒಂದು ವೇಳೆ ಜುಲೈನಲ್ಲಿ ವಿಚಾರಣೆ ಆರಂಭವಾಗುವುದಾದರೆ ಸಿಜೆಐ ಸ್ಥಾನದಲ್ಲಿ ಕೂಡ ಬೇರೆಯವರನ್ನು ನೇಮಿಸಬೇಕಾಗುತ್ತದೆ. ಯಾಕೆಂದರೆ ರಮಣ ಅವರೂ ಆಗಸ್ಟ್ 26 ರಂದು ನಿವೃತ್ತರಾಗಲಿದ್ದಾರೆ. ಒಟ್ಟಿನಲ್ಲಿ ಪ್ರಕರಣದ ವಿಚಾರಣೆಯ ಅಂತ್ಯವಿಲ್ಲದ ವಿಳಂಬ ಮುಂದುವರಿಯಲಿದೆ ಎನ್ನುವುದು ಇದರಿಂದ ಸ್ಪಷ್ಟವಾಗಿದೆ.

ಜಮ್ಮು ಮತ್ತು ಕಾಶ್ಮೀರದ ಬಗ್ಗೆ 2019ರ ಆಗಸ್ಟ್ 5 ರಂದು ರಾಷ್ಟ್ರಪತಿ ಆದೇಶಗಳನ್ನು ಹೊರಡಿಸಲಾಗಿತ್ತು. ಆಗಿನಿಂದ ಎರಡು ವರ್ಷ ಒಂಬತ್ತು ತಿಂಗಳು ಸಂದುಹೋಗಿದೆ. ಇಂಥ ಒಂದು ಪ್ರಮುಖ ಸಾಂವಿಧಾನಿಕ ಪ್ರಕರಣದ ವಿಚಾರಣೆಯನ್ನು ಸರ್ವೋನ್ನತ ನ್ಯಾಯಾಲಯ ವಿಳಂಬಗೊಳಿಸುತ್ತಿರುವುದು ಯಾವ ರೀತಿಯಲ್ಲೂ ಸಮರ್ಥನೀಯವಲ್ಲ. ಈ ಅವಧಿಯಲ್ಲಿ ಕೇಂದ್ರ ಸರ್ಕಾರವು, ವಿವಿಧ ಕ್ರಮಗಳು ಹಾಗೂ ಹೊಸ ಕಾನೂನುಗಳನ್ನು ಮಾಡುವ ಮೂಲಕ ಬದಲಾವಣೆಗಳನ್ನು ಮಾಡಲು ಹೊರಟಿದೆ. ಮೊಟಕುಗೊಂಡಿರುವ ವಿಧಾನಸಭೆಯ ಕ್ಷೇತ್ರಗಳ ಪುನರ್‌ವಿಂಗಡಣೆ ಪ್ರಕ್ರಿಯೆ ಬಹುತೇಕ ಮುಗಿದಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಅರ್ಜಿಗಳು ವ್ಯಾಪಕ ಸಾಂವಿಧಾನಿಕ ಪರಿಣಾಮವನ್ನು ಹೊಂದಿರುವಂಥದ್ದಾಗಿವೆ. ರಾಷ್ಟ್ರಪತಿ ಆಡಳಿತದ ಹುನ್ನಾರ ಬಳಸಿಕೊಂಡು ಭಾರತ ಒಕ್ಕೂಟದ ಒಂದು ರಾಜ್ಯದ ಸ್ವರೂಪವನ್ನು ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ಬದಲಾಯಿಸಬಹುದೇ? ಒಕ್ಕೂಟ ತತ್ವದ ಮೂಲಭೂತ ಸಿದ್ಧಾಂತದ ಅಡಿಪಾಯವಾದ ಕೇಂದ್ರ–ರಾಜ್ಯ ಸಂಬಂಧವೇ ಇಲ್ಲಿ ಅಪಾಯಕ್ಕೆ ಸಿಲುಕಿದೆ. ಇಂಥ ಒಂದು ಮಹತ್ವದ ವಿಚಾರದಲ್ಲಿ ಯಾವುದೇ ನ್ಯಾಯಾಂಗದ ಘೋಷಣೆ ಮಾಡದಿರುವ ಮೂಲಕ ತನ್ನ ಸಂಕುಚಿತ ಹಾಗೂ ಪಕ್ಷಪಾತಿ ಯೋಜನೆಯನ್ನು ಮುಂದುವರಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಅವಕಾಶ ಕಲ್ಪಿಸಿದೆ.

ಪುರುಸೊತ್ತಿಲ್ಲದ ಕೋರ್ಟ್!

ಇನ್ನೂ ಇತರ ಅನೇಕ ಸಾಂವಿಧಾನಿಕ ಕೇಸ್‌ಗಳು ಸುಪ್ರೀಂ ಕೋರ್ಟ್‌ನ ಮುಂದಿವೆ. ಚುನಾವಣಾ ಬಾಂಡ್ ಪ್ರಶ್ನಿಸಿರುವ ಅರ್ಜಿ ಕೋರ್ಟ್‌ನಲ್ಲಿ ನಾಲ್ಕು ವರ್ಷಕ್ಕೂ ಹೆಚ್ಚು ಅವಧಿಯಿಂದ ಬಾಕಿಯಿದೆ. 2018ರಲ್ಲಿ ಈ ಸಂಬಂಧ ಮಾಡಿದ ಕಾನೂನಿನ ನಂತರ, ಲೋಕ ಸಭೆ ಹಾಗೂ ವಿವಿಧ ರಾಜ್ಯಗಳ ವಿಧಾನಸಭೆಗಳ ಚುನಾವಣೆಗಳಲ್ಲಿ ಅನಾಮಿಕ ದೇಣಿಗೆಗಳ ಅಪಾರದರ್ಶಕ ವ್ಯವಸ್ಥೆಯ ಮೂಲಕ ಆಳುವ ಪಕ್ಷಕ್ಕೆ ಸಾವಿರಾರು ಕೋಟಿ ರೂಪಾಯಿ ಹರಿದು ಬರುವಂತೆ ಮಾಡಲಾಗಿದೆ. ಇದರಿಂದ ಚುನಾವಣಾ ಪ್ರಕ್ರಿಯೆ ಮೇಲೆ ಪರಿಣಾಮ ಉಂಟಾಗಿದೆ. ಚುನಾವಣಾ ಬಾಂಡ್ ಮೂಲಕ ಆಳುವ ಪಕ್ಷಕ್ಕೆ ಅಂತರ್ ನಿರ್ಮಿತ ಅನುಕೂಲ ಮಾಡಿಕೊಡಲಾಗಿದೆ. ಅದು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ಅಸ್ತವ್ಯಸ್ತಗೊಳ್ಳುವಂತೆ ಮಾಡಿದೆ. ಅಷ್ಟಾಗಿಯೂ ಈ ಕೇಸ್ ಬಗ್ಗೆ ಪೂರ್ಣ ವಿಚಾರಣೆ ನಡೆಸಿ ತೀರ್ಪು ನೀಡಲು ಸಾಂವಿಧಾನಿಕ ಕೋರ್ಟ್‌ಗೆ ಪುರುಸೊತ್ತಿಲ್ಲ!

ಎರಡು ವರ್ಷಕ್ಕಿಂತ ಹೆಚ್ಚು ಕಾಲವಾದರೂ ಪೌರತ್ವ ತಿದ್ದುಪಡಿ ಕಾನೂನಿಗೆ (ಸಿಎಎ) ಒಡ್ಡಲಾಗಿರುವ ಸಾಂವಿಧಾನಿಕ ಸವಾಲುಗಳಿಗೆ ಕೋರ್ಟ್‌ನ ಪ್ರತಿಕ್ರಿಯೆ ಇಲ್ಲ. ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಪರಿಣಾಮ ಬೀರುವ ಇತರ ಮಹತ್ವದ ವಿಷಯಗಳಾದ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾನೂನಿಗೆ ತಿದ್ದುಪಡಿ ವಿಷಯದಲ್ಲಿಯೂ ಕೋರ್ಟ್ ಪ್ರತಿಸ್ಪಂದನೆಯಿಲ್ಲ. ಜನರನ್ನು ಅನಿರ್ದಿಷ್ಟ ಅವಧಿ ವರೆಗೆ ಬಂಧನದಲ್ಲಿಡಲು ಈ ಕಾನೂನಿನ ಸೆಕ್ಷನ್ 43 (ಡಿ) (5)ಯಂಥ ಕರಾಳ ನಿಯಮಗಳು ಅವಕಾಶ ನೀಡುತ್ತವೆ.

ಮಧ್ಯಪ್ರವೇಶ ಅಗತ್ಯ, ಆದರೆ ...

ಸಂವಿಧಾನ ಮತ್ತು ನಾಗರಿಕರ ಮೂಲಭೂತ ಹಕ್ಕುಗಳ ರಕ್ಷಣೆಗೆ ಸುಪ್ರೀಂ ಕೋರ್ಟ್‌ನ ಮಧ್ಯಪ್ರವೇಶ ತುಂಬಾ ಅಗತ್ಯವಾಗಿರುವ ಕಾಲಘಟ್ಟದಲ್ಲಿ 'ನ್ಯಾಯಾಂಗದ ಈ ನುಣುಚಿಕೊಳ್ಳುವ' ಪ್ರವೃತ್ತಿ ತೀರಾ ನಿರಾಶೆಯ ಸಂಗತಿಯಾಗಿದೆ. ಅದರಲ್ಲೂ ತಮ್ಮ ಅಧಿಕಾರಾವಧಿಯ ಆರಂಭದಲ್ಲಿ ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕೆ ಆದ್ಯತೆ ನೀಡುವುದಾಗಿ ಹೇಳಿದ್ದ ಹಾಲಿ ಸಿಜೆಐ ರಮಣ ಅವರಿಂದ ಜನರಿಗೆ ಈ ವಿಚಾರದಲ್ಲಿ ಹೆಚ್ಚಿನ ನಿರೀಕ್ಷೆಯಿತ್ತು. ಕೋರ್ಟ್ ಮುಂದಿರುವ ಪ್ರಮುಖ ಸಾಂವಿಧಾನಿಕ ಕೇಸ್‌ಗಳನ್ನು ನಿರ್ಧರಿಸುವ ಪ್ರಕ್ರಿಯೆಯನ್ನು ಅವರು ತ್ವರಿತಗೊಳಿಸುವರೆಂಬ ವಿಶ್ವಾಸವಿತ್ತು.

ಅನು: ವಿಶ್ವ

ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಸಹಯೋಗ ಇರಬೇಕೇ ಹೊರತು ವಿವಾದವಲ್ಲ–ಕೇರಳ ಶಿಕ್ಷಣ ಮಂತ್ರಿ



ಕೇರಳ ಸಾರ್ವಜನಿಕ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಮಾದರಿಯನ್ನು ಸ್ಥಾಪಿಸಿದೆ. ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ವಿಷಯಕ್ಕೆ ಬಂದಾಗ, ಸಹಯೋಗ ಮತ್ತು ವಿಚಾರ ವಿನಿಮಯವು ರಾಜ್ಯಗಳ ಒಳಗೆ ಮಾತ್ರವಲ್ಲ, ರಾಜ್ಯಗಳು ಮತ್ತು ದೇಶಗಳ ನಡುವೆಯೂ ನಡೆಯಬೇಕು. ಈ ವಿಷಯದಲ್ಲಿ ನಮಗೆ ಬೇಕಿರುವುದು ವಿವಾದವಲ್ಲ, ಒಡನಾಡಿ ಭಾವ ಎಂದು ಕೇರಳ ಶಿಕ್ಷಣ ಮಂತ್ರಿ ವಿ.ಶಿವನ್ ಕುಟ್ಟಿ ಹೇಳಿದ್ದಾರೆ. ಅವರು ದಿಲ್ಲಿಯ ಶಾಸಕಿ ಮತ್ತು ಆಮ್ ಆದ್ಮಿ ಪಾರ್ಟಿಯ ಮುಖಂಡರಾದ ಆತಿಶಿಯವರ ಒಂದು ಟ್ವೀಟಿಗೆ ಸಂಬಂಧಪಟ್ಟಂತೆ ಸ್ಪಷ್ಟೀಕರಣ ನೀಡುತ್ತ ಹೀಗಂದಿದ್ದಾರೆ.

"ಕೇರಳದ ಅಧಿಕಾರಿಗಳಿಗೆ ಕಲ್ಕಾಜಿಯಲ್ಲಿರುವ ನಮ್ಮ ಶಾಲೆಯೊಂದರಲ್ಲಿ ಆತಿಥ್ಯ ನೀಡುವುದು ಅದ್ಭುತವಾಗಿದೆ. ಅವರು ತಮ್ಮ ರಾಜ್ಯದಲ್ಲಿ ನಮ್ಮ ಶಿಕ್ಷಣ ಮಾದರಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಜಾರಿಗೆ ತರಲು ಉತ್ಸುಕರಾಗಿದ್ದರು. ಇದು ಕೇಜ್ರಿವಾಲ್ ಸರ್ಕಾರದ ರಾಷ್ಟ್ರ ನಿರ್ಮಾಣದ ಕಲ್ಪನೆ. ಸಹಯೋಗದಿಂದ ಅಭಿವೃದ್ಧಿ" ಎಂದು ಆತಿಶಿಯವರು ತಮ್ಮ ಟ್ವೀಟಿನಲ್ಲಿ ಹೇಳಿದ್ದರು.

ಇದಕ್ಕೆ ಪ್ರತಿಯಾಗಿ ಕೇರಳದ ಶಿಕ್ಷಣ ಮಂತ್ರಿಗಳು "ಕೇರಳದ ಶಿಕ್ಷಣ ಇಲಾಖೆ 'ದಿಲ್ಲಿ ಮಾದರಿ'ಯಿಂದ ಕಲಿಯಲು ಯಾವುದೇ ಅಧಿಕಾರಿಯನ್ನು ಕಳುಹಿಸಿಲ್ಲ. ಅದೇ ವೇಳೆಗೆ, ಕಳೆದ ತಿಂಗಳು 'ಕೇರಳ ಮಾದರಿ'ಯನ್ನು ಅಧ್ಯಯನ ಮಾಡಲು ದಿಲ್ಲಿಯಿಂದ ಭೇಟಿ ನೀಡಿದ್ದ ಅಧಿಕಾರಿಗಳಿಗೆ ಸಕಲ ನೆರವನ್ನು ನೀಡಲಾಗಿದೆ. ಎಎಪಿ ಶಾಸಕರು ಯಾವ 'ಅಧಿಕಾರಿಗಳನ್ನು' ಸ್ವಾಗತಿಸಿದ್ದಾರೆ ಎಂದು ನಾವು ತಿಳಿಯ ಬಯಸುತ್ತೇವೆ" ಎಂದು ಟ್ವೀಟ್ ಮಾಡಿದ್ದರು.

ಎಎಪಿ ಶಾಸಕಿಯವರು 'ಸ್ವಾಗತಿಸಿದ್ದು' ಕೇರಳದ ಎರಡು ಖಾಸಗಿ ಸಿ.ಬಿ.ಎಸ್.ಇ. ಶಾಲೆಗಳ ಪ್ರಿನ್ಸಿಪಾಲ್ ಮತ್ತು ಮ್ಯಾನೇಜರನ್ನು ಎಂದು ಆ ಮೇಲೆ ತಿಳಿದು ಬಂತು. ಇವರು ರಾಜ್ಯದ ಸಿ.ಬಿ.ಎಸ್.ಇ ಶಾಲಾ ಸಂಘಟನೆಗಳ ಪದಾಧಿಕಾರಿಗಳು ಎಂದು ಹೇಳಲಾಗಿದೆ.

ಈ ಹಿನ್ನೆಲೆಯಲ್ಲಿ ಶಿವನ್ ಕುಟ್ಟಿಯವರು ಈ ಕೆಳಗಿನ ಸ್ಪಷ್ಟೀಕರಣ ನೀಡಿದ್ದಾರೆ:

"ಪ್ರಸ್ತುತ ವಿವಾದಕ್ಕೆ ಸಂಬಂಧಿಸಿದಂತೆ ನನ್ನ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ನಿಮ್ಮ ಟ್ವೀಟ್‌ನಲ್ಲಿ 'ಕೇರಳದಿಂದ ಅಧಿಕಾರಿಗಳು' ಎಂಬ ಪದಗುಚ್ಛವನ್ನು ಬಳಸಲಾಗಿದೆ, ಇದಕ್ಕೆ ಪ್ರತಿಕ್ರಿಯೆಯಾಗಿ ನಾನು ಅಧಿಕಾರಿಗಳನ್ನು ಕೇರಳ ಸರ್ಕಾರದಿಂದ ಕಳುಹಿಸಲಾಗಿಲ್ಲ ಎಂದು ಸ್ಪಷ್ಟಪಡಿಸಿದೆ. ತಪ್ಪಿನ ಅರಿವಾಗಿ ಆಮ್ ಆದ್ಮಿ ಪಕ್ಷದ ಕೇರಳ ಘಟಕ ವಿಷಾದ ವ್ಯಕ್ತಪಡಿಸಿದೆ (ಪೋಸ್ಟ್ ಜೊತೆಗೆ ಸ್ಕ್ರೀನ್ ಶಾಟ್ ಲಗತ್ತಿಸಲಾಗಿದೆ).

ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ವಿಷಯಕ್ಕೆ ಬಂದಾಗ, ಸಹಯೋಗ ಮತ್ತು ವಿಚಾರ ವಿನಿಮಯವು ರಾಜ್ಯಗಳ ನಡುವೆ ಮಾತ್ರವಲ್ಲ, ರಾಜ್ಯಗಳು ಮತ್ತು ದೇಶಗಳ ನಡುವೆಯೂ ನಡೆಯಬೇಕು ಎಂದು ಕೇರಳ ನಂಬುತ್ತದೆ.


ಕೇರಳದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಯಾವುದೇ ಸಂಘವು ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಇಲ್ಲಿ ಆ ಜವಾಬ್ದಾರಿಯನ್ನು ವಹಿಸಲಾಗಿರುವುದು ಜನತೆಯ ಸರಕಾರಕ್ಕೆ.

ಕೇರಳ ಸಾರ್ವಜನಿಕ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಮಾದರಿಯನ್ನು ಸ್ಥಾಪಿಸಿದೆ. ಈ ಬಗ್ಗೆ ಹೊಸದಿಲ್ಲಿಯ ನಿಯೋಗಕ್ಕೂ ಸ್ಪಷ್ಟನೆ ನೀಡಲಾಗಿದೆ. ಈ ವಿಷಯದಲ್ಲಿ ನಮಗೆ ಬೇಕಿರುವುದು ವಿವಾದವಲ್ಲ, ಒಡನಾಡಿ ಭಾವ ಎಂದು ನಾನು ದೃಢವಾಗಿ ನಂಬುತ್ತೇನೆ."

ಈ ಸಂದರ್ಭದಲ್ಲಿ 2016–17ರಲ್ಲಿ ನೀತಿ ಆಯೋಗದ 'ಶಾಲಾ ಶಿಕ್ಷಣ ಗುಣಮಟ್ಟ ಸೂಚ್ಯಂಕ'(ಎಸ್.ಇ.ಕ್ಯು.ಐ.)ದ ಈ ಪಟ್ಟಿಯನ್ನು ಸಿಪಿಐ(ಎಂ) ಮುಖಂಡರೊಬ್ಬರು ನೆನಪಿಸಿದ್ದಾರೆ; ಇದರ ಪ್ರಕಾರ ಕೇರಳ 82.29% ಅಂಕ ಪಡೆದು ಪ್ರಥಮ ಸ್ಥಾನದಲ್ಲಿದೆ. ದಿಲ್ಲಿ 69.9% ಅಂಕ ಪಡೆದು ನಾಲ್ಕನೇ ಸ್ಥಾನದಲ್ಲಿದೆ. 46.5% ಅಂಕ ಪಡೆದಿರುವ ಉತ್ತರಪ್ರದೇಶ 25ನೇ ಸ್ಥಾನದಲ್ಲಿ ಮತ್ತು 37.3% ಅಂಕ ಪಡೆದಿರುವ ಬಿಹಾರ 31ನೇ ಸ್ಥಾನದಲ್ಲಿವೆ.

52.9% ಅಂಕದೊಂದಿಗೆ ಕರ್ನಾಟಕ 18 ನೇ ಸ್ಥಾನದಲ್ಲಿದ್ದು, ದಕ್ಷಿಣದ 5 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಪೈಕಿ 5ನೇ ಸ್ಥಾನದಲ್ಲಿದೆ.

ಕಳಿಕೆಯ ಫಲಿತಗಳು ಮತ್ತು ಶಾಲಾ ಮೂಲರಚನೆಯನ್ನು ಆಧರಿಸಿ ಈ ಅಂಕಗಳನ್ನು ಕೊಡಲಾಗಿದೆ.





ಸೌಹಾರ್ದ ಮೇ ದಿನ

ಶಕ್ತಿಯುತ ಐಕ್ಯ ಹೋರಾಟಕ್ಕೆ ಕಾರ್ಮಿಕ ವರ್ಗಕ್ಕೆ ಕರೆ


ಬೆಂಗಳೂರು ಟೌನ್ ಹಾಲ್

ಸಿ.ಐ.ಟಿ.ಯು ಮೇ-ದಿನದ ಪ್ರಣಾಳಿಕೆ-2022

ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಸೌಹಾರ್ದತೆಯ ದಿನವಾದ ಈ ಮೇ ದಿನದಂದು, ಸಿ.ಐ.ಟಿ.ಯು ದೊಡ್ಡ ಬಂಡವಾಳಶಾಹಿಗಳು ಮತ್ತು ಆಡಳಿತ ನಡೆಸುತ್ತಿರುವ ಅವರ ಪ್ರತಿನಿಧಿಗಳ ತೀವ್ರ ದಾಳಿಯ ಅಡಿಯಲ್ಲಿ ತಾವು ಕಷ್ಟಪಟ್ಟು ಹೋರಾಟದಿಂದ ಪಡೆದುಕೊಂಡಿದ್ದ ಹಕ್ಕುಗಳು ಮತ್ತು ಸೌಲಭ್ಯಗಳನ್ನು ರಕ್ಷಿಸಿಕೊಳ್ಳಲು ಮತ್ತು ಮರಳಿ ಪಡೆಯಲು ಹೋರಾಡುತ್ತಿರುವ ಕಾರ್ಮಿಕರಿಗೆ ಮತ್ತು ಪ್ರಪಂಚದ ಎಲ್ಲಾ ಶ್ರಮಜೀವಿಗಳಿಗೆ ಹೃತ್ಪೂರ್ವಕವಾಗಿ ಶುಭ ಕೋರುತ್ತದೆ.

ವಿಶ್ವಾದಾದ್ಯಂತ ಕಾರ್ಮಿಕ ವರ್ಗದಲ್ಲಿ, ಅದರಲ್ಲೂ ವಿಶೇಷವಾಗಿ ಯುವ ಕಾರ್ಮಿಕರಲ್ಲಿ ಸಂಘಟಿತರಾಗುವ ಕುರಿತು ಹೆಚ್ಚುತ್ತಿರುವ ಒತ್ತಾಸೆಯನ್ನು ಮತ್ತು ಬಂಡವಾಳಶಾಹಿಯ ಭದ್ರಕೋಟೆಯಾದ ಅಮೇರಿಕಾ ಸೇರಿದಂತೆ ಜಾಗತಿಕವಾಗಿ ಕಾರ್ಮಿಕ ವರ್ಗದ ಹೋರಾಟಗಳು ಹೆಚ್ಚುತ್ತಿರುವುದನ್ನು ಸ್ವಾಗತಿಸುತ್ತದೆ.

ಈ ಮೇ ದಿನದಂದು ತಮ್ಮ ಜನರ ಕಲ್ಯಾಣಕ್ಕೆ ಬದ್ಧವಾಗಿರುವ ಮತ್ತು ಬಲವಾದ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯವನ್ನು ಹೊಂದಿರುವ ಸಮಾಜವಾದಿ ರಾಷ್ಟ್ರಗಳಾದ ಚೀನಾ, ವಿಯೆಟ್ನಾಂ, ಕ್ಯೂಬಾ, ಉತ್ತರ ಕೊರಿಯಾ ಮತ್ತು ಲಾವೋಸ್, - ಸಾಂಕ್ರಾಮಿಕ ರೋಗವನ್ನು ನಿಭಾಯಿಸುತ್ತಿರುವ ಮತ್ತು ತಮ್ಮ ಜನರ ಜೀವನ ಮತ್ತು ಜೀವನೋಪಾಯವನ್ನು ರಕ್ಷಿಸುತ್ತಿರುವ ಶ್ಲಾಘನೀಯ ರೀತಿಯನ್ನು ಸಿಐಟಿಯು ಗಮನಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಯು.ಎಸ್.ಎ ಸೇರಿದಂತೆ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಲಕ್ಷಾಂತರ ಜನರು ಸಾಂಕ್ರಾಮಿಕ ರೋಗದಿಂದ ತಮ್ಮ ಜೀವಗಳನ್ನು ಕಳೆದುಕೊಂಡರು, ಅಲ್ಲಿ ಕಾರ್ಪೊರೇಟ್ ಲಾಭಗಳು ಸರ್ಕಾರಗಳ ಆದ್ಯತೆಯಾಗಿದೆ ಮತ್ತು ಸಾಂಕ್ರಾಮಿಕ ರೋಗವನ್ನು ಎದುರಿಸಲು ಬೇಕಾದ ವೈಜ್ಞಾನಿಕ ಮತ್ತು ತಾಂತ್ರಿಕ ಸಾಮರ್ಥ್ಯಗಳ ಹೊರತಾಗಿಯೂ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯವು ನಾಮ ಮಾತ್ರವಾಗಿದೆ. ಖಾಸಗಿ ಆರೋಗ್ಯ ಸೇವೆಯನ್ನು ಪಡೆಯಲು ಸಾಧ್ಯವಾಗದ ಕಾರ್ಮಿಕರು ಮತ್ತು ಬಡವರು ಹೆಚ್ಚಾಗಿ ಸಾವನ್ನಪ್ಪಿದರು ಅಷ್ಟೇ ಅಲ್ಲ. ನಮ್ಮ ದೇಶ ಭಾರತ ಸೇರಿದಂತೆ ಹಲವಾರು ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಸರ್ಕಾರಗಳು, ಶ್ರಮಜೀವಿಗಳ ಜೀವನ ಮತ್ತು ಜೀವನೋಪಾಯದ ಮೇಲೆ ಮತ್ತು ಕಾರ್ಮಿಕ ವರ್ಗದ ಸಂಘಟನೆ ಮಾಡುವ ಮತ್ತು ಸಾಮೂಹಿಕ ಕಾರ್ಯಾಚರಣೆಗಳ ಹಕ್ಕು ಸೇರಿದಂತೆ ಕಷ್ಟಪಟ್ಟು ಗಳಿಸಿದ ಹಕ್ಕುಗಳ ಮೇಲೆ ದಾಳಿಯನ್ನು ಹೆಚ್ಚಿಸಲು, ಕಾರ್ಮಿಕ ಕಾನೂನುಗಳನ್ನು ಬದಲಾಯಿಸಲು ಮತ್ತು ಹಲವಾರು ಇತರ ನಿರ್ಬಂಧಿತ/ದಮನಕಾರಿ ಕ್ರಮಗಳು ಮತ್ತು ನಿಷೇಧಿತ ವಿಧಾನಗಳನ್ನು ಜಾರಿಗೊಳಿಸಲು ಸಾಂಕ್ರಾಮಿಕ ರೋಗವನ್ನು ಬಳಸಿಕೊಂಡಿವೆ. ಅವರು ಕೆಲವು ದೊಡ್ಡ ಕಾರ್ಪೊರೇಟ್‌ಗಳಿಗೆ ಸಂಪತ್ತನ್ನು ಸಂಗ್ರಹಿಸಲು ಅನುವು ಮಾಡಿ ಕೊಡಲು ನವ ಉದಾರವಾದಿ ನೀತಿಗಳನ್ನು ಮತ್ತಷ್ಟು ತೀವ್ರವಾಗಿ ಮುಂದಕ್ಕೊಯ್ಯಲು ಪ್ರಯತ್ನಿಸುತ್ತಿದ್ದಾರೆ. ಪರಿಣಾಮ ವಾಗಿ, ಕೆಲಸದ ಪರಿಸ್ಥಿತಿಗಳು ಹದಗೆಟ್ಟಿವೆ. ಕೂಲಿ ಕಡಿಮೆಯಾಗಿದೆ. ಈ ಅವಧಿಯಲ್ಲಿ ಅಸಮಾನತೆಗಳು ಭಾರೀ ಪ್ರಮಾಣದಲ್ಲಿ ಹೆಚ್ಚಿವೆ. ಜಾಗತಿಕವಾಗಿ ಬಡತನ ಮತ್ತು ಹಸಿವು ಹೆಚ್ಚಾಗಿದೆ. ಅದೇ ಸಮಯದಲ್ಲಿ, ಇದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ, ಸಮಾಜವಾದಿ ಚೀನಾವು 2030 ರ ಗುರಿಯ ವರ್ಷಕ್ಕಿಂತ ಮುಂಚಿತವಾಗಿ ಬಡತನದ ಸಂಪೂರ್ಣ ನಿರ್ಮೂಲನೆಯನ್ನು ಸಾಧಿಸಿದೆ.



ಕೋವಿಡ್ ಸಾಂಕ್ರಾಮಿಕವು ಜನಕೇಂದ್ರಿತ ಸಮಾಜವಾದಿ ವ್ಯವಸ್ಥೆ ಮತ್ತು ಲಾಭ ಕೇಂದ್ರಿತ ಬಂಡವಾಳಶಾಹಿ ವ್ಯವಸ್ಥೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ತೆರೆದಿಟ್ಟಿದೆ.

ಈ ಮೇ ದಿನದಂದು, ಸಿಐಟಿಯು ಸಮಾಜವಾದಿ ದೇಶಗಳ ಜನರಿಗೆ ಶುಭಾಶಯಗಳನ್ನು ಕೋರುತ್ತದೆ ಮತ್ತು ಅವರ ದೇಶಗಳಲ್ಲಿನ ಸಮಾಜವಾದಿ ವ್ಯವಸ್ಥೆಯನ್ನು ರಕ್ಷಿಸುವ ಹೋರಾಟದಲ್ಲಿ ಅವರೊಂದಿಗೆ ನಿಲ್ಲುತ್ತದೆ. ತಮ್ಮ ಮಾತೃಭೂಮಿಗಾಗಿ ಹೋರಾಡುತ್ತಿರುವ ಪ್ಯಾಲೆಸ್ಟೈನ್ ಜನರೊಂದಿಗೆ ಮತ್ತು USA ಬೆಂಬಲದೊಂದಿಗೆ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಮುಗ್ಧ ಮತ್ತು ನಿರಾಯುಧ ಜನರನ್ನು ಕೊಲ್ಲುವ ಅಮಾನವೀಯ ಇಸ್ರೇಲಿ ದಾಳಿಗಳ ವಿರುದ್ಧ ನಿಲ್ಲುತ್ತದೆ.

ಈ ಮೇ ದಿನದಂದು ತೈಲ, ಅನಿಲ, ಖನಿಜ ಮತ್ತು ಇತರ ನೈಸರ್ಗಿಕ ಸಂಪನ್ಮೂಲಗಳ, ಸರಕುಗಳನ್ನು ಸಾಗಿಸಲು ಸಮುದ್ರಯಾನದ ಮಾರ್ಗಗಳ ಮೇಲೆ ನಿಯಂತ್ರಣ ಸಾಧಿಸಲು ಮತ್ತು US ಪ್ರಾಬಲ್ಯವನ್ನು ಸ್ಥಾಪಿಸಲು, USA ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳಿಂದ ಪ್ರಚೋದಿಸಲ್ಪಟ್ಟ ವಿಶ್ವದ ವಿವಿಧ ಭಾಗಗಳಲ್ಲಿ ಸಾಮ್ರಾಜ್ಯಶಾಹಿ ಯುದ್ಧಗಳು ಮತ್ತು ಮಿಲಿಟರಿ ಹಸ್ತಕ್ಷೇಪಗಳನ್ನು ಸಿಐಟಿಯು ಬಲವಾಗಿ ಖಂಡಿಸುತ್ತದೆ. ತನ್ನ ಆರ್ಥಿಕ ಶಕ್ತಿಯು ಕುಸಿಯುತ್ತಿರುವ ಹೊರತಾಗಿಯೂ, ರಾಜಕೀಯ ಪ್ರಭಾವ ಮತ್ತು ಮಿಲಿಟರಿ ಶಕ್ತಿಯನ್ನು ಅಮೇರಿಕಾ ದನ್ನು ಬಳಸುತ್ತಿದೆ ತನ್ನ ಜಾಗತಿಕ ಪ್ರಾಬಲ್ಯವನ್ನು ಉಳಿಸಿಕೊಳ್ಳಲಷ್ಟೇ ಅಲ್ಲ, ಬದಲಿಗೆ ಮತ್ತಷ್ಟು ವಿಸ್ತರಿಸಲು, ಪ್ರಜಾಸತ್ತಾತ್ಮಕವಾಗಿ ಚುನಾಯಿತ ಮತ್ತು ಜನಪರ ಸರ್ಕಾರಗಳನ್ನು ಪದಚ್ಯುತಗೊಳಿಸಿ ಮತ್ತು ಅದರ ಸ್ಥಾನದಲ್ಲಿ ತನ್ನ ಕೈಗೊಂಬೆಯಾಗಿರುವ ಬಲಪಂಥೀಯ ಸರ್ಕಾರಗಳನ್ನು ಸ್ಥಾಪಿಸಲು ವಿವಿಧ ದೇಶಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಮುಂದುವರೆಸಿದೆ. ಈ ದಿಕ್ಕಿನಲ್ಲಿ, ಯುಎಸ್ಎ ತನ್ನ ನಾಯಕತ್ವದಲ್ಲಿ ಸಾಮ್ರಾಜ್ಯಶಾಹಿ ಕೂಟಗಳನ್ನು ಸ್ಥಾಪಿಸಲು ವಿಸ್ತರಣಾವಾದಿ ಮತ್ತು ಯಜಮಾನಿಕೆಯ ಪ್ರಯತ್ನವನ್ನು ಮಾಡುತ್ತಿದೆ. ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ ಕುತಂತ್ರಗಳ ಮೂಲಕ ವಿಶ್ವದ ವಿವಿಧ ಭಾಗಗಳಲ್ಲಿ ಸಶಸ್ತ್ರ ಸಂಘರ್ಷಗಳು ಸೇರಿದಂತೆ ಸಂಘರ್ಷಮಯ ಪರಿಸ್ಥಿತಿಯನ್ನು ಬೆಳೆಸಲು ಮತ್ತು ಪ್ರಚೋದಿಸಲು ಇದು ಸತತವಾಗಿ ಪ್ರಯತ್ನಿಸುತ್ತಿದೆ. ರಂಗಭೂಮಿಯಾಗಿ ಉಕ್ರೇನಿನಲ್ಲಿ ನಡೆಯುತ್ತಿರುವ ಯುದ್ಧವು ಅಂತಹ ಅನಾಗರಿಕ ಸಾಮ್ರಾಜ್ಯಶಾಹಿ ವಿನ್ಯಾಸಗಳ ಇತ್ತೀಚಿನ ಅಭಿವ್ಯಕ್ತಿಯಾಗಿದೆ.

ಅನೇಕ ದೇಶಗಳಲ್ಲಿ, ವಿಶೇಷವಾಗಿ ಲ್ಯಾಟಿನ್ ಅಮೆರಿಕಾದಲ್ಲಿ ನವ ಉದಾರವಾದ ಮತ್ತು ಸಾಮ್ರಾಜ್ಯಶಾಹಿ ಹಸ್ತಕ್ಷೇಪದ ವಿರುದ್ಧದ ಹೋರಾಟಗಳಲ್ಲಿ ಹೆಚ್ಚಿನ ಸಂಖ್ಯೆಯ ಜನರು ಸೇರುತ್ತಿದ್ದಾರೆ ಎಂದು ಸಿಐಟಿಯು ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತದೆ. ಕಾರ್ಮಿಕ ವರ್ಗವು ಈ ಹೋರಾಟಗಳಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತಿದೆ. ಇದು ಹಲವಾರು ದೇಶಗಳಲ್ಲಿ ಪ್ರಗತಿಪರ ಮತ್ತು ಜನಪರ ಸರ್ಕಾರಗಳು ಅಧಿಕಾರಕ್ಕೆ ➚





ಬೆಂಗಳೂರು ಫ್ರೀಡಂ ಪಾರ್ಕ್





ಬರಲು ಕಾರಣವಾಗಿದೆ. ಈ ಸರ್ಕಾರಗಳು ಅಪಖ್ಯಾತಿ ಪಡೆದ ನವ ಉದಾರವಾದಿ ನೀತಿಗಳನ್ನು ಕೈ ಬಿಡುತ್ತವೆ ಮತ್ತು ಜನರ ಹಿತಾಸಕ್ತಿ ಮತ್ತು ಕಲ್ಯಾಣವನ್ನು ಮುಂಚೂಣಿಯಲ್ಲಿಡುವ ನೀತಿಗಳನ್ನು ಜಾರಿಗೆ ತರುತ್ತಿವೆ, ಅಂತರಾಷ್ಟ್ರೀಯ ಹಣಕಾಸು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಬೆದರಿಕೆಗಳನ್ನು ತಪ್ಪಿಸಲು ಜನರ ಬೆಂಬಲವನ್ನು ಕ್ರೋಢೀಕರಿಸುತ್ತವೆ ಎಂದು ಸಿಐಟಿಯು ಆಶಿಸುತ್ತದೆ. ಕಾರ್ಮಿಕ ವರ್ಗದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಪ್ರಜ್ಞೆಯನ್ನು ಹೆಚ್ಚಿಸುವುದು ನವ ಉದಾರವಾದಿ ಶೋಷಣೆಯ ವಿರುದ್ಧ ಮತ್ತು ತನ್ನ ಹಕ್ಕುಗಳು ಮತ್ತು ಜೀವನೋಪಾಯದ ರಕ್ಷಣೆಗಾಗಿ ನಡೆಯು ಐಕ್ಯ ಹೋರಾಟಗಳ ಅವಿಭಾಜ್ಯ ಅಂಗವಾಗಿದೆ. ಈ ಮೇ ದಿನದಂದು, ಸಿಐಟಿಯು ಅಂತಹ ಪ್ರಜ್ಞೆಯನ್ನು ಇನ್ನಷ್ಟು ಹೆಚ್ಚಿಸುವ ಮತ್ತು ಆಳಗೊಳಿಸುವ ತನ್ನ ಸಂಕಲ್ಪವನ್ನು ಪುನರುಚ್ಚರಿಸುತ್ತದೆ.

ಈ ಮೇ ದಿನದಂದು ಪ್ರಭುತ್ವದ ದಬ್ಬಾಳಿಕೆ, ಉದ್ಯೋಗದಾರಿಂದ ಶೋಷಣೆ, ಯುಎಪಿಎ, ಎಸ್ಮಾ, ಇಡಿಎಸ್ಎ ಇತ್ಯಾದಿ ದಮನಕಾರಿ ಕಾನೂನುಗಳ ಮೂಲಕ ಸರ್ಕಾರದ ನಿರಂಕುಶಾಧಿಕಾರದ ಮಧ್ಯಪ್ರವೇಶಗಳು ಮತ್ತು ನ್ಯಾಯಾಂಗದ ನಿಷೇದಿತ ಮಧ್ಯಪ್ರವೇಶಗಳು ಸೇರಿದಂತೆ ಅಸಂಖ್ಯಾತ ತೊಂದರೆಗಳನ್ನು ಮೀರಿ, ಈ ವರ್ಷ ಮಾರ್ಚ್ 28–29 ರಂದು ನಡೆಸಲಾದ ಭವ್ಯವಾದ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕಾಗಿ ಭಾರತದ ಕಾರ್ಮಿಕ ವರ್ಗವನ್ನು ಸಿಐಟಿಯು ಅಭಿನಂದಿಸುತ್ತದೆ. ಜಂಟಿ ಟ್ರೇಡ್ ಯೂನಿಯನ್ ಆಂದೋಲನವು ಕಾರ್ಮಿಕರಿಗೆ ಸೀಮಿತವಾದ ಬೇಡಿಕೆಗಳನ್ನು ಮಾತ್ರ ಎತ್ತಲಿಲ್ಲ ಎಂಬುದು ಹೆಚ್ಚು ಗಮನಾರ್ಹವಾಗಿದೆ. ಕಾರ್ಮಿಕರು, ಆದರೆ ರೈತರು, ಕೃಷಿ ಕಾರ್ಮಿಕರು ಮತ್ತು ಸಾಮಾನ್ಯ ಜನರು ಸೇರಿದಂತೆ ಶ್ರಮಜೀವಿಗಳ ಎಲ್ಲಾ ವರ್ಗಗಳ ಸಮಗ್ರ ಬೇಡಿಕೆಗನ್ನು ಎತ್ತಿತ್ತು.

ನಮ್ಮ ದೇಶದ ಉತ್ಪಾದನಾ ಸಾಮರ್ಥ್ಯ ಮತ್ತು ಅದರ ಸ್ವಾವಲಂಬನೆಯನ್ನು ದುರ್ಬಲಗೊಳಿಸುವ ಮತ್ತು ದುರ್ಬಲಗೊಳಿಸುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವಿನಾಶಕಾರಿ ನೀತಿಗಳನ್ನು ವಿರೋಧಿಸಲು ಈ ಮುಷ್ಕರವು 'ಆತ್ಮ ನಿರ್ಭರತೆ' ಎಂಬ ಸಂಶಯಾಸ್ಪದ ಘೋಷಣೆಯೊಂದಿಗೆ ಜನರನ್ನು ದಾರಿ ತಪ್ಪಿಸುತ್ತದೆ. ಮೋದಿ ಸರ್ಕಾರವು ನಮ್ಮ ನೈಸರ್ಗಿಕ ಸಂಪನ್ಮೂಲಗಳು, ಭೂಮಿ, ಖನಿಜ ಸಂಪನ್ಮೂಲಗಳು, ಜಲಮೂಲಗಳು, ಅರಣ್ಯಗಳು, ಮೂಲಸೌಕರ್ಯ ವ್ಯವಸ್ಥೆಗಳು ಮತ್ತು ಸ್ವತ್ತುಗಳು ಮತ್ತು ಜನರ ಹಣದಿಂದ ನಿರ್ಮಿಸಲಾದ ಸಾರ್ವಜನಿಕ ವಲಯವನ್ನು? ಅಂದರೆ ನಮ್ಮ ದೇಶದ ಸಂಪೂರ್ಣ ಸಂಪತ್ತನ್ನು–ತನ್ನ ದೇಶೀಯ ಮತ್ತು ವಿದೇಶಿ ಕಾರ್ಪೊರೇಟ್ ಆಪ್ತರಿಗೆ ಹಸ್ತಾಂತರಿಸುತ್ತಿದೆ. ಖಾಸಗೀಕರಣ, ರಾಷ್ಟ್ರೀಯ ಮನಿಟೈಜೇಶನ್–ಪೈಪ್ಲೈನ್ ಮತ್ತು ಲ್ಯಾಂಡ್ ಮಾನಿಟೈಸೇಶನ್ ಕಾರ್ಪೊರೇಷನ್ ಇವೆಲ್ಲವೂ ಸಾರ್ವಜನಿಕ ಸಂಪತ್ತನ್ನು ಖಾಸಗಿಯವರ ಕೈಗೆ ವರ್ಗಾಯಿಸಲು ಉದ್ದೇಶಿಸಲಾದ ತಂತ್ರಗಳು.

'ದೇಶವನ್ನು ಉಳಿಸಿ ಮತ್ತು ಜನರನ್ನು ಉಳಿಸಿ' ಎಂಬ ಘೋಷಣೆಯೊಂದಿಗೆ ನಡೆದ ಮುಷ್ಕರದಲ್ಲಿ ಪಾಲ್ಗೊಂಡ ಕೋಟ್ಯಾಂತರ ಕಾರ್ಮಿಕರಿಗೆ ಸಿಐಟಿಯು ವಂದನೆ ಸಲ್ಲಿಸುತ್ತದೆ. ಮುಷ್ಕರಕ್ಕೆ ಸಾಮಾನ್ಯ ಜನರ ಅಪಾರ ಬೆಂಬಲ ಸಿಕ್ಕಿತು ಮತ್ತು ಅದರ ಪರಿಣಾಮವು ಹಲವಾರು ರಾಜ್ಯಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೂ ಕಂಡು ಬಂದಿದೆ.

ಪ್ರತಿಭಟನಾ ಪ್ರದರ್ಶನಗಳು, ರೈಲು ಮತ್ತು ರಸ್ತೆ ತಡೆ ಇತ್ಯಾದಿಗಳಲ್ಲಿ ದೈಹಿಕ ಭಾಗವಹಿಸುವಿಕೆ ಸೇರಿದಂತೆ ವಿವಿಧ ರೀತಿಯಲ್ಲಿ ಒಗ್ಗಟ್ಟು ಪ್ರದರ್ಶಿಸಿ ಮುಷ್ಕರವನ್ನು ಬೆಂಬಲಿಸಿದ ಲಕ್ಷಾಂತರ ರೈತರು, ಕೃಷಿ ಕಾರ್ಮಿಕರು, ಮಹಿಳೆಯರು, ಯುವಜನರು, ವಿದ್ಯಾರ್ಥಿಗಳು ಮತ್ತು ಎಲ್ಲಾ ವರ್ಗದ ಪ್ರಗತಿಪರ ಜನರಿಗೆ ಸಿಐಟಿಯು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

ಸಿಐಟಿಯು ನಮ್ಮ ಸಮಾಜದ ಸಂಪತ್ತನ್ನು ಉತ್ಪಾದಿಸುವ ಮೂಲ ವರ್ಗಗಳಾದ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ಬೆಳೆಯುತ್ತಿರುವ ಒಗ್ಗಟ್ಟಿನ ಕ್ರಮಗಳನ್ನು ಮೆಚ್ಚುಗೆ ಮತ್ತು ಉತ್ಸಾಹದಿಂದ ಗಮನಿಸುತ್ತದೆ. ಈ ಒಗ್ಗಟ್ಟನ್ನು ಮತ್ತಷ್ಟು ಆಳವಾಗಿಸಿ ಬಲಪಡಿಸಿ ತಳಮಟ್ಟದವರೆಗೆ ಕೊಂಡೊಯ್ಯುವ ಅಗತ್ಯವನ್ನು ಅದು ಪ್ರತಿಪಾದಿಸುತ್ತದೆ.

ಸಿ.ಐ.ಟಿ.ಯು ತಳಮಟ್ಟದಲ್ಲಿ–ಹಳ್ಳಿಗಳು ಮತ್ತು



ಮೊಹಲ್ಲಾಗಳವರೆಗೆ. ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ಸಾಮಾನ್ಯ ಬೇಡಿಕೆಗಳ ಮೇಲೆ ಪ್ರಬಲವಾದ ಜಂಟಿ ಹೋರಾಟಗಳನ್ನು ಅಭಿವೃದ್ಧಿಪಡಿಸಲು ಉಪಕ್ರಮವನ್ನು ತೆಗೆದುಕೊಳ್ಳಲು ಸಿಐಟಿಯು ಬದ್ಧವಾಗಿದೆ, ಇದು ಅಂತಹ ಏಕತೆಯನ್ನು ಹೆಚ್ಚಿಸುತ್ತದೆ ಮತ್ತು ಶ್ರಮಜೀವಿಗಳ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಪಡಿಸಲು ಸಹಾಯ ಮಾಡುತ್ತದೆ ಎಂದು ಸಿಐಟಿಯು ನಂಬುತ್ತದೆ.

ಈ ಮೇ ದಿನದಂದು ಸಿಐಟಿಯು ನವ ಉದಾರವಾದಿ ನೀತಿಗಳನ್ನು ಧಿಕ್ಕರಿಸುವ ಮತ್ತು ಪ್ರತಿರೋಧದ ಮಟ್ಟಕ್ಕೆ ಕಾರ್ಮಿಕರ ಜಂಟಿ ಹೋರಾಟಗಳನ್ನು ಹೆಚ್ಚಿಸಲು ತನ್ನ ಪ್ರಯತ್ನಗಳನ್ನು ನವೀಕೃತ ಶಕ್ತಿಯೊಂದಿಗೆ ಮುಂದುವರೆಸುವ ತನ್ನ ಸಂಕಲ್ಪವನ್ನು ಪುನರುಚ್ಚರಿಸುತ್ತದೆ. ಇದು ಪರ್ಯಾಯವಾಗಿ ಜನಪರ ಕಾರ್ಮಿಕ ಮತ್ತು ಜನರ ಪರ ನೀತಿಗಳಿಗಾಗಿ ಹೋರಾಟವನ್ನು ಬಲಪಡಿಸುತ್ತದೆ. ಈ ಮುಷ್ಕರವು ಹಿಂದಿನ ಅನೇಕ ಸಾರ್ವತ್ರಿಕ ಮತ್ತು ವಲಯವಾರು ಮುಷ್ಕರಗಳಂತೆ, ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಅವರಿಗೆ ವಿವರಿಸಿದರೆ, ಅವರ ದಿನನಿತ್ಯದ ಸಮಸ್ಯೆಗಳು ಮತ್ತು ಸರ್ಕಾರದ ನೀತಿಗಳ ನಡುವಿನ ಸಂಬಂಧದ ಬಗ್ಗೆ ಅವರಿಗೆ ಅರಿವು ಮೂಡಿಸಿದರೆ, ಕಾರ್ಮಿಕರು ತಮ್ಮ ಅನೇಕ ಕಷ್ಟಗಳು ಮತ್ತು ಕಷ್ಟಗಳನ್ನು ಲೆಕ್ಕಿಸದೆ ಹೋರಾಟಕ್ಕೆ ಸಿದ್ಧರಾಗುತ್ತಾರೆ ಮತ್ತು ತ್ಯಾಗ ಮಾಡಲು ಸಿದ್ಧರಾಗಿದ್ದಾರೆ ಎಂದು ನಮಗೆ ಕಲಿಸಿದೆ. ಈ ಮೇ ದಿನದಂದು, ಸಿಐಟಿಯು ತನ್ನ ಎಲ್ಲಾ ಕಾರ್ಯಕರ್ತರು, ಸದಸ್ಯರು ಮತ್ತು ಕೇಡರ್ ಗಳಿಗೆ ಈ ಕಾರ್ಯವನ್ನು ತುರ್ತು ಮತ್ತು ಗಂಭೀರತೆಯಿಂದ ತೆಗೆದುಕೊಳ್ಳಬೇಕು ಮತ್ತು ಹೆಚ್ಚು ಶಕ್ತಿಯುತವಾದ ಐಕ್ಯ ಹೋರಾಟಗಳಿಗೆ ಕಾರ್ಮಿಕ ವರ್ಗವನ್ನು ಸಿದ್ಧಪಡಿಸಬೇಕು ಎಂದು ಕರೆ ನೀಡುತ್ತದೆ

ಈ ಮೇ ದಿನದಂದು ತಮ್ಮ ಚುನಾವಣಾ ಲಾಭಗಳಿಗಾಗಿ ಸಮಾಜವನ್ನು ಧ್ರುವೀಕರಣಗೊಳಿಸಲು ಹಿಂದೂಗಳ ಧಾರ್ಮಿಕ ಶ್ರದ್ಧೆ ಮತ್ತು ನಂಬಿಕೆಗಳನ್ನು ಬಳಸಿಕೊಳ್ಳುವ ಆರ್ಎಸ್ಎಸ್ ಮತ್ತು ಬಿಜೆಪಿ ಸೇರಿದಂತೆ ಅದರ ವಿವಿಧ ವಿಭಾಗಗಳ ರಾಜಕೀಯ ಯೋಜನೆಯಾದ 'ಹಿಂದುತ್ವ' ಸಿದ್ಧಾಂತದ ದಾಳಿಗೆ ಒಳಗಾಗಿರುವ ನಮ್ಮ ಜನರ ಐಕ್ಯತೆಯನ್ನು ತನ್ನ ಎಲ್ಲಾ ಶಕ್ತಿಯಿಂದ ರಕ್ಷಿಸಲು ಸಿಐಟಿಯು ಪ್ರತಿಜ್ಞೆ ಮಾಡುತ್ತದೆ. ಪ್ರತಿಪಾದಕ ಸಾವರ್ಕರ್ ಅವರೇ ವ್ಯಾಖ್ಯಾನಿಸಿರುವ ರೀತಿಯಲ್ಲಿ 'ಹಿಂದುತ್ವ' ಒಂದು ರಾಜಕೀಯ ಯೋಜನೆಯಾಗಿದೆ ಮತ್ತು ಅದಕ್ಕೆ ಹಿಂದೂ ಧರ್ಮದೊಂದಿಗೆ ಯಾವುದೇ ಸಂಬಂಧವಿಲ್ಲ ಎಂದು ನಮ್ಮ ದೇಶದ ಜನರಿಗೆ ನೆನಪಿಸುತ್ತದೆ. ಧರ್ಮ, ಜಾತಿ, ಪ್ರದೇಶ, ಭಾಷೆ, ಇತ್ಯಾದಿಗಳ ಆಧಾರದ ಮೇಲೆ ಸಮಾಜವನ್ನು ಧ್ರುವೀಕರಿಸುವ ಆರ್.ಎಸ್.ಎಸ್. ಮತ್ತು ಅದರ ವಿವಿಧ ಸಂಘಟನೆಗಳ ಪ್ರಯತ್ನಗಳನ್ನು ಸಿಐಟಿಯು ಬಲವಾಗಿ ಖಂಡಿಸುತ್ತದೆ. ಪ್ರತಿ ಸಂದರ್ಭದಲ್ಲಿ, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಹೀಗೆ ಯಾವುದೇ ಧರ್ಮದ ಜನರ ಪ್ರತಿಯೊಂದು ಹಬ್ಬವನ್ನು ಬಳಸಿಕೊಳ್ಳಲಾಗುತ್ತಿದೆ. ವಿವಿಧ ಸಮುದಾಯಗಳ ನಡುವೆ ಉದ್ವಿಗ್ನತೆ ಮತ್ತು ಗಲಭೆಯ ಪರಿಸ್ಥಿತಿಯನ್ನು ಸೃಷ್ಟಿಸಲು ಮತ್ತು ದ್ವೇಷವನ್ನು ಹರಡಲು. ಹಿಜಾಬ್, ಹಲಾಲ್ ಮಾಂಸ, ಅಜಾನ್, ಮುಸ್ಲಿಂ ವ್ಯಾಪಾರಿಗಳಿಗೆ ದೇವಾಲಯಗಳ ಬಳಿ ಅಂಗಡಿಗಳನ್ನು ಸ್ಥಾಪಿಸಲು ಸ್ಥಳಾವಕಾಶ ನಿರಾಕರಣೆ, ರಾಮನವಮಿಯಂತಹ ಸಂದರ್ಭಗಳಲ್ಲಿ ಮಾಂಸವನ್ನು ಬಡಿಸುವುದು ಅಥವಾ ತಿನ್ನುವುದರ ಮೇಲಿನ ನಿಷೇದ ಮುಂತಾದ ಕ್ರಮಗಳಿಂದ ಈ ಹೇಯ ಉದ್ದೇಶವನ್ನು ಸಾಧಿಸಲು ಬೇಕಾದ ಸಂದರ್ಭಗಳನ್ನು ಸೃಷ್ಟಿಸಲಾಗುತ್ತಿದೆ.

ಗೋರಕ್ಷಕರ ಗುಂಪುಗಳು ಗೋರಕ್ಷೆಯ ನೆಪದಲ್ಲಿ ಮುಸ್ಲಿಮರು ಮತ್ತು ದಲಿತರ ಮೇಲೆ ಹಲ್ಲೆ ನಡೆಸಿ ಹತ್ಯೆ ಮಾಡುತ್ತಿವೆ. ಬಿಜೆಪಿ ಮತ್ತು ಆರೆಸ್ಸೆಸ್ ನಾಯಕರ ಸಕ್ರಿಯ ಒಳಗೊಳ್ಳುವಿಕೆಯೊಂದಿಗೆ ಈ ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ, ಮಹಿಳೆಯರು ಮತ್ತು, ದಲಿತರ ಮೇಲಿನ ತಾರತಮ್ಯವನ್ನು ಕಾನೂನುಬದ್ಧ ಗೊಳಿಸಲಾಗುತ್ತಿದೆ ಮತ್ತು ಸಮಾಜದಲ್ಲಿ ಅವರ ಸ್ಥಾನಮಾನಗಳನ್ನು ಮನುಸ್ಮೃತಿ ಪ್ರಕಾರ ವ್ಯಾಖ್ಯಾನಿಸಲಾಗುತ್ತಿದೆ. ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಅತ್ಯಾಚಾರ ಮತ್ತು ಹತ್ಯೆ, ಅಂತರ್ಜಾತಿ ವಿವಾಹಗಳನ್ನು ಆಯ್ಕೆ ಮಾಡಿಕೊಳ್ಳುವ ದಂಪತಿಗಳ

ಪುಟ 10 ಕ್ಕೆ



ಶೋಷಕರು ಒಂದಾಗಿರುವಾಗಿರುವಾಗ, ಶೋಷಣೆಗೊಳಗಾದವರು ಒಂದಾಗಬೇಕು

ಮೇ ದಿನ ಚಿರಾಯುವಾಗಲಿ

ಎಸ್. ವರಲಕ್ಷ್ಮಿ

ಚಾಮರಾಜನಗರದಲ್ಲಿ 'ಪೋಷಣ್ ಅಭಿಯಾನ' ದಲ್ಲಿ ಕೆಲಸ ಮಾಡುವ ಒಬ್ಬ ಮಹಿಳೆ ಫೋನ್ ಮಾಡಿ ಮಾತನಾಡಿದರು. ಏನಂತಾ ಗೊತ್ತೇ "ನಾನು ಗರ್ಭಿಣಿ 7 ತಿಂಗಳು ನನ್ನ ಹೆರಿಗೆಗೆ ಹೆರಿಗೆ ರಜೆ ಕೊಡುತ್ತಾರೆಯೇ" ಎಂದು. ನಾನು ಹೇಳಿದೆ, ನೀವು ಮೊದಲು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಪತ್ರ ಬರೆಯಿರಿ, ಅವರು ಏನು ಉತ್ತರ ಕೊಡುತ್ತಾರೆಂದು ನೋಡಿ, ನಂತರ ಮಾತನಾಡೋಣ ಎಂದಿದ್ದೆ.

ಈ ಉದಾಹರಣೆ ಒಬ್ಬ ಹೆಣ್ಣು ಮಗಳದ್ದು ಮಾತ್ರ. ಆದರೆ ವಾಸ್ತವ ಏನು ಗೊತ್ತಾ? ಇವರ ರೀತಿಯಲ್ಲಿ ಕೆಲಸ ಮಾಡುವ ಎಲ್ಲಾ ವಿಭಾಗಗಳ ಮಹಿಳಾ ಗುತ್ತಿಗೆ ಕಾರ್ಮಿಕರದ್ದು. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಮಹಿಳೆಯರ ಪ್ರಾಕೃತಿಕ ಸಹಜ ಪ್ರಕ್ರಿಯೆಯ ಭಾಗವಾಗಿ ಬಂದಿರುವ ಹೆರಿಗೆ ರಜೆಯ ಹಕ್ಕನ್ನು ಪಡೆಯಲು ಆಗದಿರುವುದು ದುರಂತ ಅಲ್ಲವೇ?

ದೊಡ್ಡ ಪ್ರಮಾಣದ ಬೆಲೆಯೇರಿಕೆ, ಪೆಟ್ರೋಲ್, ಡೀಸೆಲ್, ಜಿಎಸ್‌ಟಿ, ಸಿಎಸ್‌ಟಿ ಗಳಿಂದ ತೆರಿಗೆಯ ಭಾರ ಹೆಚ್ಚಾಗಿ ಜನತೆ ತತ್ತರಿಸಿ ಹೋಗುತ್ತಿದ್ದಾರೆ. ಜನತೆ ಅಂದರೆ ಯಾರು ರೈತ, ಕೃಷಿ ಕೂಲಿಕಾರ, ಕಾರ್ಮಿಕ, ನೌಕರ, ವ್ಯಾಪಾರಿ, ಸ್ವಯಂ ಉದ್ಯೋಗಗಳಲ್ಲಿ ಕೆಲಸ ಮಾಡುವವರು ತಾನೇ.

ಆದರೆ ಪ್ರಭುತ್ವಗಳು ಅಗತ್ಯ ವಸ್ತುಗಳ ಬೆಲೆಯೇರಿಕೆ ಮಾಡುವಾಗ ಜನರ ಆದಾಯವನ್ನು ಯಾಕೆ ಹೆಚ್ಚು ಮಾಡುವುದಿಲ್ಲ? ಅಂದರೆ ಪ್ರಭುತ್ವಗಳ ಹಿತಾಸಕ್ತಿಯೇನು? ಸಂವಿಧಾನದ ಪ್ರಕಾರ ಭಾರತ ದೇಶ ಕಲ್ಯಾಣ ರಾಜ್ಯವಾಗಬೇಕು, ಸಮಾಜವಾದಿ ಕಣ್ಣೋಟದಲ್ಲಿ ಮುಂದುವರೆಯಬೇಕು ಎಂದಿದೆ. ಆದರೆ ಇಂದಿನ ಪ್ರಭುತ್ವದ ಯೋಜನೆಗಳು ಕರ್ನಾಟಕಕ್ಕೆ ಪೂರಕವಾಗಿರುವ ಬದಲು ಜನರ ಬದುಕನ್ನು ಅಸಹನೀಯಗೊಳಿಸುತ್ತಿರುವುದು ಗೋಚರವಾಗುತ್ತದೆ.

ಉದಾಹರಣೆಗೆ ರಾಜ್ಯದಲ್ಲಿ ಬಹುತೇಕ ಜನರು ಭದ್ರತೆಯಿಲ್ಲದ, ಕಾರ್ಮಿಕ ಕಾನೂನುಗಳು ಅನ್ವಯವಾಗದ ವಿಭಾಗಗಳಲ್ಲಿ ಹೆಚ್ಚು ದುಡಿಯುತ್ತಿದ್ದಾರೆ. ಉದಾ: ಕೃಷಿ ಕೂಲಿಕಾರರು, ನರೇಗಾದಲ್ಲಿ ಕೆಲಸ ಮಾಡುವವರು, ಬೀದಿ ಬದಿ ಅಂಗಡಿಗಳಲ್ಲಿ ಕೆಲಸ ಮಾಡುವವರು, ಹೊಸ ತಾಂತ್ರಿಕತೆಯಿಂದ ವೇಗವಾಗಿ ವಸ್ತುಗಳನ್ನು ಮನೆಗೆ ತಲುಪಿಸುವವರು ಮತ್ತು ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಕೆಲಸ ಮಾಡುವವರು ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದವರು. ಈ ವಿಭಾಗಗಳಲ್ಲಿ ಕೋಟ್ಯಾಂತರ ಮಂದಿ ದುಡಿಯುತ್ತಿದ್ದಾರೆ. ಆದರೆ ಇವರಿಗೆ ಯಾವ ಕಾನೂನುಗಳು ಅನ್ವಯವಾಗುವುದಿಲ್ಲ.

ಗುತ್ತಿಗೆ, ಹೊರಗುತ್ತಿಗೆಯಲ್ಲಿ ಖಾಸಗೀ ಕ್ಷೇತ್ರದಲ್ಲಿ 70% ಸರ್ಕಾರಿ ಕ್ಷೇತ್ರದಲ್ಲಿ 40% ಜನರು ದುಡಿಯುತ್ತಿದ್ದಾರೆ. ಅಸಂಘಟಿತ ಕ್ಷೇತ್ರದಲ್ಲಿ ಕಟ್ಟಡ, ಬೀಡಿ, ಮನೆಗೆಲಸಗಾರರು, ಸೆಕ್ಯೂರಿಟಿ ಗಾರ್ಡ್, ಐ.ಟಿ., ಬಿ.ಟಿ. ಗಳಲ್ಲಿ ಕೆಲಸ ಮಾಡುವವರು ಲಕ್ಷಾಂತರ ಜನರಿದ್ದರೂ ಇವರಿಗೆ ಯಾವ ಕಾನೂನುಗಳು ಜಾರಿಯಾಗುವುದಿಲ್ಲ.

ಉದಾಹರಣೆಗೆ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವವರ ಪರಿಸ್ಥಿತಿ ನೋಡೋಣ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಯೋಜನೆಗಳು ಐಸಿಡಿಎಸ್, ಐಸಿಪಿಎಸ್ ಗಳಿವೆ. ಐಸಿಡಿಎಸ್ ಯೋಜನೆಯಡಿ ಅಂಗನವಾಡಿ, ಪೋಷಣ್ ಅಭಿಯಾನ್ ಯೋಜನೆಗಳು ಕೇಂದ್ರ ಸರ್ಕಾರದ್ದು, ಮಾತೃವಂದನಾ, ಭಾಗ್ಯಲಕ್ಷ್ಮಿ, ಸ್ತ್ರೀಶಕ್ತಿ, ಕೌಟುಂಬಿಕ ಕಲಹ ಕಾಯ್ದೆಯಡಿಯಲ್ಲಿ ಕೆಲಸ ಮಾಡುವ ಯೋಜನೆಗಳು ರಾಜ್ಯ ಸರ್ಕಾರದ್ದು. ಈ ಯೋಜನೆಗಳಲ್ಲಿ ದೇಶಾದ್ಯಂತ ಅಂಗನವಾಡಿ ನೌಕರರನ್ನು ಬಿಟ್ಟು ಲಕ್ಷಾಂತರ ಜನ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಈ ದೇಶದ ಭವಿಷ್ಯವನ್ನು ರೂಪಿಸುವ ಮಕ್ಕಳ ಮತ್ತು ಮಹಿಳೆಯರ ವಿಚಾರವಾಗಿ ಕೆಲಸ ಮಾಡುತ್ತಿರುವವರು.

ಇವರಿಗೆ ವೇತನ ಆಯೋಗಗಳು ಶಿಫಾರಸು ಮಾಡುವ ಬಿ ಗುಂಪಿನಿಂದಿಡಿದು ಡಿ ಗುಂಪಿನವರೋ ಕೆಲಸ ಮಾಡುತ್ತಾರೆ. ಇವರೆಲ್ಲರೂ ಹೊರಗುತ್ತಿಗೆ! ಮಕ್ಕಳ ಹಕ್ಕುಗಳ ರಕ್ಷಣಾಧಿಕಾರಿಗಳ ಹುದ್ದೆಯೂ ಹೊರಗುತ್ತಿಗೆ!!

ಇನ್ನೂ ಇವರ ವೇತನಗಳು ಅಂದರೆ ಸಾವಿರದಿಂದ 21 ಸಾವಿರ ಮಾತ್ರ. ಈ ವೇತನ ಐಸಿಡಿಎಸ್ ನವರಿಗೆ ನಿಗದಿಯಾಗಿದ್ದು 2014-15 ರಲ್ಲಿ.

ಪೋಷಣ್ ಅಭಿಯಾನದವರಿಗೆ 6 ತಿಂಗಳಿಗೊಮ್ಮೆ ವೇತನ ಮತ್ತು ಏನನ್ನು ಕೇಳಬಾರದು!! ಮಾತೃವಂದನಾ, ಮಹಿಳಾ ಅಭಿವೃದ್ಧಿ ನಿಗಮ, ಭಾಗ್ಯಲಕ್ಷ್ಮಿ, ಸ್ತ್ರೀಶಕ್ತಿಯಲ್ಲಿ ಕೆಲಸ ಮಾಡುವವರು ಸರಕಾರ ಕೊಟ್ಟಾಗ, ಹೆಚ್ಚು ಮಾಡಿದಾಗ ಮಾತ್ರ. ಮತ್ತೇನನ್ನು ಕೇಳಿಕೊಳ್ಳುವ ಹಾಗಿಲ್ಲ. ಕೇಳಿದರೋ ಕೂಡಲೇ ಕೆಲಸದಿಂದ ತೆಗೆಯುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಹಾಗಿದ್ದರೆ ಇವರೆಲ್ಲರೂ ಅನಕ್ಷರಸ್ಥರೇ ಅಲ್ಲವೇ ಅಲ್ಲ. ಇವರೆಲ್ಲರೂ ಎಂಎಸ್‌ಡಬ್ಲ್ಯೂ, ಎಂಜಿನಿಯರ್, ಎಲ್.ಎಲ್.ಬಿ, ಎಂ.ಎ, ಬಿಕಾಂ, ಹೀಗೆ ಪದವಿಗಳನ್ನು ಪಡೆದುಕೊಂಡ ವಿದ್ಯಾವಂತ ಯುವಕ-ಯುವತಿಯರ ಸೈನ್ಯ. ಇಂತಹ ವಿದ್ಯಾವಂತರನ್ನು ತನಗೆ ಬೇಕಾದ ಹಾಗೇ ದುಡಿಸಿ ಬಿಸಾಡುವುದು.

ಅಂಗನವಾಡಿ, ಬಿಸಿಯೂಟ, ಆಶಾ ಮಹಿಳೆಯರಿಗೆ ಕಾನೂನುಗಳೇ ಇಲ್ಲದ್ದರಿಂದ ಕನಿಷ್ಠ ವೇತನ ಅನ್ವಯವಾಗುವುದಿಲ್ಲ. ಆದರೆ ನಿವೃತ್ತಿ ಪರಿಹಾರವೂ ಕೊಡದಿದ್ದರೆ ಹೇಗೆ? ಶಿಕ್ಷಣ ಇಲಾಖೆ ಮಾರ್ಚ್ 31, 2022 ರಂದು ಅಮಾನವೀಯವಾಗಿ 12 ಸಾವಿರ ಬಿಸಿಯೂಟ ಮಹಿಳೆಯರನ್ನು ನಿವೃತ್ತ ಪರಿಹಾರ ಘೋಷಣೆ ಮಾಡದೇ ಕೆಲಸದಿಂದ ತೆಗೆದಿರುವುದು ಅನ್ಯಾಯದ ಪರಾಮಾವಧಿಯಲ್ಲವೇ?

ಹೀಗೆ ಕಾನೂನುಗಳು ಅನ್ವಯವಾಗುವುದಿಲ್ಲ ಎಂಬ ಹೆಸರಿನಲ್ಲಿ, ಕಾನೂನು ಇದ್ದರೂ ಜಾರಿ ಮಾಡದೇ ಶೋಷಣೆ ಮಾಡುತ್ತಿರುವುದು ಮಾದರಿ ಆಡಳಿತ ಕೊಡಬೇಕಾದ ಸರ್ಕಾರವೇ.

ಏಕೆ ಹೀಗೆ?

ಬಂಡವಾಳದ ಕೇಂದ್ರೀಕರಣ ಅಂದರೆ ಬಂಡವಾಳ ತನ್ನ ಬಿಕ್ಕಟ್ಟನ್ನು ಎದುರಿಸಬೇಕಾದರೆ ಅದರ ಹೊರೆಯನ್ನು ಜನತೆಯ ಮೇಲೆ ಅದರಲ್ಲಿ ದುಡಿಯುವ ಜನತೆಯ ಮೇಲೆ ಹೊರಿಸುವುದು ಅದರ ಪ್ರವೃತ್ತಿ. ಈ ಪ್ರವೃತ್ತಿಯನ್ನು ಘೋಷಣೆ ಮಾಡುವುದೇ ಪ್ರಭುತ್ವ. ಘೋಷಣೆ ಮಾಡಲು ಬಲಪಂಥೀಯ ಪ್ರಭುತ್ವಗಳಿಂದಲೇ ಸಾಧ್ಯವಾಗುವುದು. ಅಂತಹ ಸಾಧ್ಯತೆ ಸಾಧಿಸಿ ತೋರಿಸಿರುವುದೇ ಇಂದಿನ ರಾಜ್ಯ & ಕೇಂದ್ರದಲ್ಲಿರುವ ಸರ್ಕಾರಗಳು. ತನಗೆ ಹೆರಿಗೆ ಭತ್ಯೆ ಸಿಕ್ಕಿಲ್ಲವೆಂದರೆ, ತಿಂಗಳಿಗೆ ಸರಿಯಾಗಿ ವೇತನ ಬರದಿದ್ದರೆ, ವೇತನ ಹೆಚ್ಚಳವಾಗದಿದ್ದರೆ, ತನ್ನ ಕೆಲಸದ ಸ್ಥಳದಲ್ಲಿ ನ್ಯಾಯ ಸಿಗಲಿಲ್ಲವೆಂದರೆ ಇಂದಿನ ಕಾರ್ಮಿಕ ಮತ್ತು ನೌಕರ ವರ್ಗ ಸಂಘಟನೆಗಳನ್ನು ದೂಷಿಸುತ್ತವೆ ಆದರೆ ವ್ಯವಸ್ಥೆಯನ್ನಲ್ಲ.

ವ್ಯವಸ್ಥೆಯನ್ನು ಅರ್ಥ ಮಾಡಿಸುವ ಸಾಧನಗಳು ನಮ್ಮಲ್ಲಿ ಕಡಿಮೆಯಾಗಿ ಜಾತಿ, ಧರ್ಮದ ಅಫೀಮು ತಲೆಗೇರಿದೆ. ಅದು ಬದುಕಿನ ಪ್ರಶ್ನೆಗಳನ್ನು ನಾಶವಾಗಿಸುತ್ತದೆ.

ರಾಷ್ಟ್ರಪ್ರೇಮದ ಹೆಸರಿನಲ್ಲಿ ಮನುಷ್ಯ ಮನುಷ್ಯನನ್ನು ಕೊಂದು ತೃಪ್ತಿ ಪಡುವ ವಾತಾವರಣವನ್ನು ಸೃಷ್ಟಿಸುತ್ತದೆ.

ಇದಕ್ಕೆ ಪೂರಕವಾಗಿ ಕಾವಲು ನಾಯಿಗಳ ತರಹ ಕೆಲಸ ಮಾಡಬೇಕಾದ ಮಾಧ್ಯಮಗಳು, ಬಂಡವಾಳದ ಕೇಂದ್ರೀಕರಣದ ಪರವಾಗಿರುವುದರಿಂದ ದುಡಿಯುವ ಜನತೆ ಇದೇ ಸತ್ಯವೆಂದೂ ನಂಬಿದೆ.

ಆದ್ದರಿಂದ 2022 ರ ಮೇ ದಿನ ಶೋಷಕರು ಒಂದು, ಶೋಷಣೆಗೊಳಗಾದವರು ಒಂದಾಗಬೇಕು ಎನ್ನುವ ಘೋಷಣೆಯೊಂದಿಗೆ ಸಿಡಿದೇಳಬೇಕಿದೆ.

ಸೌಹಾರ್ದ ಮೇ ದಿನ.......

ಪುಟ 9 ರಿಂದ

ಮೇಲೆ, ವಿಶೇಷವಾಗಿ ದಲಿತ ಹುಡುಗರ ಮೇಲೆ ದಾಳಿಗಳು ಮತ್ತು ಕೊಲೆಗಳು ಹೆಚ್ಚಿವೆ.

ನಾವು, ಜನರು ಅಂಗೀಕರಿಸಿದ ನಮ್ಮ ಸಂವಿಧಾನದ ಬದಲಿಗೆ ಮನುಸ್ಮೃತಿಯಿಂದ ಮಾರ್ಗದರ್ಶಿಸಲ್ಪಟ್ಟ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸುವ ಆರ್.ಎಸ್.ಎಸ್. ಯೋಜನೆಯನ್ನು ಪೂರೈಸಲು ನಮ್ಮ ಗಣರಾಜ್ಯದ ಜಾತ್ಯತೀತ ಅಡಿಪಾಯವನ್ನು ನಾಶಮಾಡಲು ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮಾಡುತ್ತಿರುವ ನಿರಂತರ ಪ್ರಯತ್ನಗಳನ್ನು ಸಿಐಟಿಯು ಬಲವಾಗಿ ವಿರೋಧಿಸುತ್ತದೆ. ಬಲವಾದ ವಿರೋಧದ ನಡುವೆಯೂ ಮೋದಿ ಸರ್ಕಾರವು ಅಂಗೀಕರಿಸಿದ ಅಂಂ ಪೌರತ್ವದ ಮಾನದಂಡವಾಗಿ ಧರ್ಮವನ್ನು ಪರಿಚಯಿಸುತ್ತದೆ ಮತ್ತು ಮುಸ್ಲಿಂ ಅಲ್ಪಸಂಖ್ಯಾತರನ್ನು ಅವರ ಸ್ವಂತ ದೇಶದಲ್ಲಿ ಅವರು ಹುಟ್ಟಿ ಬೆಳೆದ ದೇಶದಲ್ಲೇ ಎರಡನೇ ದರ್ಜೆಯ ನಾಗರಿಕರನ್ನಾಗಿ ಮಾಡುತ್ತಿದೆ. ಈ ಮೇ ದಿನದಂದು ತನ್ನ ನೀತಿಗಳಿಗೆ ಭಿನ್ನಾಭಿಪ್ರಾಯ ಮತ್ತು ವಿರೋಧದ ಧ್ವನಿಗಳನ್ನು ನಿಗ್ರಹಿಸಲು, ಯುಎಪಿಎ, ಎನ್‌ಎಸ್‌ಎ ಮುಂತಾದ ಕಠೋರ ಕಾನೂನುಗಳನ್ನು ಮಾತ್ರವಲ್ಲದೆ ಪ್ರಭುತ್ವದ ಯಂತ್ರ ಎಲ್ಲಾ ವಿಭಿನ್ನ ಅಂಗ ಸಂಸ್ಥೆಗಳನ್ನು ಬಳಸುವುದು ಸೇರಿದಂತೆ ನಿರ್ಲಜ್ಜ ಮತ್ತು ಕಾನೂನುಬಾಹಿರ ವಿಧಾನಗಳ ಮೂಲಕ ಬಿಜೆಪಿ ಸರ್ಕಾರದ ನಡೆಸುತ್ತಿರುವ ಕ್ರಮಗಳಿಗೆ ತನ್ನ ತೀವ್ರ ಖಂಡನೆಯನ್ನು ಸಿಐಟಿಯು ಪುನರುಚ್ಚರಿಸುತ್ತದೆ.

ಸರ್ಕಾರದ ನೀತಿಗಳನ್ನು ವಿರೋಧಿಸುವ ಬುದ್ಧಿಜೀವಿಗಳು, ಪತ್ರಕರ್ತರು, ಮಾನವ ಹಕ್ಕುಗಳ ಕಾರ್ಯಕರ್ತರು, ಟ್ರೇಡ್ ಯೂನಿಯನ್ ಮತ್ತು ಇತರ ಕಾರ್ಯಕರ್ತರನ್ನು ಜಾಮೀನು ಇಲ್ಲದೆ ಜೈಲಿಗೆ ತಳ್ಳಲಾಗುತ್ತಿದೆ. ದೃಶ್ಯ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮ ಎರಡನ್ನೂ ಬಿಗಿಯಾದ ನಿಯಂತ್ರಣದಲ್ಲಿ ಇರಿಸಲು ಪ್ರಯತ್ನಿಸಲಾಗುತ್ತದೆ. ಗೋದಿಮೀಡಿಯಾವನ್ನು ಪ್ರೋತ್ಸಾಹಿಸಲಾಗುತ್ತಿದೆ. ಪ್ರಜಾಸತ್ತಾತ್ಮಕ ಹಕ್ಕುಗಳು ತೀವ್ರ ದಾಳಿಗೆ ಒಳಗಾಗಿವೆ. ಮೋದಿಯವರ ಆಡಳಿತದಲ್ಲಿರುವ ಭಾರತವನ್ನು ಈಗ 'ಚುನಾವಣಾ ನಿರಂಕುಶಾಧಿಕಾರ' ಎಂದು ಕರೆಯಲಾಗುತ್ತದೆ. ಆಳುವ ಪಕ್ಷ ಬಿಜೆಪಿಯು ತನ್ನ ಕಾರ್ಪೊರೇಟ್ ದಾನಿಗಳಿಂದ ಸಂಗ್ರಹಿಸಿದ ಹಣವನ್ನು ಭಾರಿ ಖರ್ಚು ಮಾಡುವುದರೊಂದಿಗೆ ಚುನಾವಣೆಗಳು ಅಪಹಾಸ್ಯಕ್ಕೆ ಕಾರಣವಾಗುತ್ತವೆ. ಬಿಜೆಪಿಯು ಅಪಾರದರ್ಶಕ ಚುನಾವಣಾ ಬಾಂಡ್‌ಗಳ ಮೂಲಕ ಹೆಚ್ಚಿನ ಪ್ರಮಾಣದ ದೇಣಿಗೆಯನ್ನು ಸ್ವೀಕರಿಸಿದೆ ಎಂದು ವರದಿಯಾಗಿದೆ. ದೊಡ್ಡ ಕಾರ್ಪೊರೇಟ್‌ಗಳು ಬಿಜೆಪಿಯನ್ನು ತಮ್ಮ ಹಿತಾಸಕ್ತಿಗಳನ್ನು ಪೂರೈಸಲು ಸರ್ಕಾರದಲ್ಲಿ ತನ್ನ ಅಧಿಕಾರವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಇಚ್ಛೆ ಮತ್ತು ಸಾಮರ್ಥ್ಯಕ್ಕಾಗಿ ಆದ್ಯತೆ ನೀಡುತ್ತವೆ ಎಂಬುದು ಸ್ಪಷ್ಟವಾಗಿದೆ.

ನಮ್ಮ ದೇಶದಲ್ಲಿ ಬಿಜೆಪಿಯಂತಹ ಬಲಪಂಥೀಯ ಶಕ್ತಿಗಳಿಗೆ ಬಂಡವಾಳಶಾಹಿ ವರ್ಗದ ಇಂತಹ ಬೆಂಬಲ ಮತ್ತು ಪ್ರೋತ್ಸಾಹವು ಬಂಡವಾಳಶಾಹಿಯ ವ್ಯವಸ್ಥಿತ ಬಿಕ್ಕಟ್ಟಿಗೆ ಅದರ ಪ್ರತಿಕ್ರಿಯೆಯಾಗಿದೆ ಮತ್ತು ನವ ಉದಾರವಾದಿ ನೀತಿಗಳ ವಿರುದ್ಧ ಜನರ ಆಕ್ರೋಶವನ್ನು ಜನಪರ ಪರ್ಯಾಯ ನೀತಿಗಳಿಗಾಗಿ ಹೋರಾಟಕ್ಕೆ ಜನರನ್ನು ಅಣಿನೆರೆಸಲು ಪ್ರಯತ್ನಿಸುತ್ತಿರುವ ಎಡಪಕ್ಷಗಳನ್ನು ಕಡೆಗಣಿಸುವ ಉದ್ದೇಶ ಹೊಂದಿದೆ ಎಂದು ಸಿಐಟಿಯು ಪ್ರತಿಪಾದಿಸುತ್ತದೆ. ಬಲಪಂಥೀಯ ಶಕ್ತಿಗಳು ನವ ಉದಾರವಾದವನ್ನು ವಿರೋಧಿಸುವುದಿಲ್ಲ. ಆದರೆ ನವ ಉದಾರವಾದದ ವಿರುದ್ಧ ಜನರ ಕೋಪವನ್ನು ಬಳಸಿಕೊಳ್ಳುತ್ತವೆ ಮತ್ತು ಬೇರೆ ಮತಧರ್ಮ, ಅಥವಾ ಜನಾಂಗ, ಅಥವಾ ಜಾತಿ, ಅಥವಾ ಪ್ರದೇಶ, ಅಥವಾ ಲಿಂಗ ಅಥವಾ ಭಾಷೆಗೆ ಸೇರಿದ 'ಇತರರ' ವಿರುದ್ಧ ಈ ಕೋಪವನ್ನು ತಿರುಗಿಸಲು ಪ್ರಯತ್ನಿಸುತ್ತವೆ ಮತ್ತು ಹೀಗೆ ಜನರನ್ನು ವಿಭಜಿಸುತ್ತವೆ. ಅವರ ಏಕತೆಯನ್ನು ಭಂಗಗೊಳಿಸುತ್ತವೆ ಮತ್ತು ಐಕ್ಯ ಹೋರಾಟಗಳನ್ನು ದುರ್ಬಲಗೊಳಿಸುತ್ತವೆ. ಸರ್ವಾಧಿಕಾರಿ ಮತ್ತು ಫ್ಯಾಸಿಸ್ಟ್ ಕ್ರಮಗಳು ಮತ್ತು ಬಲದ ಬಳಕೆಯ ಮೂಲಕ ಜನಪ್ರಿಯ ಹೋರಾಟಗಳನ್ನು ಮತ್ತು ಯಾವುದೇ ವಿರೋಧವನ್ನು ಹತ್ತಿಕ್ಕಲು ಅವರು ಸಿದ್ಧರಾಗಿದ್ದಾರೆ.

ಈ ಮೇ ದಿನದಂದು, ವ್ಯವಸ್ಥಿತ ಬಿಕ್ಕಟ್ಟನ್ನು ಎದುರಿಸುತ್ತಿರುವ ಬಂಡವಾಳಶಾಹಿ ವರ್ಗಗಳ ಈ ಸಮಗ್ರ ದಾಳಿಯನ್ನು ಅರ್ಥಮಾಡಿಕೊಳ್ಳಲು ಸಿಐಟಿಯು ನಮ್ಮ ದೇಶದ ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ, ದಾಳಿಗಳನ್ನು ಹೆಚ್ಚಿಸದೆ ಮತ್ತು ಜನರ ಮೇಲೆ ಹೊರೆ ಹೊರಿಸದೆ ಆ ಬಿಕ್ಕಟ್ಟಿನಿಂದ ಹೊರಬರಲು ಆಳುವ ವರ್ಗಕ್ಕೆ ಸಾಧ್ಯವಿಲ್ಲ. ಸಮಾಜದ ಮೇಲೆ ವಿಷಪೂರಿತ ಕೋಮು ವಿಭಜಕ ಕುತಂತ್ರಗಳನ್ನು ನಿಯೋಜಿಸುವ ಬಲಪಂಥೀಯ ನಿರಂಕುಶ ಸರ್ಕಾರಗಳ ಸಹಾಯದಿಂದ ಜನರ ಹೋರಾಟಗಳನ್ನು ನಿಗ್ರಹಿಸದೆ ಅವರು ತಮ್ಮ ಲಾಭ ಮತ್ತು ಸಂಪತ್ತನ್ನು ರಕ್ಷಿಸಲು ಸಾಧ್ಯವಿಲ್ಲ. ಬಂಡವಾಳಶಾಹಿ ವ್ಯವಸ್ಥೆಯ ದಿವಾಳಿತನದ ಬಗ್ಗೆ ಈ ಸಮಗ್ರ ತಿಳುವಳಿಕೆಯೊಂದಿಗೆ ಕಾರ್ಮಿಕ ವರ್ಗವು ತನ್ನ ಪ್ರತಿದಾಳಿಗಳನ್ನು ರೂಪಿಸಬೇಕಾಗಿದೆ.

ಈ ಮೇ ದಿನದಂದು 1923ರಲ್ಲಿ ಅಂದಿನ ಮದ್ರಾಸಿನಲ್ಲಿ ಕಾಮ್ರೇಡ್ ಎಂ. ಸಿಂಗಾರವೇಲು ಅವರು ಕೆಂಪು ಧ್ವಜಾರೋಹಣ ನೆರವೇರಿಸಿದ ನಮ್ಮ ದೇಶದ ಮೊದಲ ಮೇ ದಿನಾಚರಣೆಯ ಶತಮಾನೋತ್ಸವ ವರ್ಷದ ಪ್ರಾರಂಭವಾಗುತ್ತಿದೆ.

ವಿಭಜಕ ಶಕ್ತಿಗಳ ಕುತಂತ್ರವನ್ನು ಸೋಲಿಸುವ ಮೂಲಕ ನಮ್ಮ ಐಕ್ಯತೆ, ಇಡೀ ಕಾರ್ಮಿಕ ವರ್ಗದ ಐಕ್ಯತೆ, ರೈತರೊಂದಿಗೆ ಐಕ್ಯತೆಯನ್ನು ಬಲಪಡಿಸಲು ಪ್ರತಿಜ್ಞೆ ಮಾಡೋಣ.

ನಮ್ಮ ವಲಯವಾರು ಬೇಡಿಕೆಗಳ ಮೇಲೆ, ನಮ್ಮ ಸಾಮಾನ್ಯ ಬೇಡಿಕೆಗಳ ಮೇಲೆ ಮತ್ತು ಪ್ರಪಂಚದಾದ್ಯಂತ ದುಡಿಯುವ ಜನರ ಪ್ರಸ್ತುತ ದುಃಸ್ಥಿತಿಗೆ ಮೂಲ ಕಾರಣವಾದ ನವ ಉದಾರವಾದದ ವಿರುದ್ಧ ಐಕ್ಯ ಹೋರಾಟಗಳನ್ನು ತೀವ್ರಗೊಳಿಸಲು ಪ್ರತಿಜ್ಞೆ ಮಾಡೋಣ.

ಬಂಡವಾಳಶಾಹಿ ವ್ಯವಸ್ಥೆಯ ವೈಫಲ್ಯಗಳು ಮತ್ತು ಜನರ ಮೂಲಭೂತ ಅಗತ್ಯಗಳಾದ- ಆಹಾರ, ಆರೋಗ್ಯ, ಶಿಕ್ಷಣ, ವಸತಿ ಇತ್ಯಾದಿಗಳನ್ನು ಪೂರೈಸಲು ಅಗತ್ಯವಿರುವ ಆದರೆ ಬೆರಳೆಣಿಕೆಯಷ್ಟು ಅತಿ ಶ್ರೀಮಂತರಿಂದ ದೋಚಲ್ಪಡುತ್ತಿರುವ ಜಾಗತಿಕ ಸಂಪತ್ತನ್ನು ಉತ್ಪಾದಿಸುವ ಕಾರ್ಮಿಕರು ಮತ್ತಿತರ ಶ್ರಮಜೀವಿಗಳ ಮೂಲಭೂತ ಅಗತ್ಯಗಳನ್ನು ಪೂರೈಸಲಾಗದ ಅದರ ಅಸಮರ್ಥತೆಯನ್ನು ಬಹಿರಂಗಪಡಿಸಲು ನಾವು ಐಕ್ಯ ಹೋರಾಟಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತೇವೆ ಎಂದು ಘೋಷಿಸೋಣ.

ಪರ್ಯಾಯ ಜನಪರ ನೀತಿಗಳಿಗಾಗಿ ಹೋರಾಟಕ್ಕೆ ಸಿದ್ಧರಾಗೋಣ
ಮೇ ದಿನ ಚಿರಾಯುವಾಗಲಿ
ಕಾರ್ಮಿಕ ವರ್ಗದ ಸೌಹಾರ್ದತೆ ಚಿರಾಯುವಾಗಲಿ
ಕಾರ್ಮಿಕ-ರೈತ ಮೈತ್ರಿ ಚಿರಾಯುವಾಗಲಿ
ಸಮಾಜವಾದ ಚಿರಾಯುವಾಗಲಿ
ಬಂಡವಾಳವಾದ ನಾಶವಾಗಲಿ





ಸಿಪಿಐ(ಎಂ) ಸ್ವತಂತ್ರ ಶಕ್ತಿಯ ಬೆಳವಣಿಗೆ –ನಮಗಿರುವ ಏಕೈಕ ಮಾರ್ಗ

ಕೆ. ಪ್ರಕಾಶ್

ಕೇರಳದ ಕಣ್ಣೂರಿನಲ್ಲಿ 2022 ಏಪ್ರಿಲ್ 6 ರಿಂದ 10 ರವರೆಗೆ ನಡೆದ ಸಿಪಿಐ(ಎಂ) 23 ನೇ ಮಹಾಧಿವೇಶನವು, ನಮ್ಮ ಸ್ವತಂತ್ರ ಶಕ್ತಿಯನ್ನು ಕಟ್ಟುವುದೇ ನಮಗಿರುವ ಏಕೈಕ ಮಾರ್ಗ ಎಂಬುದನ್ನು ಗಟ್ಟಿಯಾಗಿ ಧ್ವನಿಸಿತು. ಮಹಾಧಿವೇಶನದಲ್ಲಿ ಅಂಗೀಕಾರವಾದ ರಾಜಕೀಯ–ಸಂಘಟನಾ ವರದಿಯು, ಸಿಪಿಐ(ಎಂ)ನ ಸ್ವತಂತ್ರ ಶಕ್ತಿಯನ್ನು ಕಟ್ಟಿ ಬೆಳೆಸುವ ಚರ್ಚೆಯನ್ನು ವಿಮರ್ಶಾತ್ಮಕವಾಗಿ ನಡೆಸಿತಲ್ಲದೇ, ಹೊಸ ಹುರುಪು ಮತ್ತು ದೃಢತೆಯನ್ನು ಪ್ರದರ್ಶಿಸಿತು.

ಪ್ರಕಾಶ್ ಕಾರಟ್ ಅವರು ಮಂಡಿಸಿದ ರಾಜಕೀಯ ಸಂಘಟನಾ ವರದಿಯು ಮೂರು ಭಾಗಗಳನ್ನು ಒಳಗೊಂಡಿದೆ. ಒಂದು, 22ನೇ ಮಹಾಧಿವೇಶನದಲ್ಲಿ ತೀರ್ಮಾನಿಸಲಾಗಿದ್ದ ರಾಜಕೀಯ ಕಾರ್ಯತಂತ್ರ ಧೋರಣೆ ಮತ್ತು ಕರ್ತವ್ಯಗಳ ಜಾರಿಯ ವಿಮರ್ಶೆ, ಎರಡು, ಸಂಘಟನಾ ವಿಚಾರಗಳು ಮತ್ತು ಮೂರು, ಸಾಮೂಹಿಕ ರಂಗಗಳ ವರದಿಗಳು.

ಪಕ್ಷದ ಸಂಘಟನೆಯು ಎಷ್ಟು ಸಮರ್ಥವಾಗಿರುತ್ತದೋ ಅಷ್ಟು ಸರಿಯಾಗಿ ರಾಜಕೀಯ ಕಾರ್ಯತಂತ್ರವು ಜಾರಿಯಾಗುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ, ಆರಂಭದ ಎರಡು ವರ್ಷಗಳಲ್ಲಿ 2019 ರ ಲೋಕಸಭಾ ಚುನಾವಣೆಗಳು ನಡೆದು ಬಿಜೆಪಿ ಪುನಃ ಅಧಿಕಾರಕ್ಕೆ ಬಂದಿತು. ಈ ಮೂಲಕ ಪ್ರತಿಗಾಮಿ ಬಲಪಂಥೀಯ ಶಕ್ತಿಗಳ ಕ್ರೋಢೀಕರಣವಾಯಿತು. ಈ ಅವಧಿಯಲ್ಲಿ ಆರ್‌ಎಸ್‌ಎಸ್‌ನ ಹಿಂದುತ್ವ ಸಿದ್ಧಾಂತವನ್ನು ಆಕ್ರಮಣಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ನಂತರದ ಎರಡು ವರ್ಷಗಳು ಕೋವಿಡ್ ಸಂಕ್ರಾಮಿಕವು ಜನರನ್ನು ತೀವ್ರವಾಗಿ ಭಾಧಿಸಿತು.

ಇದೇ ಅವಧಿಯಲ್ಲಿ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಪಕ್ಷದ ಮೇಲೆ ದಾಳಿಗಳು ತೀವ್ರಗೊಂಡವು. ಪಕ್ಷವು ಈ ದಾಳಿಗಳನ್ನು ಅಲ್ಲಿ ದೃಢವಾಗಿ ಎದುರಿಸಿತು. ಪಕ್ಷದ ಮೇಲಿನ ದಾಳಿಗಳ ವಿರುದ್ಧ ದೇಶಾದ್ಯಂತ ಪ್ರತಿರೋಧವನ್ನು ಸಂಘಟಿಸಲಾಯಿತು. ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ಹೋರಾಟ, ದೆಹಲಿ ರೈತರ ಹೋರಾಟ, ಬೆಲೆ ಏರಿಕೆ ವಿರುದ್ಧ, ಕೋಮುವಾದದ ವಿರುದ್ಧ, ದಲಿತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ, ಹೀಗೆ, ಹಲವಾರು ಹೋರಾಟಗಳು ಮತ್ತು ಚಳುವಳಿಗಳಲ್ಲಿ ಪಕ್ಷವು ಪ್ರಮುಖ ಪಾತ್ರವನ್ನು ನಿರ್ವಹಿಸಿದೆ. ಇದಲ್ಲದೆ ಸಾಮೂಹಿಕ ರಂಗಗಳ ಹೋರಾಟಗಳು, ಜಂಟಿ ಹೋರಾಟಗಳು ಮುಂತಾದವುಗಳನ್ನು ಸಂಘಟಿಸಲು ಪಕ್ಷವು ಮಾರ್ಗದರ್ಶನ ಮಾಡಿತು. ಕೋವಿಡ್ ಸಾಂಕ್ರಾಮಿಕದ ವಿರುದ್ಧ ಜನತೆಗೆ ಪರಿಹಾರ ಒದಗಿಸಲು ಬಹುತೇಕ ರಾಜ್ಯಗಳಲ್ಲಿ ಪಕ್ಷ ಮತ್ತು ಸಮೂಹ ಸಂಘಟನೆಗಳು ಕೆಲಸ ಮಾಡಿರುವುದನ್ನು ಗುರುತಿಸಲಾಗಿದೆ. ಪ್ರತಿ ಕುಟುಂಬಕ್ಕೆ ರೂ.7500 ಮತ್ತು ತಲಾ 10 ಕೆಜಿ ಆಹಾರ ಪದಾರ್ಥಗಳನ್ನು ನೀಡಬೇಕೆಂಬ ಪಕ್ಷದ ಬೇಡಿಕೆಯು ಎಲ್ಲಾ ವಿರೋಧ ಪಕ್ಷಗಳ ಬೇಡಿಕೆಯಾಗಿದ್ದನ್ನು ಗುರುತಿಸಲಾಗಿದೆ.

ಸ್ವತಂತ್ರ ಶಕ್ತಿ ಹೆಚ್ಚಳಕ್ಕೆ ರಾಜಕೀಯ ಕ್ರೋಢೀಕರಣ:

ಪಕ್ಷದ ಸ್ವತಂತ್ರ ಶಕ್ತಿಯನ್ನು ಕಟ್ಟಿಬೆಳೆಸುವ ಅನುಭವವನ್ನು ತೀಕ್ಷ್ಣವಾಗಿ ವಿಮರ್ಶಿಸುತ್ತಾ, ಪಕ್ಷದ ಶಕ್ತಿಯನ್ನು ಬೆಳೆಸಲು ಅಗತ್ಯವಾಗಿದ್ದ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾ ಪ್ರಯತ್ನಗಳು ಸಮರ್ಪಕವಾಗಿರಲಿಲ್ಲ ಎಂಬುದನ್ನು ಗುರುತಿಸಲಾಗಿದೆ. ಹೀಗಾಗಿ ಪಕ್ಷದ ಸ್ವತಂತ್ರ ಶಕ್ತಿಯನ್ನು ಮತ್ತು ಪಕ್ಷದ ಪ್ರಭಾವವನ್ನು ಬೆಳೆಸಲು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದು 23 ನೇ ಮಹಾಧಿವೇಶನವು ಒತ್ತಿ ಹೇಳಿದೆ. ನಾವು ನಡೆಸುವ ವರ್ಗ ಮತ್ತು ಸಮೂಹ ಚಳುವಳಿಗಳಿಂದ ಗಳಿಸುವ ಸಂಪರ್ಕ ಮತ್ತು ಪ್ರಭಾವವನ್ನು ರಾಜಕೀಯವಾಗಿ ಕ್ರೋಢೀಕರಿಸಲು ಮಹತ್ವ ನೀಡಬೇಕೆಂಬುದು ಇದರ ಅರ್ಥವಾಗಿದೆ.

ಸ್ಥಳೀಯ ಹೋರಾಟಗಳು: ಸ್ಥಳೀಯ ಹೋರಾಟಗಳನ್ನು ಸಂಘಟಿಸುವ ಕೊರತೆಗಳು ಮತ್ತು ಸಂಘಟಿಸಿದರೂ ಅವುಗಳ ನಿರಂತರತೆಯ ಕೊರತೆಗಳ ಬಗ್ಗೆ ವಿಮರ್ಶಿಸಿದ ಮಹಾಧಿವೇಶನವು, ಇದಕ್ಕೆ ಮೂರು ಮುಖ್ಯವಾದ ಕಾರಣಗಳನ್ನು ಗುರುತಿಸಿತು:

1. ಸ್ಥಳೀಯ ಸಮಸ್ಯೆಗಳನ್ನು ಎತ್ತಿಕೊಂಡಾಗ ಅಲ್ಲಿನ ಬಲಾಢ್ಯ. ಯಜಮಾನ್ಯ ವರ್ಗಗಳು ಮತ್ತು ಸಮೂಹಗಳನ್ನು ಎದುರು ಹಾಕಿಕೊಳ್ಳಬೇಕು ಮತ್ತು ಈ ರೀತಿ ಎದುರು ಹಾಕಿಕೊಂಡಾಗ ಬರುವ ದಮನಗಳನ್ನು ಎದುರಿಸಲು ಅಪಾರವಾದ ದೃಢತೆ ಮತ್ತು ಸಾಮರ್ಥ್ಯ ಬೇಕಾಗುತ್ತದೆ.
2. ಪಕ್ಷದಲ್ಲಿರುವ ಸಂಸದೀಯವಾದ. ಇದು ಸ್ಥಳೀಯ ಯಜಮಾನ್ಯ ವರ್ಗಗಳ ಜೊತೆ ಹೊಂದಾಣಿಕೆ ಮತ್ತು ಅನುಸಂಧಾನದ ಗುಣವನ್ನು ಉತ್ತೇಜಿಸುತ್ತದೆ.
3. ಸಂಘಟನಾ ನ್ಯೂನತೆಗಳು.

ಈ ಮೂರೂ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಬೇಕು ಮತ್ತು ಸ್ಥಳೀಯ ಹೋರಾಟಗಳನ್ನು ತೀವ್ರಗೊಳಿಸಬೇಕು ಎಂಬ ಅಗತ್ಯವನ್ನು ಮಹಾಧಿವೇಶನವು ಪ್ರತಿಪಾದಿಸಿತು.

ಆರ್ಥಿಕ ಹೋರಾಟಗಳನ್ನು ಕಟ್ಟಿದರೆ ಪಕ್ಷದ ಸ್ವತಂತ್ರ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದೆಂಬ ತಿಳುವಳಿಕೆ ಈಗಲೂ ಗಟ್ಟಿಯಾಗಿರುವುದನ್ನು ತೀವ್ರವಾಗಿ ವಿಮರ್ಶಿಸಲಾಗಿದೆ. ಆರ್ಥಿಕ ಹೋರಾಟಗಳಲ್ಲಿ ಭಾಗವಹಿಸುವವರನ್ನು ಕ್ರೋಢೀಕರಿಸಲು ಪಕ್ಷವು ಸಮರ್ಪಕವಾದ ಸೈದ್ಧಾಂತಿಕ, ರಾಜಕೀಯ ತರಬೇತಿಯನ್ನು ನೀಡುತ್ತಿಲ್ಲ. ಪರಿಣಾಮವಾಗಿ ಆರ್ಥಿಕ ಹೋರಾಟಗಳಲ್ಲಿ ಪಾಲ್ಗೊಳ್ಳುವ ಕಾರ್ಮಿಕರು, ಮಧ್ಯಮ ವರ್ಗದ ಜನ ಮತ್ತು ಇತರ ಸಮೂಹಗಳು ಚುನಾವಣೆಯಲ್ಲಿ ಬಿಜೆಪಿಗೆ ಓಟು ಹಾಕುತ್ತಾರೆ. ಉತ್ತರ ಪ್ರದೇಶದ ಇತ್ತೀಚಿನ ಚುನಾವಣಾ ಫಲಿತಾಂಶ ಇದನ್ನೇ ತೋರಿಸುತ್ತದೆ. ಏನೆಲ್ಲಾ ಸಂಕಷ್ಟಗಳನ್ನು ಜನರು ಅನುಭವಿಸಿದರೂ ಬಿಜೆಪಿ ಹೆಚ್ಚಿನ ಮತಗಳನ್ನು ಪಡೆಯಲು ಹೇಗೆ ಸಾಧ್ಯವಾಯಿತು? ಆರ್ಥಿಕ ಹೋರಾಟಗಳು ಚಳುವಳಿಗಳ ತಳಹದಿ ಎಂಬುದನ್ನು ಒಪ್ಪಬೇಕು, ಆದರೆ ಸೈದ್ಧಾಂತಿಕ ರಂಗದಲ್ಲಿ ವರ್ಗ ಹೋರಾಟವನ್ನು ನಡೆಸದೆ ನಾವು ಮುನ್ನಡೆ ಸಾಧಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲೇ ಬಿಜೆಪಿಯ ಹಿಂದುತ್ವ ವಿರುದ್ಧದ ನಮ್ಮ ಹೋರಾಟವನ್ನು ಅರ್ಥ ಮಾಡಿಕೊಳ್ಳಬೇಕು.

ಎಡ–ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್):

ಎಡ–ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟಬೇಕಾದ ಮಹತ್ವದ ಬಗ್ಗೆ ಚರ್ಚಿಸಿದ ವರದಿಯು, ಎಲ್‌ಡಿಎಫ್ ಎಂದರೆ ರಾಜಕೀಯ ಪಕ್ಷಗಳ ರಂಗವಲ್ಲ, ವಿವಿಧ ವರ್ಗಗಳ ರಂಗ ಎಂಬುದನ್ನು ಯಾವಾಗಲೂ ಗಮನದಲ್ಲಿ ಇಟ್ಟುಕೊಂಡಿರಬೇಕೆಂಬುದನ್ನು ಪ್ರತಿಪಾದಿಸಿತು. ವಿವಿಧ ವರ್ಗಗಳನ್ನು ಅಣಿನೆರೆಸುವ ಮೂಲಕ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಧಿಸುವುದು ನಮ್ಮ ಗುರಿಯಾಗಬೇಕು. ಈ ನಿಟ್ಟಿನಲ್ಲಿ ಪೊಲಿಟ್‌ಬ್ಯೂರೊ ಅಗತ್ಯ ಮುತುವರ್ಜಿ ವಹಿಸದೇ ಇದ್ದ ಬಗ್ಗೆ, ಪರಿಣಾಮವಾಗಿ ರಾಜ್ಯಗಳಲ್ಲೂ ಇಂತಹ ಪ್ರಯತ್ನಗಳು ಸಮರ್ಪಕವಾಗಿ ನಡೆಯದಿದ್ದರ ಬಗ್ಗೆ ವರದಿಯು ಗಮನ ಸೆಳೆದಿದೆ. ದಿನನಿತ್ಯದ ಕೆಲಸಗಳಲ್ಲಿ ಮತ್ತು ಚುನಾವಣಾ ಕೆಲಸಗಳಲ್ಲಿ ಹೆಚ್ಚಿನ ಗಮನ ನೀಡಿದ್ದರಿಂದ ಈ ಸಮಸ್ಯೆ ಇದೆ. ಇದು ಸುಧಾರಣಾವಾದಿ ಕಣ್ಣೋಟವಾಗಿದ್ದು, ಪಕ್ಷವನ್ನು ಭಾಧಿಸುತ್ತಿರುವ ಸಂಸದೀಯವಾದವನ್ನು ಪ್ರತಿಫಲಿಸುತ್ತದೆ. ಮೂಲಭೂತವಾಗಿ ಪಕ್ಷದ ರಾಜಕೀಯ ಮತ್ತು ಸಂಘಟನಾ ಕೆಲಸಗಳನ್ನು ಚುನಾವಣಾ ಕೆಲಸಗಳಿಂದ ಬೇರ್ಪಡಿಸಿದಾಗ ಬರುವ ಸಮಸ್ಯೆಯಿದು ಎಂಬುದನ್ನು ಹೇಳಲಾಯಿತು.

ಚುನಾವಣಾ ತಂತ್ರಗಾರಿಕೆಯ ಪ್ರಶ್ನೆಗಳು:

ಪಶ್ಚಿಮ ಬಂಗಾಳದ ಚುನಾವಣೆಗಳಿಗೆ ಸಂಬಂಧಿಸಿ ಅಲ್ಲಿನ ರಾಜ್ಯ ಸಮಿತಿ ಅನುಸರಿಸಿದ ತಂತ್ರಗಾರಿಕೆಯನ್ನು ತೀವ್ರವಾಗಿ ವಿಮರ್ಶಿಸಲಾಯಿತು. 22ನೇ ಮಹಾದಿವೇಶನದಲ್ಲಿ, ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳಬಾರದು, ಆದರೆ, ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ–ವಿರೋಧಿ ಮತಗಳನ್ನು ಕ್ರೋಢೀಕರಿಸುವ ವಿಧಾನಗಳನ್ನು ಅನುಸರಿಸಬೇಕೆಂದು ಸೂಚಿಸಲಾಗಿತ್ತು. ಕಾಂಗ್ರೆಸ್ ಮತ್ತು ಟಿಎಂಸಿ ಎರಡನ್ನೂ ಎದುರಿಸಬೇಕಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮತ್ತು ಇತರೆ ಜಾತ್ಯಾತೀತ ಪಕ್ಷಗಳ ಜೊತೆಯಲ್ಲಿ ಕೇವಲ ಸೀಟು ಹಂಚಿಕೆಯನ್ನು ಮಾತ್ರ ಮಾಡಿಕೊಳ್ಳಬೇಕೆಂದು ಕೇಂದ್ರ ಸಮಿತಿ ಸೂಚಿಸಿತ್ತು. ಆದರೆ ಪಶ್ಚಿಮ ಬಂಗಾಳದ ರಾಜ್ಯ ಘಟಕವು ಇನ್ನೂ ಮುಂದೆ ಹೋಗಿ ಚುನಾವಣಾ ರಂಗವನ್ನೇ ರೂಪಿಸಿತು, ಮಾತ್ರವಲ್ಲ, ಪರ್ಯಾಯ ಸರ್ಕಾರದ ಬಗ್ಗೆ ಪ್ರಚಾರ ಮಾಡಿತು. ಕೇಂದ್ರ ಸಮಿತಿಯ ಸೂಚನೆಯನ್ನು ಕಡೆಗಣಿಸಿತು.

ತೆಲಂಗಾಣದಲ್ಲಿ ಬಿಎಲ್‌ಎಫ್ (ಬಹುಜನ್ ಲೆಫ್ಟ್ ಫ್ರಂಟ್) ದಮನಿತ ಜಾತಿಗಳನ್ನು ಆಧಾರವಾಗಿಟ್ಟುಕೊಂಡು ರಾಜಕೀಯ ಪರ್ಯಾಯವನ್ನು ಪ್ರತಿಪಾದಿಸಿತ್ತು. ಪಕ್ಷದ ತಿಳುವಳಿಕೆಗೆ ಭಿನ್ನವಾದ ಇಂತಹ ಕಣ್ಣೋಟ ಸರಿಯಲ್ಲವೆಂದು ಕೇಂದ್ರ ಸಮಿತಿ ಮಧ್ಯಪ್ರವೇಶ ಮಾಡಿತ್ತು. ಈ ಸಮಸ್ಯೆ ಚುನಾವಣೆಗೆ ಸಂಬಂಧಿಸಿದ್ದಲ್ಲ. ಬದಲಿಗೆ, ಜಾತಿ ಮತ್ತು ವರ್ಗದ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ್ದು. ಜಾತಿಗಳನ್ನು ಆಧರಿಸಿದ ರಾಜಕೀಯ ಪರ್ಯಾಯದ ಈ ಕಣ್ಣೋಟ ಸಾಕಷ್ಟು ಆಳಕ್ಕೆ ಇಳಿದಿರುವುದರಿಂದ, ಇದನ್ನು ಸರಿಪಡಿಸಲು ಪ್ರಯತ್ನಗಳನ್ನು ಮಾಡಬೇಕೆಂದು ಮಹಾಧಿವೇಶನ ಅಭಿಪ್ರಾಯಪಟ್ಟಿತು.

ತಿದ್ದುಪಡಿ ಚಳುವಳಿ ಕುರಿತು:

ಕೊಲ್ಕೊತ್ತಾ ಸಂಘಟನಾ ಪ್ಲೀನಂನಲ್ಲಿ, ಪ್ರತಿವರ್ಷವೂ ತಿದ್ದುಪಡಿ ಚಳುವಳಿ ಕೈಗೊಳ್ಳಬೇಕೆಂದು ತೀರ್ಮಾನಿಸಲಾಗಿತ್ತು. ಆದರೆ ಪ್ರತಿ ವರ್ಷ ನಡೆಸುವುದು ಸಾಧ್ಯವಿಲ್ಲವೆಂದಾದ ಮೇಲೆ ಪಕ್ಷದ ಸದಸ್ಯತ್ವ ನವೀಕರಣದ ಸಂದರ್ಭದಲ್ಲಿ ಪಾಲಿಸಬೇಕಾದ 5 ಅಂಶಗಳ ಮಾನದಂಡವನ್ನು ಕಡ್ಡಾಯವಾಗಿ ಪಾಲಿಸಬೇಕೆಂದಾಯಿತು. ಆದರೆ ಈ ಮಾನದಂಡವನ್ನೂ ಪಾಲಿಸುತ್ತಿಲ್ಲವೆಂಬುದನ್ನು ಗಂಭೀರವಾಗಿ ಪರಿಗಣಿಸಲಾಯಿತು. ಪಕ್ಷವನ್ನು ಭಾಧಿಸುತ್ತಿರುವ ಸಂಸದೀಯವಾದ, ಸುಧಾರಣಾವಾದ, ವ್ಯಕ್ತಿವಾದ, ಉದಾರವಾದ ಇಂತಹ ಸಮಸ್ಯೆಗಳನ್ನು ಸರಿಪಡಿಸಲು ಮುಂದಿನ ಕೇಂದ್ರ ಸಮಿತಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಹಾಧಿವೇಶನ ತೀರ್ಮಾನಿಸಿತು.

ಕೆಲವು ಪ್ರಮುಖವಾದ ಸಂಗತಿಗಳ ಮೇಲೆ ರಾಷ್ಟ್ರವ್ಯಾಪಿ ಆಂದೋಲನಗಳನ್ನು ಕಟ್ಟಬೇಕೆಂಬ ಹಿನ್ನೆಲೆಯಲ್ಲಿ ಕೇಂದ್ರ–ರಾಜ್ಯ ಸಂಬಂಧಗಳ ಬಗ್ಗೆ, ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿಗಳ ಬಗ್ಗೆ ಹೆಚ್ಚಿನ ಮಧ್ಯಪ್ರವೇಶ, ಪ್ರಚಾರಾಂದೋಲನಗಳನ್ನು

ಪುಟ 14 ಕ್ಕೆ

ಪೆಟ್ರೋಲಿಯಂ ಬೆಲೆಗಳು: 14ಬಾರಿ ತೆರಿಗೆ ಏರಿಸಿದವರಿಂದ ಒಂದು ಬಾರಿಯೂ ಏರಿಸದವರಿಗೆ ಉಪದೇಶ!

ಪ್ರಧಾನ ಮಂತ್ರಿಗಳು ಏರುತ್ತಿರುವ ಪೆಟ್ರೋಲ್, ಡೀಸೆಲ್ ಬೆಲೆಗಳ ಬಗ್ಗೆ ಮೊದಲ ಬಾರಿಗೆ ಮಾತಾಡಿದ್ದಾರೆ. ಕೇಂದ್ರ ಸರಕಾರ ಕಳೆದ ನವಂಬರಿನಲ್ಲಿ ಜನಗಳ ಮೇಲೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಹೊರೆಯನ್ನು ಕಡಿಮೆ ಮಾಡಲು ಅಬಕಾರಿ ಸುಂಕವನ್ನು ಇಳಿಸಿತು. ಕೆಲವು ರಾಜ್ಯಗಳೂ ಇಳಿಸಿದವು, ಆದರೆ ಕೆಲವು ರಾಜ್ಯಗಳು ಅಬಕಾರಿ ಸುಂಕದ ಇಳಿಕೆಯ ಪ್ರಯೋಜನವನ್ನು ನಾಗರಿಕರಿಗೆ ವರ್ಗಾಯಿಸಲಿಲ್ಲ. ಈಗಲಾದರೂ ಅದನ್ನು ಮಾಡಬೇಕು ಎಂದು ಆ ರಾಜ್ಯಗಳನ್ನು ವಿನಂತಿಸಿಕೊಳ್ಳುತ್ತೇನೆ ಎಂದರು. ಅವರು ನಿರ್ದಿಷ್ಟವಾಗಿ ಕೆಲವು ರಾಜ್ಯಗಳನ್ನೂ ಹೆಸರಿಸಿದರು– ಮಹಾರಾಷ್ಟ್ರ, ಪಶ್ಚಿಮ ಬಂಗಾಲ, ತೆಲಂಗಾಣ, ಆಂಧ್ರಪ್ರದೇಶ, ಕೇರಳ, ಝಾರ್ಖಂಡ್ ಮತ್ತು ತಮಿಳುನಾಡು.

ಮರುದಿನ, ಪೆಟ್ರೋಲಿಯಂ ಮಂತ್ರಿಗಳು ಈ ರಾಜ್ಯಗಳು ಇಂಧನ ತೆರಿಗೆ 'ಗೋಸುಂಬೆತನ'ದಲ್ಲಿ ತೊಡಗಿದ್ದಾರೆ ಎಂದರು. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆಗಳು ಇಳಿಯುತ್ತಿದ್ದಾಗಲೂ ಅದರ ಪ್ರಯೋಜನವನ್ನು ಸಾಮಾನ್ಯ ನಾಗರಿಕರಿಗೆ ವರ್ಗಾಯಿಸಲು ನಿರಾಕರಿಸಿದ, ಎಪ್ರಿಲ್ 2014ರಿಂದ ನವಂಬರ್ 2021ರ ನಡುವೆ 14 ಬಾರಿ ಅಬಕಾರಿ ಸುಂಕಗಳನ್ನು ಏರಿಸಿ ಕೇವಲ ನಾಲ್ಕು ಬಾರಿ ಇಳಿಸಿದ ಕೇಂದ್ರ ಸರಕಾರದ ಮುಖ್ಯಸ್ಥರ ವಿನಂತಿ ಶುದ್ಧ ಗೋಸುಂಬೆತನ ಎಂಬ ಪ್ರತಿಕ್ರಿಯೆ ಬರಬಹುದು ಎಂದು ತಾನೇ ಆ ಪದವನ್ನು ಮೊದಲು ಬಳಸಿ ಬಿಡಬೇಕು ಎಂದು ಅವರು ಹೀಗೆ ಹೇಳಿದ್ದಾರೋ ಗೊತ್ತಿಲ್ಲ.

ಪ್ರಧಾನ ಮತ್ರಿಗಳು ಹೆಸರಿಸಿದ ರಾಜ್ಯಗಳೆಲ್ಲವೂ ಬಿಜೆಪಿಯೇತರ ಪಕ್ಷಗಳ ಆಳ್ವಿಕೆಯಲ್ಲಿರುವ ಸರಕಾರಗಳು ಎಂಬುದು ಆಕಸ್ಮಿಕವಲ್ಲ. ನಿರೀಕ್ಷಿಸಿದಂತೆ, ಕೇಂದ್ರ ಸರಕಾರದ ಗೋಸುಂಬೆತನವನ್ನು ಅವರು ಎತ್ತಿ ತೋರಿಸುತ್ತಿದ್ದಾರೆ.

ಕೇರಳ 2016ರಿಂದ ಒಂದು ಬಾರಿಯೂ ಇಂಧನಗಳ ಮೇಲೆ ತೆರಿಗೆಗಳನ್ನು ಏರಿಸದಿದ್ದರೂ, 14 ಬಾರಿ ಏರಿಸಿದ ಕೇಂದ್ರ ಸರಕಾರ ಅದನ್ನು ಟೀಕಿಸಿರುವುದು ದುರದೃಷ್ಟಕರ, ಪ್ರಧಾನಿಗಳ ಇಂತಹ ಟೀಕೆಗೆ ಅದು ಸೂಕ್ತ ಸಂದರ್ಭವೂ ಆಗಿರಲಿಲ್ಲ ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಖೇದ ವ್ಯಕ್ತಪಡಿಸಿದ್ದಾರೆ. ಸುರುಳಿ–ಸುರುಳಿಯಾಗಿ ಏರುತ್ತಿರುವ ಇಂಧನ ಬೆಲೆಗಳು ಉಂಟುಮಾಡಿರುವ ಜನಗಳ ಸಂಕಟಗಳನ್ನು ನಿಷ್ಕಾರಣವಾಗಿ ರಾಜ್ಯಗಳನ್ನು ದೂಷಿಸುವ ಮೂಲಕ ಶಮನಗೊಳಿಸಲು ಸಾಧ್ಯವಿಲ್ಲ, ಇದು (ಪ್ರಧಾನಿಗಳು ಹೇಳುವ) 'ಸಹಕಾರಿ ಒಕ್ಕೂಟ ತತ್ವ'ಕ್ಕೆ ಅನುಗುಣವಾಗಿಲ್ಲ ಎಂದು ವಿಜಯನ್ ಟಿಪ್ಪಣಿ ಮಾಡಿದ್ದಾರೆ.

ಎಪ್ರಿಲ್ 2024ರಲ್ಲಿ ಪೆಟ್ರೋಲ್ ಮೇಲೆ ಅಬಕಾರಿ ಸುಂಕ ಲೀಟರಿಗೆ ರೂ.9.48 ಇತ್ತು. ಅದು ನವಂಬರ್ 2021ರ ವೇಳೆಗೆ ರೂ.32.96 ತಲುಪಿತು. ಅದೇ ರೀತಿ ಡೀಸೆಲ್ ಮೇಲಿನ ಅಬಕಾರಿ ಸುಂಕ ಈ ಅವಧಿಯಲ್ಲಿ ಲೀಟರಿಗೆ ರೂ. 3.56ರಿಂದ ರೂ.31.83ಕ್ಕೇರಿತು. ನವಂಬರ್ 2021ರಲ್ಲಿ ಇವನ್ನು ತುಸು ಇಳಿಸಲಾಯಿತು. ಆದರೂ ಈ ಇಳಿಕೆಯ ನಂತರವೂ ಪೆಟ್ರೋಲಿನ ಮೇಲಿನ ಅಬಕಾರಿ ಸುಂಕ ಮೂರು ಪಟ್ಟು ಏರಿದ್ದರೆ, ಡೀಸೆಲ್ ಮೇಲೆ ಆರು ಪಟ್ಟು ಏರಿದೆ.

ಅಲ್ಲದೆ, ಈಗೀಗ ಕೇಂದ್ರ ಸರಕಾರ ಸರ್ಚಾರ್ಜ್ ಮತ್ತು ಸೆಸ್‌ಗಳನ್ನು ಏರಿಸುವ ಮೂಲಕವೇ ತೆರಿಗೆ ಸಂಗ್ರಹಕ್ಕೆ ಹೆಚ್ಚಿನ ಒತ್ತು ಕೊಡುತ್ತಿದೆ. ಏಕೆಂದರೆ ಇವನ್ನು ಅದು ರಾಜ್ಯ ಸರಕಾರಗಳೊಂದಿಗೆ ಹಂಚಿಕೊಳ್ಳಬೇಕಾಗಿಲ್ಲ. ಇದೂ ಸಾಲದೆಂಬಂತೆ ಜಿಎಸ್‌ಟಿ ಸೇರಿದಂತೆ ರಾಜ್ಯಗಳಿಗೆ ಸಲ್ಲಬೇಕಾದ ರೆವಿನ್ಯೂ ಪಾಲನ್ನು ವರ್ಗಾಯಿಸುವಲ್ಲಿಯೂ ವಿಳಂಬ ಮಾಡಲಾಗುತ್ತಿದೆ.ಅದರಿಂದಾಗಿ ರಾಜ್ಯಗಳು ಗಂಭಿರ ಹಣಕಾಸು ಮಿತಿಗಳನ್ನು ಅನುಭವಿಸುತ್ತಿವೆ. ಅದರ ಮೇಲೆ ಕೊವಿಡ್ ಹೊರೆಯೂ ಸೇರಿದೆ. ರಾಜ್ಯಗಳ ಇಂತಹ ಹಣಕಾಸು ಸ್ಥಿತಿಯನ್ನು ಅರಿತಿರುವ ಪ್ರಧಾನ ಮಂತ್ರಿಗಳಿಂದ ಇಂತಹ ಮಾತು ಬರಬಾರದಿತ್ತು ಎಂದು ಕೇರಳದ ಮುಖ್ಯಮಂತ್ರಿಗಳು ಹೇಳಿದ್ದಾರೆ.

ದೇಶದ ಹಣಕಾಸು ನಿರ್ವಹಣೆಯನ್ನು ನಡೆಸುವ ಕೇಂದ್ರ ಸರಕಾರದ ಮೇಲೆ ಬೆಲೆಯೇರಿಕೆಯ ಹೊಣೆ ಬೀಳುವುದಿಲ್ಲ, ರಾಜ್ಯಗಳು ಅದಕ್ಕೆ ಹೊಣೆ ಎಂದು ಬಿಂಬಿಸುವ ಪ್ರಯತ್ನ ಒಂದು ಒಕ್ಕೂಟ ವ್ಯವಸ್ಥೆಯಲ್ಲಿ ನಡೆಯಬಾರದಿತ್ತು ಎಂದು ಮುಂದುವರೆದು ಹೇಳಿರುವ ಪಿಣರಾಯಿ ವಿಜಯನ್ "ಸಾಮಾನ್ಯ ಜನರ ಬದುಕನ್ನು ಅಸಹನೀಯಗೊಳಿಸಬಾರದು. ಅದಕ್ಕಾಗಿ ವಿಪರೀತ ತೆರಿಗೆ ಏರಿಕೆಗಳನ್ನು ತಪ್ಪಿಸಬೇಕು. ರಾಷ್ಟ್ರೀಯ ಹಿತದೃಷ್ಟಿಯಿಂದ ಕೇಂದ್ರ ಸರಕಾರ ಸೂಕ್ತ ಧೋರಣೆಗಳ ಮೂಲಕ ಇಂಧನ ಬೆಲೆಗಳಲ್ಲಿ ಮತ್ತೆ–ಮತ್ತೆ ಏರಿಕೆಗಳಾಗುವುದನ್ನು ತಡೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿನಂತಿ. ಸುರುಳಿ–ಸುರುಳಿಯಾಗಿ ಏರುತ್ತಿರುವ ಇಂಧನ ಬೆಲೆಗಳು ಉಂಟುಮಾಡಿರುವ ಜನಗಳ ಸಂಕಟಗಳನ್ನು ನಿಷ್ಕಾರಣವಾಗಿ ರಾಜ್ಯಗಳನ್ನು ದೂಷಿಸುವ ಮೂಲಕ ಶಮನಗೊಳಿಸಲು ಸಾಧ್ಯವಿಲ್ಲ" ಎಂದು ಹೇಳಿದ್ದಾರೆ.


ಈ ಗ್ರಾಫ್‌ನಲ್ಲಿ ಕಾಣುವಂತೆ, 2014–15 ರಲ್ಲಿ ಒಟ್ಟು ಜಿಡಿಪಿಯಲ್ಲಿ ಪೆಟ್ರೋಲಿಯಂ ತೆರಿಗೆಗಳ ಪಾಲು 0.8% ಇದ್ದದ್ದು, 2020–21ರಲ್ಲಿ 1.9%ಕ್ಕೆ ಏರಿತು. ಆದರೆ ಇದೇ ಅವಧಿಯಲ್ಲಿ ಜಿಡಿಪಿಯಲ್ಲಿ ರಾಜ್ಯಗಳು ಹಾಕುವ ಮಾರಾಟ ತೆರಿಗೆ/ವ್ಯಾಟ್‌ನ ಪಾಲು 1.1% ದ ಸುತ್ತಮುತ್ತಲೇ ಇತ್ತು, ವಾಸ್ತವವಾಗಿ 2020–21ರಲ್ಲಿ 2014–15ಕ್ಕೆ ಹೋಲಿಸಿದರೆ ತುಸು ಕಡಿಮೆಯೇ ಆಗಿತ್ತು.

ಮಕ್ಕಳೇ, ಬಡವರೊಂದಿಗೆ ನಿಮ್ಮ ಆಹಾರವನ್ನು ಹಂಚಿಕೊಳ್ಳಿ...



ದಯವಿಟ್ಟು ಇಂಧನದ ಮೇಲೆ ವ್ಯಾಟ್ ಇಳಿಸಿ: ರಾಜ್ಯಗಳಿಗೆ ಪ್ರಧಾನಿ ಮನವಿ


2018–21ರಲ್ಲಿ ಪೆಟ್ರೋಲಿಯಂ ಸುಂಕಗಳ ಮೂಲಕ 8.02 ಲಕ್ಷ ಕೋಟಿ ರೂ.ಗಳ ಅಗಾಧ ಮೊತ್ತವನ್ನು ಗಳಿಸಿತು ಎಂದು ಸ್ವತಃ ಹಣಕಾಸು ಮಂತ್ರಿಗಳೇ ಸಂಸತ್ತಿಗೆ ತಿಳಿಸಿದ್ದರು. ಜನರ ಸಂಕಟಗಳ ಬಗ್ಗೆ ಕಾಳಜಿಯಿಂದ ಈ ಸುಂಕ ಏರಿಕೆಯನ್ನು ರದ್ದು ಮಾಡುವ ಬದಲು, ಆದಾಯದ ಪಾಲಿನಲ್ಲಿ ಏನೇನೂ ಏರಿಕೆ ಕಾಣದ ರಾಜ್ಯಗಳು ತೆರಿಗೆಯನ್ನು ಇಳಿಸಬೇಕು ಎಂದು ಹೇಳುವ ಮೋದಿ ಸರಕಾರದ ಗೋಸುಂಬೆತನಕ್ಕೆ ಪಾರವೇ ಇಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟಿಪ್ಪಣಿ ಮಾಡಿದ್ದಾರೆ.



ಉದ್ಯೋಗ ಸಿಗುವ ನಿರೀಕ್ಷೆಯೂ ಇಲ್ಲದ 'ಕಾಲ'

ದುಡಿಮೆಯ ವಯೋಗುಂಪಿನಲ್ಲಿರುವ ಒಟ್ಟು 90 ಕೋಟಿ ಮಂದಿಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮಂದಿ ಉದ್ಯೋಗದ ಹುಡುಕಾಟವನ್ನು ನಿಲ್ಲಿಸಿದ್ದಾರೆ ಎಂಬ ಆತಂಕದ ವಿಚಾರ ಈಗ ಹೊರ ಬಿದ್ದಿದೆ. ಇದು ಆತಂಕದ ಸುದ್ದಿ ಏಕೆಂದರೆ ಇವರು ಹುಡುಕಾಟ ನಿಲ್ಲಿಸಿರುವುದು ಉತ್ತಮ ಜೀವನಾಧಾರ ಪಡೆದಿದ್ದಾರೆ ಎಂಬುದಕ್ಕಲ್ಲ, ಬದಲಿಗೆ ಸರಿಯಾದ ಉದ್ಯೋಗ ಸಿಗುವ ಭರವಸೆಯೇ ಅವರಲ್ಲಿ ಉಳಿದಿಲ್ಲವಾದ್ದರಿಂದ!

ಮುಂಬೈನ ಖಾಸಗಿ ಸಂಶೋಧನಾ ಸಂಸ್ಥೆಯಾದ ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ)ನ ಹೊಸ ಅಂಕಿಅಂಶಗಳ ಪ್ರಕಾರ ಸರಿಯಾದ ರೀತಿಯ ಉದ್ಯೋಗವನ್ನು ಹುಡುಕಲು ಸಾಧ್ಯವಾಗದೆ ಹತಾಶರಾಗಿರುವ ಕೋಟ್ಯಾಂತರ ಭಾರತೀಯರು ವಿಶೇಷವಾಗಿ ಮಹಿಳೆಯರು ದೇಶದ ಶ್ರಮಿಕ ಪಡೆಯಿಂದ ನಿರ್ಗಮಿಸಿದ್ದಾರೆ.



ವ್ಯಂಗ್ಯಚಿತ್ರ: ರೆಮಿಕ್ಸ್ ಕಾಮಿಕ್ಸ್

ಶ್ರಮ ಭಾಗವಹಿಸುವಿಕೆಯ ಅನುಪಾತ 2017ರಿಂದ 2022ರ ಐದು ವರ್ಷಗಳಲ್ಲಿ 46%ದಿಂದ 40%ಕ್ಕೆ ಇಳಿದಿದೆ, ಅಂದರೆ ಸುಮಾರು ಐದೂವರೆ ಕೋಟಿ ಮಂದಿ ಶ್ರಮಿಕರ ಸಂಖ್ಯೆಯಿಂದ ಹೊರಹೋಗಿದ್ದಾರೆ. ಮಹಿಳೆಯರಲ್ಲಿ ಈ ರೀತಿ ನಿರ್ಗಮಿಸಿದವರ ಪ್ರಮಾಣ ಇನ್ನೂ ಹೆಚ್ಚು, ದಡಿಮೆಯ ವಯಸ್ಸಿನವರ ಸಂಖ್ಯೆಯ 9% ಮಾತ್ರ ಆದಾಯ ಬರುವ ಕೆಲಸದಲ್ಲಿ ಇದ್ದಾರೆ. ಉಳಿದವರು ಆರ್ಥಿಕವಾಗಿ ತಮ್ಮ ಕುಟುಂಬವನ್ನೇ ಅವಲಂಬಿಸಿದ್ದಾರೆ. ಉದ್ಯೋಗದ ಜಾಗದಲ್ಲಿನ ಅಭದ್ರತೆ, ಅಸುರಕ್ಷತೆ, ತಡರಾತ್ರಿವರೆಗೂ ಕೆಲಸ, ಲೈಂಗಿಕ ಕಿರುಕುಳ, ಮನೆಯಲ್ಲೂ ಕೆಲಸವನ್ನು ನಿರ್ವಹಿಸುವುದು. 24 ಗಂಟೆಗಳಲ್ಲಿ 17 ಗಂಟೆಗಳ ಕಾಲ ಕಚೇರಿ. ಮನೆ ಕೆಲಸಗಳಲ್ಲಿ ಸಮಯ ಕಳಯಬೇಕಾಗಿರುವುದು ಇದಕ್ಕೆ ಕಾರಣಗಳು ಎಂದು ಕಂಡು ಬಂದಿದೆ.

15 ರಿಂದ 64 ವರ್ಷ ನಡುವಿನ ವಯಸ್ಸಿನ ಜನಸಂಖ್ಯೆಯ ಸುಮಾರು ಮೂರನೇ ಎರಡಷ್ಟು ಮಂದಿ ಉದ್ಯೋಗ ಪಡೆಯಲು ಭಾರೀ ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ಸರಕಾರದಲ್ಲಿನ ಕೆಲವೇ ಹುದ್ದೆಗಳಿಗೆ ಲಕ್ಷ–ಲಕ್ಷ ಮಂದಿ ಅರ್ಜಿ ಹಾಕುತ್ತಿರುವ ಸುದ್ದಿ ಈಗ ಸಾಮಾನ್ಯವಾಗಿದೆ.

ಮೆಕಿನ್ಸೆ ಗ್ಲೋಬಲ್ ಇನ್ಸಿಟ್ಯೂಟ್ ವರದಿಯಂತೆ ಭಾರತವು ತನ್ನ ಯುವಜನರಿಗಾಗಿ 2030ರ ವೇಳೆಗೆ ಕನಿಷ್ಟ 9 ಕೋಟಿ ಕೃಷಿಯೇತರ ಉದ್ಯೋಗಗಳನ್ನು ಸೃಷ್ಟಿಸುವ ಅಗತ್ಯವಿದೆ. ಆದರೆ ದೇಶ ಈ ದಿಕ್ಕಿನಲ್ಲಿ ಸಾಗುವ ಬದಲು ಖಾಸಗೀಕರಣದ ಕ್ರಮಗಳು ಉದ್ಯೋಗಗಳನ್ನು ನಾಶ ಮಾಡುತ್ತಿವೆ.

ಭಾರತದ ಶ್ರಮಿಕ ಪಡೆಯಲ್ಲಿ ಯುವಜನರ ಪ್ರಮಾಣ ಬಹಳ ಹೆಚ್ಚಿರುವುದು ದೇಶದ ಆರ್ಥಿಕ ಪ್ರಗತಿಗೆ ಒಂದು ವರದಾನವಾಗಬೇಕಿತ್ತು. ಆದರೆ ಸರಕಾರದ ನೀತಿಗಳು ಈ ಅನುಕೂಲವನ್ನು ದೇಶ ತ್ವರಿತವಾಗಿ ಕಳಕೊಳ್ಳುವಂತೆ ಮಾಡುತ್ತಿವೆ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದಾರೆ.

ಪ್ರಧಾನ ಮಂತ್ರಿಗಳ ಪ್ರಕಾರ ನಮ್ಮ ಯುವಜನರು ಉದ್ಯೋಗ ಹುಡುಕುವವರು ಆಗಿರಬಾರದು, ಉದ್ಯೋಗ ಸೃಷ್ಟಿಸುವವರು ಆಗಿರಬೇಕು, ಅಂದರೆ ಸ್ವ–ಉದ್ಯೋಗಿಗಳಾಗಿರಬೇಕು. ಶ್ರಮಿಕ ಬಲ ಇಳಿಯಲು ಇದು ಕಾರಣ ಎಂದು 'ಭಕ್ತ'ರು ಚಪ್ಪಾಳೆ ತಟ್ಟಿರುವ ಸುದ್ದಿ ಇನ್ನೂ ಬಂದಿಲ್ಲ. ಏಕೆಂದರೆ, ವಾಸ್ತವವಾಗಿ ಈ ಸ್ವ–ಉದ್ಯೋಗ ಎಂಬುದು ನಿರುದ್ಯೋಗವನ್ನು ಮರೆಮಾಚುವ ವಿದ್ಯಮಾನವಾಗಿರುವುದೇ ಹೆಚ್ಚು ಎಂಬುದು ಈಗ ಮನವರಿಕೆಯಾಗಿದೆ. ಈ ಸರಕಾರದ ನೋಟುರದ್ಧತಿ, ಹಣದುಬ್ಬರ, ಕಾರ್ಪೊರೇಟ್–ಪರ ಕ್ರಮಗಳು ಇದಕ್ಕೂ ಅವಕಾಶವಿಲ್ಲದಂತೆ ಮಾಡಿರುವುದೇ ಕಳೆದ ಕೆಲವು ವರ್ಷಗಳ ಅನುಭವ.

ಕೇಂದ್ರೀಯ ಮಾಹಿತಿ ಆಯೋಗದ ಈ ಪೇಚು!

ಚುನಾವಣಾ ಬಾಂಡುಗಳಿಗೆ ಸಂಬಂಧಪಟ್ಟಂತೆ ಸರಕಾರಕ್ಕೆ ತಗುಲಿದ ವೆಚ್ಚವೇನು ಎಂಬ ಮಾಹಿತಿ ಹಕ್ಕು ಕಾಯ್ದೆಯ ಅಡಿ ಕೇಳಿದ ಪ್ರಶ್ನೆಗೆ ಸಂಬಂಧಪಟ್ಟ ಇಲಾಖೆಯಿಂದ ಉತ್ತರ ಕೊಡಿಸಲು ಸಾಧ್ಯವಿಲ್ಲ, ಏಕೆಂದರೆ ಅದಕ್ಕೆ ವಿನಾಯ್ತಿ ಇದೆ ಎಂದು ಒಂದೆಡೆಯಲ್ಲಿ ಕೇಂದ್ರೀಯ ಮಾಹಿತಿ ಆಯೋಗ(ಸಿಐಸಿ) ಹೇಳುತ್ತಿದ್ದಂತೆಯೇ, ಇನ್ನೊಂದೆಡೆಯಲ್ಲಿ ಆರ್ಥಿಕ ವ್ಯವಹಾರಗಳ ಇಲಾಖೆ ಅದನ್ನು ಆ ವೇಳೆಗೆ ಪ್ರಕಟಿಸಿತ್ತು ಎಂಬ ವಿಚಿತ್ರ ಕಾಕತಾಳಿಯ ಎನಿಸುವ ಘಟನೆ ಇತ್ತೀಚೆಗೆ ವರದಿಯಾಗಿದೆ (ಇಂಡಿಯಾಅಹೆಡ್‌ನ್ಯೂಸ್.ಕಾಂ, ಎ.23)

ನಿವೃತ್ತ ಸೇನಾ ಕೊಮೊಡೊರ್ ಲೋಕೇಶ್ ಬತ್ರ ಈ ಕುರಿತು ಕೇಳಿದ ಮಾಹಿತಿಯನ್ನು ಕೊಡಲು ಸ್ಟೆಟ್ ಬ್ಯಾಂಕ್ ಆಫ್ ಇಂಡಿಯಾದ

ಪುಟ 14 ನೋಡಿ

ಆರ್ಥಿಕ ಬಿಕ್ಕಟ್ಟು ಆಳಕ್ಕಿಳಿಯುತ್ತಿದೆ–ದ್ವೇಷ, ಹಿಂಸಾಚಾರ ಏರುತ್ತಿದೆ

ಏರುತ್ತಿರುವ ಬೆಲೆಗಳು, ಹೊರಲಾರದ ತೆರಿಗೆಗಳ ಭಾರ, ಕಡಿಮೆ ಕೂಲಿ ಮತ್ತು ನಿರುದ್ಯೋಗ ಮುಂತಾದ ಜನರ ಆರ್ಥಿಕ ಸಂಕಷ್ಟಗಳಿಗೆ ಕಾರಣವಾಗಿರುವ ಆರ್ಥಿಕ ನೀತಿಗಳನ್ನು ಬದಲಾಯಿಸಿಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಹಾಕುವ ಜನರು ಮೋದಿ ಸರ್ಕಾರದ ಮೇಲೆ ಒತ್ತಡ ಹಾಕುತ್ತಿರುವ ಜನರ ಸಂಘಟಿತ ಹೋರಾಟಗಳು ದಿನೇ ದಿನೇ ಹೆಚ್ಚುತ್ತಿರುವಾಗ, ಈ ಹೋರಾಟಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸುವ ಉದ್ದೇಶದಿಂದ, ಕೋಮು–ದ್ವೇಷವನ್ನು ಜನರಲ್ಲಿ ಹರಡಿಸುವ ಮೂಲಕ ಅವರ ಐಕ್ಯತೆಯನ್ನು ಮುರಿಯುವ ಹತಾಶ ಪ್ರಯತ್ನದಲ್ಲಿ ಮೋದಿ ಸರ್ಕಾರ ತೊಡಗಿದೆ.
ಆಕಾಶದೆತ್ತರಕ್ಕೆ ಏರುತ್ತಿರುವ ಹಣದುಬ್ಬರದಿಂದ ಮತ್ತು ನಿರುದ್ಯೋಗದಿಂದ ಅತಿ ಹೆಚ್ಚು ತೊಂದರೆಗಳಿಗೆ ಈಡಾಗುವವರೆಂದರೆ, ಬಡವರೇ. ಕೋಮು ಗಲಭೆಗಳಲ್ಲಿ ತಮ್ಮ ಜೀವ ಕಳೆದುಕೊಳ್ಳುವವರೂ ಬಡವರೇ. ಗಲಭೆಗಳಲ್ಲಿ ತಮ್ಮ ಕವಡೆ ಕಾಸಿನ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುವವರೂ ಬಡವರೇ ಹೌದು.

ಸುಬೋಧ್ ವರ್ಮ ಅನು: ಕೆ.ಎಂ. ನಾಗರಾಜ್



ಕೋವಿಡ್ ಉಂಟುಮಾಡಿದ ವಿನಾಶದ ನಂತರ, ಭಾರತದ ಅರ್ಥವ್ಯವಸ್ಥೆಯು ಮತ್ತೆ ಪುಟಿದೇಳುತ್ತಿದೆ ಎಂಬುದಾಗಿ ಸರ್ಕಾರ ಹೇಳಿಕೊಂಡಿದೆ. ವಾಸ್ತವವೆಂದರೆ, ಕಡಿಮೆ ಆದಾಯದ ಜನರು ಸಾಂಕ್ರಾಮಿಕದ ಆಘಾತಗಳಿಂದ ಇನ್ನೂ ಚೇತರಿಸಿಕೊಂಡಿಲ್ಲ. ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಗಿರುವುದರಿಂದಾಗಿ ಜನರ ಅಸಮಾಧಾನ ಹೆಚ್ಚುತ್ತಿದೆ. ಬೆಲೆ ಏರಿಕೆ ಮತ್ತು ನಿರುದ್ಯೋಗ ಎರಡೂ ಮತದಾರರ ಪ್ರಮುಖ ಕಾಳಜಿಗಳಾಗಿದ್ದವು ಎಂಬುದನ್ನು ಮತ್ತು ಜನರ ಆಕ್ರೋಶವನ್ನು ವಿಧಾನಸಭೆ ಮತ್ತು ಸಂಸತ್ತಿಗೆ ಇತ್ತೀಚೆಗೆ ಐದು ರಾಜ್ಯಗಳಲ್ಲಿ ನಡೆದ ಉಪ ಚುನಾವಣೆಗಳ ಫಲಿತಾಂಶಗಳು ಸೂಚಿಸುತ್ತವೆ. ಐದು ರಾಜ್ಯಗಳಲ್ಲೂ ಬಿಜೆಪಿ ಸೋಲುಂಡಿದೆ. ಜನರ ಪ್ರತಿಭಟನೆಗಳು ವೇಗ ಪಡೆದುಕೊಳ್ಳುತ್ತಿವೆ. ಮೂರು ಕುಖ್ಯಾತ ಕೃಷಿ ಕಾನೂನುಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ಇಡೀ ಒಂದು ವರ್ಷದ ಕಾಲ ನಡೆದ ರೈತರ ಹೋರಾಟವು, ಭಯಭೀತಿಗೊಳಗಾದ ಮೋದಿ ಸರ್ಕಾರವು ಕಳೆದ ನವೆಂಬರ್‌ನಲ್ಲಿ ಅವುಗಳನ್ನು ಹಿಂಪಡೆದ ನಂತರವೇ ಕೊನೆಗೊಂಡಿತು. ಸರ್ಕಾರದ ಜನ–ವಿರೋಧಿ ನೀತಿಗಳ ವಿರುದ್ಧ ಜನರ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಅವುಗಳಲ್ಲಿ ಅತ್ಯಂತ ಇತ್ತೀಚಿನ ಮತ್ತು ಅತ್ಯಂತ ದೊಡ್ಡದಾದ ಪ್ರತಿಭಟನಾ ಕಾರ್ಯಕ್ರಮವೆಂದರೆ, ಮಾರ್ಚ್ 28–29ರಂದು ನಡೆದ ಎರಡು ದಿನಗಳ ಸಾರ್ವತ್ರಿಕ ಮುಷ್ಕರವೇ. ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಮತ್ತು ರೈತ ಸಂಘಟನೆಗಳು ಈ ಮುಷ್ಕರಕ್ಕೆ ಕರೆ ಕೊಟ್ಟಿದ್ದವು. ಜನಪರ ಸಂಘಟನೆಗಳ ಬೆಂಬಲದಿಂದ ಈ ಸಾರ್ವತ್ರಿಕ ಮುಷ್ಕರವು ಅಭೂತಪೂರ್ವ ಯಶಸ್ಸು ಕಂಡಿತು. ಈ ಮುಷ್ಕರದಲ್ಲಿ ಅಂದಾಜು 25 ಕೋಟಿ ಜನರು ಭಾಗವಹಿಸಿದ್ದರು.

ಈ ಬೃಹತ್ ಮುಷ್ಕರ ನಡೆದ ಕೆಲವೇ ದಿನಗಳ ನಂತರ, ಒಂಬತ್ತು ರಾಜ್ಯಗಳಲ್ಲಿ ಕೋಮು ಹಿಂಸಾಚಾರದ ವ್ಯವಸ್ಥಿತ ಘಟನೆಗಳು ಭುಗಿಲೆದ್ದವು. ಏಪ್ರಿಲ್ 2 ರಂದು ಹಿಂದೂ ಹೊಸ ವರ್ಷ (ನವ ಸಂವತ್ಸರ), ಏಪ್ರಿಲ್ 10 ರಂದು ರಾಮನವಮಿ ಮತ್ತು ಏಪ್ರಿಲ್ 16 ರಂದು ಹನುಮಾನ್ ಜಯಂತಿ, ಈ ಮೂರೂ ಧಾರ್ಮಿಕ ಸಂದರ್ಭಗಳನ್ನು, ಪ್ರಚೋದನಕಾರಿ ಮೆರವಣಿಗೆಗಳ ಮೂಲಕ, ಅಲ್ಪಸಂಖ್ಯಾತ ಸಮುದಾಯದ ಜನರನ್ನು ಪ್ರಚೋದಿಸುವ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲಾಯಿತು. ಒಂದು ಇಂಥಹ ಮೆರವಣಿಗೆಯು ಮಸೀದಿಯನ್ನು ಪ್ರವೇಶಿಸಿ ಅಲ್ಲಿ ಕೇಸರಿ ಧ್ವಜವನ್ನು ಹಾರಿಸಿದ ಘಟನೆಯೂ ನಡೆಯಿತು. ಈ ಪ್ರಚೋದನಾಕಾರೀ ಕ್ರಮವನ್ನು ಅನುಸರಿಸೀ ಬಿಜೆಪಿ ಆಡಳಿತವು ಘರ್ಷಣೆಗಳು ನಡೆದ ಸ್ಥಳಗಳಲ್ಲಿ ಆ ಪ್ರದೇಶದಲ್ಲಿನ ಪ್ರತಿಭಟನಾಕಾರರ ಮನೆಗಳನ್ನು ನೆಲಸಮಗೊಳಿಸಿತು. ಹೆಚ್ಚಾಗಿ, ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರ ಮನೆಗಳು/ಅಂಗಡಿಗಳು ಮತ್ತು ಬಹುಸಂಖ್ಯಾತ ಸಮುದಾಯಕ್ಕೆ ಸೇರಿದವರ ಕೆಲವು ಮನೆಗಳನ್ನೂ ನೆಲಸಮಗೊಳಿಸಿತು. ಸ್ಪಷ್ಟ ಪ್ರಚೋದನೆ ಮತ್ತು ಅದಕ್ಕೆ ಪಕ್ಕವಾದ್ಯವೆಂಬಂತೆ ಹರಿಯ ಬಿಟ್ಟ ಕಪಟ ಪ್ರಚಾರವು ದ್ವೇಷದ ಜ್ವಾಲೆಗಳನ್ನು ಪ್ರಚೋದಿಸುವುದು ಮತ್ತು ಧಾರ್ಮಿಕ ಸಮುದಾಯಗಳ ನಡುವಿನ ಸಾಮರಸ್ಯವನ್ನು ಹಾಳುಗೆಡವುವುದು ಸ್ವಾಭಾವಿಕವೇ.

ಈ ಕೋಮು–ದ್ವೇಷ ಮತ್ತು ಅದರ ಪ್ರಚಾರವು ಸಾರ್ವಜನಿಕರ ಗಮನವನ್ನು ಬೇರೆಡೆಗೆ ತಿರುಗಿಸುವ ಉದ್ದೇಶವನ್ನು ಸಾಧಿಸುತ್ತಿದೆ ಎಂಬುದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ. ಸರ್ಕಾರದ ಆರ್ಥಿಕ ನೀತಿಗಳಿಂದಾಗಿ ಏರುತ್ತಿರುವ ಬೆಲೆಗಳು, ಹೊರಲಾರದ ತೆರಿಗೆಗಳ ಭಾರ, ಕಡಿಮೆ ಕೂಲಿ ಮತ್ತು ನಿರುದ್ಯೋಗ ಮುಂತಾದ ಸಮಸ್ಯೆಗಳು ಜನರ ಆರ್ಥಿಕ ಸಂಕಷ್ಟಗಳಿಗೆ ಕಾರಣವಾಗಿವೆ. ಆದ್ದರಿಂದ, ಆರ್ಥಿಕ ನೀತಿಗಳನ್ನು ಬದಲಾಯಿಸಿಕೊಳ್ಳುವಂತೆ ಸಂಘಟಿತ ಹೋರಾಟಗಳ ಮೂಲಕ ಜನರು ಮೋದಿ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದಾರೆ. ದಿನೇ ದಿನೇ ಹೆಚ್ಚುತ್ತಿರುವ ಈ ಹೋರಾಟಗಳಿಂದ ಸಾರ್ವಜನಿಕರ ಗಮನವನ್ನು ಬೇರೆಡೆಗೆ ತಿರುಗಿಸುವ ಉದ್ದೇಶದಿಂದ, ಕೋಮು–ದ್ವೇಷವನ್ನು ಜನರಲ್ಲಿ ಹರಡಿಸುವ ಮೂಲಕ ಅವರ ಐಕ್ಯತೆಯನ್ನು ಮುರಿಯುವ ಹತಾಶ ಪ್ರಯತ್ನದಲ್ಲಿ ಮೋದಿ ಸರ್ಕಾರ ತೊಡಗಿದೆ. ಆಕಾಶದೆತ್ತರಕ್ಕೆ ಏರುತ್ತಿರುವ ಹಣದುಬ್ಬರದಿಂದ ಮತ್ತು ನಿರುದ್ಯೋಗದಿಂದ ಅತಿ ಹೆಚ್ಚು ತೊಂದರೆಗಳಿಗೆ ಈಡಾಗುವವರೆಂದರೆ, ಬಡವರೇ. ಕೋಮು ಗಲಭೆಗಳಲ್ಲಿ ತಮ್ಮ ಜೀವ ಕಳೆದುಕೊಳ್ಳುವವರೂ ಬಡವರೇ. ಗಲಭೆಗಳಲ್ಲಿ ತಮ್ಮ ಕವಡೆ ಕಾಸಿನ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುವವರೂ ಬಡವರೇ ಹೌದು.

ದೇಶದಲ್ಲಿ ಬಡವರ ಮತ್ತು ವಂಚಿತರ ಸಂಖ್ಯೆಯೇ ಅತಿ ದೊಡ್ಡದು. ಅತಿ ಹೆಚ್ಚು ಭಾರದ ತೆರಿಗೆಯನ್ನು ಮತ್ತು ಬೆಲೆ ಏರಿಕೆಯ ಭಾರವನ್ನು ಹೊರುವವರೂ ಅವರೇ. ಇಷ್ಟೊಂದು ಸಂಖ್ಯೆಯ ಜನರು ಇಷ್ಟೊಂದು ಹೊಡೆತಗಳಿಗೆ ತುತ್ತಾಗಿರುವುದನ್ನು ಬಹುಷಃ ಯಾರೂ ತಮ್ಮ ಜೀವಮಾನದಲ್ಲೇ ಕಂಡಿಲ್ಲವೇನೋ.

ಬೆನ್ನು ಮುರಿಯುವ ಬೆಲೆ ಏರಿಕೆ

ಕಳೆದ ಒಂದು ವರ್ಷದಲ್ಲಿ, ಆಹಾರ ಪದಾರ್ಥಗಳಿಂದ ಹಿಡಿದು ಇಂಧನಗಳವರೆಗೆ ದಿನ ಬಳಕೆಯ ಎಲ್ಲ ವಸ್ತುಗಳ ಬೆಲೆಗಳೂ ನಿರಂತರವಾಗಿ ಏರುತ್ತಿವೆ. ಕುಟುಂಬದ ಆಯ–ವ್ಯಯಗಳು ಆಯ ತಪ್ಪಿವೆ. ಬಡವರು ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಕಟ್ಟಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿದ್ದಾರೆ. ಅಂತಿಮವಾಗಿ, ಆಹಾರ–ಸರಕುಗಳ ಬಳಕೆಯಲ್ಲಿ ಇಳಿಕೆಯಾಗಿದೆ. ಚಿಲ್ಲರೆ ಹಣದುಬ್ಬರ, ಅಂದರೆ, ಜನ ಸಾಮಾನ್ಯರು ಕೊಳ್ಳುವ ಜೀವನಾವಶ್ಯಕ ವಸ್ತುಗಳ ಮತ್ತು ಸೇವೆಗಳ ಬೆಲೆಗಳು ಮಾರ್ಚ್ ತಿಂಗಳಲ್ಲಿ 6.95% ರಷ್ಟು ಏರಿಕೆಯಾಗಿವೆ. ಫೆಬ್ರವರಿಯಲ್ಲಿ ಶೇ.5.85ರಷ್ಟು ಏರಿಕೆಯಾಗಿದ್ದ ಆಹಾರ ಪದಾರ್ಥಗಳ ಬೆಲೆಗಳು ಮಾರ್ಚ್‌ನಲ್ಲಿ ಶೇ.7.68ರಷ್ಟು ಏರಿಕೆಯಾಗಿವೆ. ಅಡಿಗೆ ಎಣ್ಣೆಯ ಬೆಲೆ ಶೇ.18.79ರಷ್ಟು ಮತ್ತು ತರಕಾರಿಗಳ ಬೆಲೆಗಳು ಶೇ.11.64ರಷ್ಟು ಏರಿಕೆಯಾಗಿವೆ. ಮಾಂಸ ಮತ್ತು ಮೀನಿನ ಬೆಲೆ ಶೇ.9.63ರಷ್ಟು ಮತ್ತು ಸಾಂಬಾರ ಪದಾರ್ಥಗಳ ಬೆಲೆಗಳು ಶೇ.8.5ರಷ್ಟು ಏರಿಕೆಯಾಗಿವೆ. ದವಸ–ಧಾನ್ಯಗಳು ಮತ್ತು ಹಾಲಿನ ಉತ್ಪನ್ನಗಳು ಸುಮಾರು 5%ನಷ್ಟು ಏರಿಕೆಯಾಗಿವೆ. ಭಾರತದ ಬಹುತೇಕ ಕುಟುಂಬಗಳ ವರಮಾನದ ಬಹು ದೊಡ್ಡ ಪಾಲು ಆಹಾರ ಪದಾರ್ಥಗಳಿಗಾಗಿಯೇ ಖರ್ಚಾಗುತ್ತದೆ. ಆದ್ದರಿಂದ, ಜೀವನಾವಶ್ಯಕ ವಸ್ತುಗಳ ನಿರಂತರ ಬೆಲೆ ಏರಿಕೆಯು ಅವರ ಜೀವನ ಮಟ್ಟವನ್ನು ನಾಶಪಡಿಸುತ್ತಿದೆ. ಇಷ್ಟೇ ಸಾಲದು ಎಂಬಂತೆ, ಪೆಟ್ರೋಲ್, ಡೀಸೆಲ್, ವಿದ್ಯುಚ್ಛಕ್ತಿ ದರಗಳು ಶೇ.7.5 ಏರಿದರೆ, ಬಟ್ಟೆ ಮತ್ತು ಪಾದರಕ್ಷೆಗಳು ಶೇ.9.4ರಷ್ಟು ತುಟ್ಟಿಯಾಗಿವೆ. ಅಂದರೆ, ಜನರು ಸಹಿಸಿಕೊಳ್ಳಲಾಗದಷ್ಟು ಮಟ್ಟದಲ್ಲಿ ಬೆಲೆಗಳು ಏರುತ್ತಿವೆ.

ಬೆಲೆ ಏರಿಕೆಯ ಕೆಟ್ಟ ಸುದ್ದಿ ಇಲ್ಲಿಗೇ ಮುಗಿಯುವುದಿಲ್ಲ. ಸರ್ಕಾರವೇ ಬಿಡುಗಡೆ ಮಾಡಿದ ಸಗಟು ಬೆಲೆಗಳ ದತ್ತಾಂಶವು ಆಘಾತಕಾರಿ ಏರಿಕೆಯನ್ನು ತೋರಿಸುತ್ತದೆ. ಮಾರ್ಚ್ 2022 ರಲ್ಲಿ, ಸರಕುಗಳ ಸಗಟು ಬೆಲೆಗಳು ಶೇ. 14.5ರಷ್ಟು ಏರಿವೆ. ಈ ಏರಿಕೆಯು ಕಳೆದ ಹತ್ತು ವರ್ಷಗಳಲ್ಲಿ ಎರಡನೇ ಅತ್ಯಧಿಕ ಏರಿಕೆ. ಕೆಲವು ತಿಂಗಳ ಹಿಂದಷ್ಟೇ, 2021ರ ನವೆಂಬರ್‌ನಲ್ಲಿ, ಗರಿಷ್ಠ ಪ್ರಮಾಣದ ಏರಿಕೆಯ ವರದಿಯಾಗಿತ್ತು. ವಾಸ್ತವವಾಗಿ, ಕಳೆದ ಹತ್ತು ವರ್ಷಗಳ ಅತ್ಯಧಿಕ ವಾರ್ಷಿಕ ಸರಾಸರಿ ಶೇ.13ರ ಸಗಟು ಬೆಲೆ ಏರಿಕೆಯ ವರ್ಷವೆಂದರೆ, 2021–22 ವರ್ಷವೇ. 2012–13ನೇ ಸಾಲಿನ ಶೇ.6.9 ಏರಿಕೆಯು ಎರಡನೇ ಅತ್ಯಧಿಕ ವಾರ್ಷಿಕ ಸರಾಸರಿ ಸಗಟು ಬೆಲೆ ಏರಿಕೆ. ಸಗಟು ಬೆಲೆಗಳಲ್ಲಿನ ಈ ಹೆಚ್ಚಳದ ದೊಡ್ಡ ಭಾಗವು ಇಂಧನ ಬೆಲೆಗಳಿಂದ ಪ್ರೇರಿತವಾಗಿದೆ. ಇದೊಂದು ಅಂಶವೇ ಸಗಟು ಬೆಲೆ ಸೂಚ್ಯಂಕದ ಶೇ.25 ಜಿಗಿತಕ್ಕೆ ಕಾರಣವಾಗಿದೆ. ಅತ್ಯಧಿಕ ಪ್ರಮಾಣದ ಅಬಕಾರಿ ಸುಂಕಗಳನ್ನು ಹೇರಿದ ಮೋದಿ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಕೃತಕ ಏರಿಕೆಗೆ ಕಾರಣವಾಗಿದೆ.

ಸರಕು–ಸಾಮಗ್ರಿಗಳ ಸಗಟು ಬೆಲೆಗಳಲ್ಲಿ ಇತ್ತೀಚೆಗೆ ಆಗಿರುವ ಹೆಚ್ಚಳವು ಸ್ವಲ್ಪ ಸಮಯದ ನಂತರ ಗ್ರಾಹಕರಿಗೆ ವರ್ಗಾಯಿಸಲ್ಪಡುತ್ತದೆ. ಅಂದರೆ, ಮುಂಬರುವ ತಿಂಗಳುಗಳಲ್ಲಿ, ಈ ಹೆಚ್ಚಿನ ಸಗಟು ಬೆಲೆ ಮಟ್ಟದ ಸರಕು–ಸಾಮಗ್ರಿಗಳ ಚಿಲ್ಲರೆ ಬೆಲೆಗಳು, ಕನಿಷ್ಠ ಪಕ್ಷ ಸಗಟು ಬೆಲೆಗಳು ಏರಿಕೆಯಾದ ದರದಲ್ಲೇ, ಏರುತ್ತವೆ. ಗ್ರಾಹಕ ವಸ್ತುಗಳ ಈಗಿರುವ ಬೆಲೆಗಳ ಮಟ್ಟವೇ ಒಂದು ದೊಡ್ಡ ಹೊರೆಯಾಗಿರುವಾಗ, ಇತ್ತೀಚಿನ ಸಗಟು ಬೆಲೆ ಏರಿಕೆಯಿಂದಾಗಿ ಚಿಲ್ಲರೆ ಬೆಲೆಗಳು ಆ ಹೊರೆಯನ್ನು ಮತ್ತಷ್ಟು ದೊಡ್ಡದು ಮಾಡುತ್ತವೆ. ಜನಸಾಮಾನ್ಯರು ಮತ್ತಷ್ಟು ಬೆಲೆ ಏರಿಕೆಯ ಭಾರವನ್ನು ಹೊರಬೇಕಾಗುತ್ತದೆ.


ಉದ್ಯೋಗ ಸೃಷ್ಟಿಸುವ ಭರವಸೆ ಏನಾಯ್ತು?

ಏರುತ್ತಿರುವ ಬೆಲೆಗಳು ಭಾರತದಲ್ಲಿ ಜನರಿಗೆ ಅತಿಯಾದ ನೋವು ಉಂಟು ಮಾಡುತ್ತವೆ. ಏಕೆಂದರೆ, ಜನಸಂಖ್ಯೆಯ ಒಂದು ಬಹಳ ದೊಡ್ಡ ವಿಭಾಗದ ಸಂಪಾದನೆ ತೀರಾ ಕೆಳ ಮಟ್ಟದಲ್ಲಿದೆ. ಉದ್ಯೋಗಗಳ ಕೊರತೆ ಮತ್ತು ಕಡಿಮೆ ಆದಾಯದಿಂದಾಗಿ ಈಗಾಗಲೇ ಜರ್ಝರಿತರಾಗಿರುವ ಜನರ ಮೇಲೆ ಬೆನ್ನು ಮುರಿಯುವ ಮತ್ತೊಂದು ಬೆಲೆ ಏರಿಕೆ ಬರುತ್ತಿದೆ. ಹಾಗಾಗಿ, ಈ ಸುತ್ತಿನ ಬೆಲೆ ಏರಿಕೆಯು ಈಗಾಗಲೇ ನಿಕೃಷ್ಟ ಮಟ್ಟದ ಜೀವನವನ್ನು ತಕ್ಷಣವೇ ಮತ್ತಷ್ಟು ನಿಕೃಷ್ಟಗೊಳಿಸುತ್ತದೆ. ಜನರಿಗೆ ಒದಗಿರುವ ಪ್ರಸ್ತುತ ಆರ್ಥಿಕ ದುಃಸ್ಥಿತಿಯು ಕೋವಿಡ್ ಸಾಂಕ್ರಾಮಿಕದ ಅನಿವಾರ್ಯ ಪರಿಣಾಮವಲ್ಲ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಮೋದಿ ಸರ್ಕಾರ ರೂಪಿಸಿದ ಸತ್ವ–ರಹಿತ ಸ್ಪಂದನೆಯಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಜನರ ಸಂಪಾದನೆ ಅಪಾರ ಹಾನಿಗೊಳಗಾಯಿತು ಎಂಬುದು ನಿಜವೇ. ಆದರೆ, ನಿಜಕ್ಕೂ, ಕೋವಿಡ್ ಎರಗುವ ಮೊದಲೇ ಆರ್ಥಿಕ ಕುಸಿತ ಆರಂಭವಾಗಿತ್ತು. ಸಿಎಂಐಇ ಸಮೀಕ್ಷೆಯ ಅಂಕಿಅಂಶಗಳ ಪ್ರಕಾರ, 2018ರ ಉತ್ತರಾರ್ಧದಿಂದಲೇ ನಿರುದ್ಯೋಗ ದರವು ಶೇ.7–8ರ ಆಸು ಪಾಸಿನಲ್ಲಿತ್ತು.


ಉದ್ಯೋಗ ಬಿಕ್ಕಟ್ಟಿನ ಆಳತೆಯನ್ನು ನಿರುದ್ಯೋಗ ದರಗಳ ಮೂಲಕ ಮಾಡುವ ಕ್ರಮವು ನಿಖರವಾಗಲಾರದು. ಉದ್ಯೋಗ ಬಿಕ್ಕಟ್ಟಿನ ಪ್ರಮಾಣ ಮತ್ತು ತೀವ್ರತೆಯನ್ನು ಅರ್ಥಮಾಡಿಕೊಳ್ಳಲು, ಈ ಅಂಕಿ ಸಂಖ್ಯೆಗಳನ್ನು ಗಮನಿಸಿ: ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ ಉದ್ಯೋಗದಲ್ಲಿರುವವರ ಒಟ್ಟು ಸಂಖ್ಯೆಯು ಜನವರಿ 2017ರಲ್ಲಿ 40.1 ಕೋಟಿಯಿಂದ 2022ರ ಜನವರಿಯಲ್ಲಿ 39.6 ಕೋಟಿಗೆ ಇಳಿದಿದೆ. ಆದರೆ, ಇದೇ ಅವಧಿಯಲ್ಲಿ ಭಾರತದ ಜನಸಂಖ್ಯೆಯು 130.5 ಕೋಟಿಯಿಂದ 137.4 ಕೋಟಿಗೆ ಏರಿದೆ.

ಉದ್ಯೋಗ ಬಿಕ್ಕಟ್ಟಿನ ತೀವ್ರತೆಯನ್ನು ಗ್ರಾಮೀಣ

ಪುಟ 14 ಕ್ಕೆ



ಕೋಮುಗಲಭೆ ಮತ್ತು ನಿರುದ್ಯೋಗ – "ನೋಡು, ನೋಡು, ಇದು ನಾನು"
ವ್ಯಂಗ್ಯಚಿತ್ರ ಕೃಪೆ: ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಸಿಪಿಐ(ಎಂ) ಸ್ವತಂತ್ರ ಶಕ್ತಿಯ ಬೆಳವಣಿಗೆ –ನಮಗಿರುವ ಏಕೈಕ ಮಾರ್ಗ.......

ಪುಟ 11 ರಿಂದ

ನಡೆಸಬೇಕೆಂದು ಮಹಾಧಿವೇಶನವು ಹೇಳಿತು.

ಒಂದು ರಾಷ್ಟ್ರಮಟ್ಟದ ಸಾಂಸ್ಕೃತಿಕ ಸಂಘಟನೆ ರಚಿಸಬೇಕೆಂಬ ಚರ್ಚೆಗೆ ಉತ್ತರಿಸುತ್ತಾ ಪ್ರಕಾಶ್ ಕಾರಟ್, ರಾಷ್ಟ್ರ ಮಟ್ಟದ ಸಾಂಸ್ಕೃತಿಕ ಸಂಘಟನೆ ಸಾಧ್ಯವಿಲ್ಲವೆಂದರು. ಅಖಿಲ ಭಾರತ ಮಟ್ಟದಲ್ಲಿ ವಿಶಾಲ ತಳಹದಿಯ ಸಾಂಸ್ಕೃತಿಕ ಚಳುವಳಿಗಳ ಮತ್ತು ವೇದಿಕೆಗಳು ರಚನೆ ಆಗಬೇಕಾಗಿದೆ ಎಂಬುದನ್ನು ವಿವರಿಸಿದರು.

ಪಕ್ಷ ಮತ್ತು ಸಮೂಹ ಸಂಘಟನೆಗಳ ಸಂಬಂಧ:

ಪಕ್ಷ ಮತ್ತು ಸಮೂಹ ಸಂಘಟನೆಗಳ ಸಂಬಂಧ ಕುರಿತು ಇಂದಿಗೂ ಮುಂದುವರಿದಿರುವ ತಪ್ಪು ವಿಧಾನಗಳ ಬಗ್ಗೆ ಚರ್ಚಿಸಲಾಯಿತು. ಕೆಲವು ರಾಜ್ಯಗಳಲ್ಲಿ ಸಮೂಹ ರಂಗಗಳನ್ನು ಪಕ್ಷದ ಬಾಲಂಗೋಚಿಗಳನ್ನಾಗಿ ನಿರ್ವಹಿಸುತ್ತಿರುವ ಬಗ್ಗೆ ಗಮನಿಸಲಾಯಿತು. 1981, 2009 ಮತ್ತು ಕೊಲ್ಕೊತ್ತಾ ಪ್ಲೀನಂ ದಸ್ತಾವೇಜುಗಳನ್ನು ಎಲ್ಲಾ ಹಂತಗಳಲ್ಲಿ ಮನವರಿಕೆ ಮಾಡಿಕೊಡಬೇಕೆಂದು ತೀರ್ಮಾನಿಸಲಾಯಿತು.

ಯುವ ಮತ್ತು ಮಹಿಳಾ ಸಂಯೋಜನೆ:

ಪಕ್ಷದಲ್ಲಿ ಈಗ ಶೇ.25 ರಷ್ಟು ಮಹಿಳಾ ಸದಸ್ಯತ್ವ ಮತ್ತು ಶೇ.20 ರಷ್ಟು ಯುವ ಸದಸ್ಯತ್ವವಿದೆ. ಕರ್ನಾಟಕದಲ್ಲಿ ಶೇ.32 ರಷ್ಟು ಮಹಿಳಾ ಸದಸ್ಯತ್ವವಿರುವುದನ್ನು ವರದಿಯು ಗುರುತಿಸಿದೆ. ವ್ಯವಸ್ಥಿತ ಮತ್ತು ಪ್ರಜ್ಞಾಪೂರ್ವಕ ಕ್ರಮಗಳ ಮೂಲಕ ಯುವ, ಲಿಂಗ, ಸಾಮಾಜಿಕ ಪ್ರಾತಿನಿಧ್ಯವನ್ನು ಹೆಚ್ಚು ಮಾಡಬೇಕೆಂದು ತೀರ್ಮಾನಿಸಲಾಗಿದೆ. ಕೇರಳವು ಯುವ ಸಂಗಾತಿಗಳಿಗೆ ಸಮಿತಿಗಳಲ್ಲಿ ಕೋಟಾ ನಿಗದಿಪಡಿಸಿದೆ.

ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ:

ಪಕ್ಷದ ವಿವಿಧ ಹಂತದ ಸಮಿತಿಗಳಲ್ಲಿ ವಯಸ್ಸಿನ ಮಿತಿ ಮತ್ತು ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ಕುರಿತು ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ಮಾಡಲಾಗಿದೆ. ಹಿಂದಿನ ಕೇಂದ್ರ ಸಮಿತಿ ಸದಸ್ಯರ ವಯಸ್ಸು 80 ವರ್ಷವಿತ್ತು. ಈಗ ಅದನ್ನು 75 ವರ್ಷಕ್ಕೆ ಇಳಿಸಲಾಗಿದೆ. ರಾಜ್ಯ ಸಮಿತಿಗಳೂ ಸಹ ವಯಸ್ಸಿನ ಮಿತಿಯನ್ನು ಜಾರಿಗೊಳಿಸಿವೆ. ವಿವಿಧ ರಾಜ್ಯ ಸಮಿತಿಗಳು 70/72 ವಯಸ್ಸನ್ನು ನಿಗದಿ ಮಾಡಿವೆ. ಜಿಲ್ಲಾ ಸಮಿತಿಗಳು 70 ವರ್ಷಕ್ಕೂ ಕಡಿಮೆ ವಯಸ್ಸನ್ನು ನಿಗದಿ ಮಾಡಿಕೊಳ್ಳಬಹುದೆಂದು ಸೂಚಿಸಲಾಗಿದೆ. ಪ್ರತಿ ಬಾರಿಯೂ ವಯಸ್ಸಿನ ಮಿತಿಯನ್ನು ವಿಮರ್ಶಿಸಿ ನಿಗದಿಪಡಿಸಲು ಕೇಂದ್ರ ಸಮಿತಿಗೆ ಅಧಿಕಾರ ನೀಡಲಾಗಿದೆ.

ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಸಂಬಂಧಿಸಿ ಬರುವ ದೂರುಗಳನ್ನು ಪರಿಶೀಲಿಸಲು ಆಂತರಿಕ ದೂರು ಸಮಿತಿಗಳನ್ನೂ (ಐಸಿಸಿ) ರಚಿಸಬೇಕೆಂದು ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ಸೇರ್ಪಡೆ ಮಾಡಲಾಯಿತು.

ಚರ್ಚೆ–ತಿದ್ದುಪಡಿಗಳು:

ರಾಜಕೀಯ–ಸಂಘಟನಾ ವರದಿಯ ಮೇಲೆ 8 ಮಹಿಳೆಯರು ಒಳಗೊಂಡು 48 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು. ವರದಿಯ ಕುರಿತು ಸಮ್ಮೇಳನದಲ್ಲಿ 64 ತಿದ್ದುಪಡಿಗಳು ಮತ್ತು 3 ಸಲಹೆಗಳು ಬಂದಿದ್ದವು. ಕರ್ನಾಟಕವನ್ನು ಪ್ರತಿನಿಧಿಸಿ ಯು.ಬಸವರಾಜ್ ಮಾತನಾಡಿದರು.

ನೂತನ ಕೇಂದ್ರ ಸಮಿತಿ:

23 ನೇ ಮಹಾಧಿವೇಶನವು 85 ಸದಸ್ಯರ ಕೇಂದ್ರ ಸಮಿತಿಯನ್ನು (ಒಂದು ಖಾಲಿ) ಆಯ್ಕೆ ಮಾಡಿತು. ಹಿಂದಿನ ಕೇಂದ್ರ ಸಮಿತಿಯು 95 ಸದಸ್ಯರನ್ನು ಹೊಂದಿತ್ತು. ಹಿಂದಿನ ಸಮಿತಿಯಲ್ಲಿ 16 ಸಂಗಾತಿಗಳು ವಯೋಮಿತಿಯ ಕಾರಣಕ್ಕೆ ಬಿಡುಗಡೆ ಹೊಂದಿದರು. ಹೊಸ ಸಮಿತಿಯಲ್ಲಿ 17 ಸಂಗಾತಿಗಳು ಇದೇ ಮೊದಲ ಬಾರಿಗೆ ಆಯ್ಕೆಯಾದರು. 15 ಮಹಿಳಾ ಸದಸ್ಯರು ಆಯ್ಕೆಯಾದರು. ಹೊಸ ಕೇಂದ್ರ ಸಮಿತಿ 17 ಸದಸ್ಯರ ಪೊಲಿಟ್‌ಬ್ಯೂರೊವನ್ನು ಆಯ್ಕೆ ಮಾಡಿತು. ಬಿಡುಗಡೆಗೊಂಡ ಸಂಗಾತಿಗಳ ಪೈಕಿ ಎಸ್. ರಾಮಚಂದ್ರನ್ ಪಿಳ್ಳೆ, ಬಿಮನ್ ಬಸು ಮತ್ತು ಹನ್ನನ್ ಮೊಲ್ಲಾ ಇವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಈ ಮೂರು ಸಂಗಾತಿಗಳನ್ನು ಕೇಂದ್ರ ಸಮಿತಿಗೆ ವಿಶೇಷ ಆಹ್ವಾನಿತರನ್ನಾಗಿ ತೀರ್ಮಾನಿಸಲಾಯಿತು. ಕರ್ನಾಟಕದಿಂದ ಕೇಂದ್ರ ಸಮಿತಿಗೆ ಯು.ಬಸವರಾಜ್ ಆಯ್ಕೆಯಾದರು. ಕಾರ್ಮಿಕ ರಂಗದ ಅಖಿಲ ಭಾರತ ಕೇಂದ್ರ ಭಾಗವಾಗಿ ಕೆ.ಎನ್.ಉಮೇಶ್ ಕೇಂದ್ರ ಸಮಿತಿಗೆ ಆಯ್ಕೆಯಾದರು.

ನೂತನ ಕೇಂದ್ರ ನಿಯಂತ್ರಣಾ ಆಯೋಗ:

ಎ.ಕೆ. ಪದ್ಮನಾಭನ್ ಅಧ್ಯಕ್ಷರಾಗಿ, ಎಂ.ವಿಜಯಕುಮಾರ್, ಶ್ರೀಧರ್, ಮಾಲಿನಿ ಭಟ್ಟಾಚಾರ್ಯ ಮತ್ತು ಎಸ್. ವೀರಯ್ಯ ಸದಸ್ಯರಾಗಿರುವ ಕೇಂದ್ರ ನಿಯಂತ್ರಣಾ ಆಯೋಗ ರಚನೆಯಾಯಿತು.



ಆರ್ಥಿಕ ಬಿಕ್ಕಟ್ಟು ಆಳಕ್ಕಿಳಿಯುತ್ತಿದೆ............

ಪುಟ 13 ರಿಂದ

ಉದ್ಯೋಗ ಖಾತ್ರಿ ಯೋಜನೆಯ ಮೂಲಕವೂ ಗ್ರಹಿಸಬಹುದು. ಈ ಯೋಜನೆಯಡಿಯಲ್ಲಿ ಉದ್ಯೋಗಕ್ಕಾಗಿ ಇಡುವ ಬೇಡಿಕೆಯ ಪ್ರಮಾಣವು ದೇಶದಲ್ಲಿ ನಿರುದ್ಯೋಗವು ಯಾವ ಮಟ್ಟದಲ್ಲಿದೆ ಎಂಬುದನ್ನು ಸೂಚಿಸುತ್ತದೆ. ಯೋಜನೆಯ ಅಧಿಕೃತ ಪೋರ್ಟಲ್‌ನಲ್ಲಿ ಲಭ್ಯವಿರುವ ದತ್ತಾಂಶದ ಪ್ರಕಾರ, 2018–19 ರಲ್ಲಿ, ಸುಮಾರು 7.77 ಕೋಟಿ ಜನರು ಈ ಯೋಜನೆಯಡಿಯಲ್ಲಿ ಕೆಲಸ ಮಾಡಿದ್ದಾರೆ. ಈ ಸಂಖ್ಯೆಯು 2019–20 ರಲ್ಲಿ 7.88 ಕೋಟಿಗೆ ಏರಿತು. ಆದರೆ, ಲಾಕ್‌ಡೌನ್ ಕಾರಣದಿಂದಾಗಿ ಈ ಸಂಖ್ಯೆಯು 2020–21 ರಲ್ಲಿ ಹೆಚ್ಚಿತು, ನಿಜ. ಆದರೆ, 2021–22ರಲ್ಲಿಯೂ ಈ ಯೋಜನೆಯಡಿಯಲ್ಲಿ ಉದ್ಯೋಗ ಪಡೆದವರ ಸಂಖ್ಯೆಯು 10.62 ಕೋಟಿಗೆ ಏರಿದ ಅಂಶವು ಉದ್ಯೋಗ ಬಿಕ್ಕಟ್ಟಿನ ತೀವ್ರತೆಯನ್ನು ತೋರಿಸುತ್ತದೆ. ಈಗಿರುವವರಿಗಿಂತಲೂ ಹೆಚ್ಚಿನ ಸಂಖ್ಯೆಯ ಕೆಲಸಗಾರರನ್ನು ಹೀರಿಕೊಳ್ಳುವ ಪರಿಸ್ಥಿತಿ ಕೃಷಿ ವಲಯದಲ್ಲಿ ಇಲ್ಲದಿರುವುದರಿಂದ, ನಿರುದ್ಯೋಗಿಗಳು ಉದ್ಯೋಗ ಖಾತರಿ ಯೋಜನೆಯಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಅರಸುವಂತಾಗಿದೆ. ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಅತಿ ಮುಖ್ಯವಾದ ಸಂಗತಿ ಎಂದರೆ, ಈ ಯೋಜನೆಯಡಿಯಲ್ಲಿ 2021–22ರಲ್ಲಿ, ಸರಾಸರಿ ಲೆಕ್ಕದಲ್ಲಿ (ಅಂದರೆ, ಎಲ್ಲ ರಾಜ್ಯಗಳನ್ನೂ ಒಳಗೊಂಡಂತೆ) ದೇಶದ ಒಬ್ಬ ನಿರುದ್ಯೋಗಿ ವ್ಯಕ್ತಿಗೆ ಒದಗಿಸಿದ ಕೆಲಸದ ದಿನಗಳ ಸಂಖ್ಯೆ ಕೇವಲ 50 ಮತ್ತು ದಿನದ ಕೂಲಿ ಕೇವಲ 209 ರೂ.ಗಳಷ್ಟಿತ್ತು. ಬದುಕುಳಿಯುವ ಸಲುವಾಗಿ ಇಷ್ಟು ಅಲ್ಪ ಪ್ರಮಾಣದ ಆದಾಯವನ್ನು ಒದಗಿಸುವ ಉದ್ಯೋಗವನ್ನು ಪಡೆಯಲು ಹಾತೊರೆಯುತ್ತಿರುವ ಸಂಗತಿಯು ಜನರು ಯಾವ ಮಟ್ಟದ ನಿರ್ಗತಿಕತನಕ್ಕೆ ಒಳಗಾಗಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ನಿಕೃಷ್ಟ ನೈಜ ವೇತನಗಳು

ಇಕನಾಮಿಕ್ ಟೈಮ್ಸ್ ಪತ್ರಿಕೆಯು ಗ್ರಾಮೀಣ ಬಳಕೆಯ ಮಟ್ಟಗಳ ಬಗ್ಗೆ ನಡೆಸಿದ ಅಧ್ಯಯನದ ಪ್ರಕಾರ, 2020–21 ರಲ್ಲಿ ನಿಜ ಕೃಷಿ ಕೂಲಿಯು ಕೇವಲ ಶೇ.0.3 ರಷ್ಟು ಮತ್ತು 2021–22ರಲ್ಲಿ ಶೇ.1ರಷ್ಟು ಏರಿಕೆಯಾಗಿದೆ. ಇದೇ ಅವಧಿಯಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇತರ ಕೂಲಿಯು 2020–21 ರಲ್ಲಿ ಶೇ.1 ರಷ್ಟು ಹೆಚ್ಚಿದೆ ಮತ್ತು 2021–22 ರಲ್ಲಿ ಶೇ.0.2ರಷ್ಟು ಇಳಿಕೆಯಾಗಿದೆ.

ಭಾರತದ ಜನಸಂಖ್ಯೆಯ ಬಹುಪಾಲು ಜನರು ವಾಸಿಸುವ ಗ್ರಾಮೀಣ ಪ್ರದೇಶಗಳಲ್ಲಿ ಹಣದುಬ್ಬರಕ್ಕೆ ಹೊಂದಿಸಿದ ಕೂಲಿಯ ಈ ನಿಕೃಷ್ಟ ಬದಲಾವಣೆಗಳು ಜನರ ಆರ್ಥಿಕ ಸಂಕಷ್ಟವನ್ನೂ ಮತ್ತು ಬಡತನದ ಅಗಾಧತೆಯನ್ನೂ ಮತ್ತು ಅವು ಒಂದು ಸಾಂಕ್ರಾಮಿಕ ಜಾಡ್ಯದಂತೆ ದೇಶವನ್ನು ವ್ಯಾಪಿಸುತ್ತಿವೆ ಎಂಬುದನ್ನೂ ತೋರಿಸುತ್ತದೆ.

ಮತೀಯ ಹಿಂಸಾಚಾರ ಜನರ ಹೋರಾಟಗಳನ್ನು ನಿರಾಯುಧಗೊಳಿಸುತ್ತದೆ

ಕೋಮು ಗಲಭೆಗಳು ನಡೆಯುತ್ತಿರುವಾಗ ಬಿಜೆಪಿ ನಾಯಕತ್ವವು, ಅದರಲ್ಲೂ ವಿಶೇಷವಾಗಿ ಸರ್ಕಾರ ನಡೆಸುವ ನಾಯಕರು, ಹಿಂಸಾಚಾರದ ಬಗ್ಗೆ ಒಂದೋ ದಿವ್ಯ ಮೌನ ತಾಳುತ್ತಾರೆ ಇಲ್ಲವೇ ಗಲಭೆಗಳನ್ನು ಹತ್ತಿಕ್ಕಲು ಪೊಲೀಸ್ ಪಡೆಯನ್ನು ನಿಯೋಜಿಸುವ ಕಾರ್ಯದಲ್ಲಿ ತೊಡಗಿದವರಂತೆ ಕಾಣಿಸಿಕೊಳ್ಳುತ್ತಾರೆ ಎಂಬುದನ್ನು ಗಮನಿಸುವುದು ಬೋಧಪ್ರದವಾಗಿದೆ. ಗಲಭೆಗಳು ನಡೆದ ಪ್ರತಿ ಸಂದರ್ಭದಲ್ಲೂ, ಪ್ರಾಯಶಃ, ಆರ್ಥಿಕ ಸಮಸ್ಯೆಗಳನ್ನು ನಿವಾರಿಸುವ ಒತ್ತಡವು ತಾತ್ಕಾಲಿಕವಾಗಿಯಾದರೂ ಕಡಿಮೆಯಾಯಿತು ಎಂದು ಬಿಜೆಪಿ ನಾಯಕತ್ವವು ನೆಮ್ಮದಿಯ ನಿಟ್ಟುಸಿರು ಬಿಡುತ್ತಿರಬಹುದು. ಅಲ್ಪಸಂಖ್ಯಾತ ಸಮುದಾಯವನ್ನು ಗುರಿ ಮಾಡಿದ ಹಿಜಾಬ್ ಧಾರಣೆ, ಲವ್ ಜಿಹಾದ್, ಏಕರೂಪ ನಾಗರಿಕ ಸಂಹಿತೆ ಮುಂತಾದ ವಿಷಯಗಳ ಬಗ್ಗೆ ಪದೇ ಪದೇ ಘಟಿಸುವ ಕೋಮು ಸಂಘರ್ಷಗಳನ್ನು ಆರ್‌ಎಸ್‌ಎಸ್ ಮತ್ತು ಸರ್ಕಾರದಲ್ಲಿರುವ ಅದರ ಪ್ರತಿನಿಧಿಗಳು, ಪ್ರಾಯಶಃ, ಹಿಂದೂ ರಾಷ್ಟ್ರದ ನಿರ್ಮಾಣದತ್ತ ಸಾಗುತ್ತಿರುವ ಹೆಜ್ಜೆಗಳಾಗಿ ನೋಡುತ್ತಾರೆ. ಆರ್ಥಿಕ ಸಮಸ್ಯೆಗಳ ನಿವಾರಣೆಯ ಒತ್ತಡ ಕಡಿಮೆಯಾದರೂ ಸರಿಯೇ ಅಥವಾ ಹಿಂದೂ ರಾಷ್ಟ್ರ ನಿರ್ಮಾಣದತ್ತ ವಾಲಿದ ಹೆಜ್ಜೆಯಾದರೂ ಸರಿಯೇ, ಅದಾವುದೇ ಇದ್ದರೂ, ಜನರ ಒಗ್ಗಟ್ಟನ್ನು ಮುರಿಯುವ ಈ ಕೋಮು ಗಲಭೆಗಳು ಬಿಜೆಪಿಯ ವಿಷಕಾರಿ ಆಡಳಿತವನ್ನು ಶಾಶ್ವತಗೊಳಿಸಲು ಸಹಾಯ ಮಾಡುತ್ತವೆ.

(ಕೃಪೆ: ನ್ಯೂಸ್‌ಕ್ಲಿಕ್, ಏಪ್ರಿಲ್ 24, 2022)

ಕೇಂದ್ರೀಯ ಮಾಹಿತಿ ಆಯೋಗದ ಈ ಪೇಚು!

ಪುಟ 12 ರಿಂದ

ಮುಖ್ಯ ಮಾಹಿತಿ ಅಧಿಕಾರಿ ಡಿಸೆಂಬರ್ 11, 2019 ರಂದು ನಿರಾಕರಿಸಿದರು. ಇದರ ವಿರುದ್ಧ ಅವರು ಎರಡು ಬಾರಿ ಅಪೀಲು ಹೋಗಬೇಕಾಗಿ ಬಂತು. ಆದರೂ ಅದನ್ನು ನಿರಾಕರಿಸಲಾಯಿತು. ಅದಕ್ಕೆ ಕೊಟ್ಟ ಕಾರಣ ಅದು ವಾಣಿಜ್ಯ ಗೋಪ್ಯತೆಯ ವಿಷಯ ಎಂಬುದು. ಆದರೆ ಮಾಹಿತಿ ಆಯೋಗ ಹಾಗೆ ಹೇಳುತ್ತಿರುವಾಗಲೇ, ಕೇಂದ್ರ ಹಣಕಾಸು ಇಲಾಖೆಯ ಆರ್ಥಿಕ ವ್ಯವಹಾರಗಳ ವಿಭಾಗ ಇದನ್ನು ಪ್ರಕಟಿಸಿತು. ಅದರ ಪ್ರಕಾರ ಚುನಾವಣಾ ಬಾಂಡುಗಳ 19ನೇ ಹಂತದ ಕೊನೆಯಲ್ಲಿ ಸರಕಾರ ಸುಮಾರು 5.5 ಕೋಟಿ ರೂ.ಗಳನ್ನು ಚುನಾವಣಾ ಬಾಂಡುಗಳ ಮೇಲೆ ಕಮಿಷನ್ ಆಗಿ ತೆತ್ತಿದೆ. ಬಜೆಟಿನ '2052' ಬಾಬ್ತಿನ ಅಡಿಯಲ್ಲಿ ಇದನ್ನು ತೆರಲಾಗಿದೆ

ಎಲ್ಲರಿಗೂ ತಿಳಿದಿರುವಂತೆ ಚುನಾವಣಾ ಬಾಂಡ್ 'ನ ಖಾವುಂಗಾ ನ ಖಾನೇ ದೂಂಗಾ' ಅಚ್ಛೇ ದಿನ್ ಸರಕಾರದ ಒಂದು ನವೀನ ಉಪಕರಣ. ಬಿಲಿಯಾಧಿಪತಿಗಳು ಈ ತೆರಿಗೆ ಮುಕ್ತ, ಬಡ್ಡಿ–ಮುಕ್ತ ಬಾಂಡುಗಳನ್ನು ಎಸ್‌ಬಿಐನಿಂದ ಖರೀದಿಸುತ್ತಾರೆ, ಅವನ್ನು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಬಳಸುತ್ತಾರೆ. ಈ ಬಾಂಡುಗಳನ್ನು ಯಾರು ಯಾರಿಗೆ ಕೊಟ್ಟರು ಎಂದು ಯಾರಿಗೂ ತಿಳಿದಿರುವುದಿಲ್ಲ. ಆದರೆ ಸರಕಾರ ಮಾತ್ರ ಇದನ್ನು ತಿಳಿದುಕೊಳ್ಳಲು ಅವಕಾಶವಿದೆ. ಅಲ್ಲದೆ ಅವುಗಳನ್ನು ಮುದ್ರಿಸುವ ಮತ್ತು ನಿರ್ವಹಿಸುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಕಮಿಷನ್‌ಗಳನ್ನು ಭರಿಸುವುದು ಸರಕಾರವೇ, ಅಂದರೆ ತೆರಿಗೆದಾರರ ಹಣದಿಂದ. ಆದರೆ ತಮ್ಮ ತೆರಿಗೆಗಳಿಂದ ನಡೆಯುವ ಈ ವ್ಯವಹಾರದ ಬಗ್ಗೆ ತಿಳಿಯುವ ಹಕ್ಕು ತೆರಿಗೆದಾರರಿಗಿಲ್ಲ!

ಆದ್ದರಿಂದಲೇ ಈ ಕುರಿತ ತಮ್ಮ ಪ್ರಶ್ನೆ ಸಾರ್ವಜನಿಕ ಹಿತಾಸಕ್ತಿಯ ಪ್ರಶ್ನೆ ಎಂದು'ಕೊಮೊಡೊರ್ ಬತ್ರರವರು ತರ್ಕಿಸಿದ್ದರು.

"ದಯವಿಟ್ಟು ಚುನಾವಣಾ ಬಾಂಡುಗಳ 19ನೇ ಹಂತದ ಮಾರಾಟದ ದತ್ತಾಂಶವನ್ನು ನೋಡಿ. 2022ರ ಜನವರಿ 1ರಿಂದ 10ರ ವರೆಗೆ ಮಾರಾಟ ನಡೆದಿತ್ತು. ಮಾರಾಟವಾದ ಬಾಂಡುಗಳಲ್ಲಿ 92.3ಶೇ.ಕ್ಕಿಂತ ಹೆಚ್ಚು ಬಾಂಡುಗಳು 'ಒಂದು ಕೋಟಿ' ಮೌಲ್ಯದವು ಎಂಬ ಸಂಗತಿ ಈ ಬಾಂಡುಗಳನ್ನು ಬಿಲಿಯಾಧಿಪತಿಗಳು ಬ್ಯಾಂಕ್ ಶುಲ್ಕ(ಕಮಿಷನ್) ಕೂಡ ತೆರದೆ ಖರೀದಿಸುತ್ತಾರೆ, ರಾಜಕೀಯ ಪಕ್ಷಗಳು ಈ ಬೃಹತ್ ಮೊತ್ತಗಳ ದೇಣಿಗೆಗಳನ್ನು ಪಡೆಯುತ್ತಾರೆ, ಅವು ತೆರಿಗೆ–ಮುಕ್ತವಾಗಿವೆ" ಹೀಗೆಂದು ಕೊಮೊಡೊರ್ ಬತ್ರರವರು ಕೇಂದ್ರೀಯ ಮಾಹಿತಿ ಆಯೋಗಕ್ಕೆ ಸಲ್ಲಿಸಿದ ಅಂತಿಮ ಟಿಪ್ಪಣಿಯಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಈ ಚುನಾವಣಾ ಬಾಂಡ್ ವ್ಯವಸ್ಥೆಯನ್ನು ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸುವ ಸಾಧನ ಎಂದು ಇದಕ್ಕೆ ಸವಾಲು ಹಾಕಲಾಗಿದೆ. ಸ್ವತಃ ಚುನಾವಣಾ ಆಯೋಗವೇ ಆರಂಭದಲ್ಲಿ ಇದನ್ನು ಪ್ರಶ್ನಿಸಿತ್ತು. ಇದರ ಸಾಂವಿಧಾನಿಕ ಸಿಂಧುತ್ವಕ್ಕೆ ಸವಾಲು ಹಾಕಿದ ಅರ್ಜಿಗಳು ವರ್ಷಗಳಾದರೂ ಇನ್ನೂ ವಿಚಾರಣೆಯಿಲ್ಲದೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಇವೆ. ಅಂದರೆ ಈ ಒಂದು ಕ್ರಮದಲ್ಲಿ ಕನಿಷ್ಟ ಮೂರು ಸ್ವತಂತ್ರ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸಲಾಗಿದೆಯೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ.

ಫ್ರಾನ್ಸಿನಲ್ಲಿ ಎಡ ಮುನ್ನಡೆ–ಗೆದ್ದು ಸೋತ ಮ್ಯಾಕ್ರಾನ್

ಜಗದ ಸುತ್ತು

ವಸಂತರಾಜ ಎನ್.ಕೆ.

ಫ್ರೆಂಚ್ ಅಧ್ಯಕ್ಷೀಯ ಚುನಾವಣಾ ಫಲಿತಾಂಶಗಳ ಹಲವು ವಿಶ್ಲೇಷಣೆಗಳು ಬಂದಿವೆ. ಇವುಗಳಲ್ಲಿ ಪ್ರಧಾನವಾಗಿ ಕೇಳಿ ಬಂದಿದ್ದು - ಫ್ರೆಂಚ್ ರಾಜಕಾರಣ ನಡುಪಂಥೀಯತೆ ಮತ್ತು ಉಗ್ರಬಲಪಂಥೀಯತೆ ನಡುವೆ ಧ್ರುವೀಕರಣಗೊಂಡಿದೆ. ಉಗ್ರ ಬಲಪಂಥೀಯತೆಗೆ ಬೆಂಬಲ ಹೆಚ್ಚಾಗಿದೆ. ಆದರೂ ರಾಜಕಾರಣದಲ್ಲಿ ನಡುಪಂಥೀಯತೆಯ ಮುಖ್ಯಧಾರೆಯನ್ನು ಮ್ಯಾಕ್ರಾನ್ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಮತದಾನದ ಸೂಕ್ಷ್ಮ ವಿಶ್ಲೇಷಣೆ ಮಾಡಿದರೆ ಕಾಣುವುದೇ ಬೇರೆ - ನಡುಪಂಥೀಯರ ದುರಾಡಳಿತ ಮತ್ತು ಜನವಿರೋಧಿ ನೀತಿಗಳಿಂದ ಫ್ರೆಂಚ್ ರಾಜಕಾರಣ ಬಲಪಂಥೀಯತೆಯತ್ತ ಹೊರಳಿರುವುದು ನಿಜ. ಆದರೆ ಎಡಪಂಥೀಯರು ಗಮನಾರ್ಹ ಮುನ್ನಡೆ ಸಾಧಿಸಿದ್ದಾರೆ. ಮ್ಯಾಕ್ರಾನ್ ಮತ್ತು ನಡುಪಂಥೀಯತೆ ಗೆದ್ದರೂ ಸೋತು ಕುಸಿಯುತ್ತಿದೆ. ಎಡಪಂಥೀಯತೆ ಗಮನಾರ್ಹ ಮುನ್ನಡೆ ಸಾಧಿಸಿದೆ. ರಾಜಕಾರಣದಲ್ಲಿ ಮೊದಲ ಎರಡು ಸ್ಥಾನಗಳಿಗೆ ಎಡ ಮತ್ತು ಉಗ್ರಬಲಪಂಥೀಯತೆ ನಡುವೆ ಹಣಾಹಣಿ ನಡೆದಿದೆ. ಜೂನ್ ಪಾರ್ಲಿಮೆಂಟರಿ ಚುನಾವಣೆಗಳು ಇದನ್ನು ಇನ್ನಷ್ಟು ಸ್ಪಷ್ಟವಾಗಿ ತೋರಿಸಲಿವೆ.

ಫ್ರಾನ್ಸಿನಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಮ್ಯಾಕ್ರಾನ್ ಪುನರಾಯ್ಕೆಯಾಗಿದ್ದಾರೆ. ಅವರು ಎರಡನೆಯ ಸುತ್ತಿನಲ್ಲಿ ಶೇ.58.5 ಮತ ಗಳಿಸಿ, ಶೇ.41.5 ಮತ ಗಳಿಸಿದ ತಮ್ಮ ನವ–ಫ್ಯಾಸಿಸ್ಟ್ ಉಗ್ರ ಬಲಪಂಥೀಯ ಪ್ರತಿಸ್ಪರ್ಧಿ ಮರೀನ್ ಲಿ ಪೆನ್ ಅವರನ್ನು ಸುಲಭವಾಗಿ ಸೋಲಿಸಿದ್ದಾರೆ. 2017ರ ಎರಡನೆಯ ಸುತ್ತಿನಲ್ಲಿ ಇವೇ ಎರಡು ಅಭ್ಯರ್ಥಿಗಳಿದ್ದು ಮ್ಯಾಕ್ರಾನ್ ಮತಗಳಿಕೆ ಶೇ.66ರಿಂದ ಶೇ.7.5ರಷ್ಟು ಕುಸಿದಿದೆ. ಲಿ ಪೆನ್ ಅವರ ಮತಗಳಿಕೆ ಕಳೆದ ಬಾರಿಯ ಶೇ.34ರಿಂದ ಶೇ.7.5ರಷ್ಟು ಏರಿಕೆಯಾಗಿದೆ. ಲಿ ಪೆನ್ ತಮ್ಮ ಪಕ್ಷ ಗೆದ್ದಿದೆ. ನಾವೇ ಫ್ರಾನ್ಸ್ ನ ಭವಿಷ್ಯವೆಂದು ಹೇಳಿಕೊಂಡಿದ್ದಾರೆ. ನಾವು ಸೋತೂ ಗೆದ್ದಿದ್ದೇವೆ ಎಂದಿದ್ದಾರೆ. ಮ್ಯಾಕ್ರಾನ್, ಹಾಗೆ ಯಾರೂ ಹೇಳದಿದ್ದರೂ, ನಿಜವಾಗಿಯೂ ಗೆದ್ದೂ ಸೋತಿದ್ದಾರೆ. ಮತಗಳಿಕೆ ಕುಸಿದದ್ದು ಮಾತ್ರವಲ್ಲದೆ ಇನ್ನೂ ಹಲವು ಅಂಶಗಳು ಈ ವಾಸ್ತವದತ್ತ ಬೊಟ್ಟು ಮಾಡುತ್ತಿವೆ.

ಎರಡನೆಯ ಸುತ್ತಿನಲ್ಲಿ ಸಮೀಕ್ಷೆಗಳ ಪ್ರಕಾರ ಇಬ್ಬರ ಮತಗಳಿಕೆ ಬಹಳ ಹತ್ತಿರವಿತ್ತು. ಫ್ರಾನ್ಸ್ ಮೊದಲ ನವ–ಫ್ಯಾಸಿಸ್ಟ್ ಉಗ್ರ ಬಲಪಂಥೀಯ ಅಧ್ಯಕ್ಷರನ್ನು ಆರಿಸಿದರೂ ಆಶ್ಚರ್ಯ ಪಡಬೇಕಾಗಿಲ್ಲ ಎಂಬುದು ಫ್ರಾನ್ಸ್ ನೊಳಗೂ, ಯುರೋ ಕೂಟದಲ್ಲೂ, ಪಾಶ್ಚಿಮಾತ್ಯ ಕೂಟದಲ್ಲೂ ತೀವ್ರ ಕುತೂಹಲ ಆತಂಕ ಮೂಡಿಸಿತ್ತು. ಲಿ ಪೆನ್ ಉಕ್ರೇನ್ ಯುದ್ಧದಲ್ಲಿ ಯುರೋ ಕೂಟದ ಕೆಲವು ಧೋರಣೆಗಳನ್ನು ವಿರೋಧಿಸಿದ್ದು, ಆಕೆ ಅಧ್ಯಕ್ಷರಾದರೆ ಯುರೋ ಮತ್ತು ನಾಟೋ ಕೂಟದ ಉಕ್ರೇನ್ ಯುದ್ಧದ ಕುರಿತಾದ ಐಕ್ಯತೆಗೆ ಧಕ್ಕೆ ತರಬಹುದು ಎಂಬ ಆತಂಕ ಆಳುವವರನ್ನು ಆವರಿಸಿತ್ತು. ಅವರ ಆತಂಕ ಎಷ್ಟು ತೀವ್ರವಾಗಿತ್ತು ಎಂದರೆ ಜರ್ಮನ್, ಸ್ಪಾನಿಷ್ ಮತ್ತು ಪೋರ್ಚುಗೀಸ್ ಪ್ರಧಾನಿಗಳು ಅತ್ಯಧಿಕ ಪ್ರಸಾರದ ಫ್ರೆಂಚ್ ದೈನಿಕದಲ್ಲಿ ಜಂಟಿ ಲೇಖನ ಬರೆದು ಮ್ಯಾಕ್ರಾನ್ ಅವರನ್ನು ಆರಿಸಬೇಕು ಎಂದು ಫ್ರೆಂಚ್ ಮತದಾರರಿಗೆ ಮನವಿ ಮಾಡಿದರು! ಬೇರೆ ಯಾವ ದೇಶದಲ್ಲಾದರೂ ನಡೆದಿದ್ದರೆ ಇದನ್ನು ದೇಶದ ಆಂತರಿಕ ವಿಷಯಗಳಲ್ಲಿ ಮೂಗು ತೂರಿಸುವುದು, ಸಾರ್ವಭೌಮತೆಯ ಉಲ್ಲಂಘನೆ ಎಂದು ಜಾಗತಿಕ ಮಾಧ್ಯಮ ಹುಯಿಲೆಬ್ಬಿಸುತ್ತಿದ್ದವು!

ಇನ್ನೊಂದು ಕಡೆ ಲಿ ಪೆನ್ ರ ವಲಸೆಗಾರ–ವಿರೋಧಿ, ಮುಸ್ಲಿಂ–ವಿರೋಧಿ, ಸಾಮಾಜಿಕ ಪ್ರತಿಗಾಮಿ ನೀತಿಗಳ ಕುರಿತು ಫ್ರಾನ್ಸ್ ನ ಬಹುಸಂಖ್ಯಾತ ದುಡಿಯುವ ಜನರಿಗೆ ಆತಂಕವಿತ್ತು. ಮ್ಯಾಕ್ರಾನ್ ಅವರ ದುಡಿಯುವ ಜನರಿಗೆ ವಿರೋಧಿಯಾದ ನೀತಿಗಳು, ದುಡಿಯುವ ಜನರ ಚಳುವಳಿಯನ್ನು ನಿರ್ದಯವಾಗಿ ಹತ್ತಿಕ್ಕಿದ್ದು, ಯಾವುದೇ ಜನಪರ ಕಾರ್ಯಕ್ರಮವನ್ನು ಜಾರಿ ಮಾಡದೆ ಇದ್ದದ್ದು, ಮುಸ್ಲಿಂ–ವಿರೋಧಿ ವಲಸೆಗಾರ–ವಿರೋಧಿ ಬಲಪಂಥೀಯ 'ಐಡೆಂಟಿಟಿ ರಾಜಕಾರಣ'ದತ್ತ ಒಯ್ದದ್ದು – ಇವುಗಳ ಬಗ್ಗೆ ತೀವ್ರ ಆಕ್ರೋಶವಿತ್ತು. ಈ ಹಿನ್ನೆಲೆಯಲ್ಲಿ ಈ ಫಲಿತಾಂಶಗಳನ್ನು ವಿಶ್ಲೇಷಿಸಬೇಕಾಗಿದೆ.

ಈ ಚುನಾವಣಾ ಫಲಿತಾಂಶಗಳ ಹಲವು ವಿಶ್ಲೇಷಣೆಗಳು ಬಂದಿವೆ – 'ಅವರವರ ಭಾವ'ಕ್ಕೆ ತಕ್ಕನಾಗಿ. ಇವುಗಳಲ್ಲಿ ಪ್ರಧಾನವಾಗಿ ಕೇಳಿ ಬಂದಿದ್ದು–ಫ್ರೆಂಚ್ ರಾಜಕಾರಣ ನಡುಪಂಥೀಯತೆ ಮತ್ತು ಉಗ್ರಬಲಪಂಥೀಯತೆ ನಡುವೆ ಧ್ರುವೀಕರಣಗೊಂಡಿದೆ. ಉಗ್ರಬಲಪಂಥೀಯತೆಗೆ ಬೆಂಬಲ ಹೆಚ್ಚಾಗಿದೆ. ಆದರೂ ರಾಜಕಾರಣದಲ್ಲಿ ನಡುಪಂಥೀಯತೆಯ ಮುಖ್ಯಧಾರೆಯನ್ನು ಮ್ಯಾಕ್ರಾನ್ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಫ್ರಾನ್ಸ್ ನಂತಹ ಆಯಕಟ್ಟಿನ ದೇಶದಲ್ಲಿ ನವ–ಫ್ಯಾಸಿಸ್ಟ್ ಉಗ್ರ ಬಲಪಂಥೀಯ ಅಧ್ಯಕ್ಷರ ಆಯ್ಕೆಯ ಅನಾಹುತ ತಪ್ಪಿದೆ ಎಂದು ನಿಟ್ಟುಸಿರು ಬಿಡಬಹುದು–ಎಂಬುದು. ಚುನಾವಣೆಯ ಕೆಲವು ಅಂಕೆಸಂಖ್ಯೆಗಳನ್ನು ಸೂಕ್ಷ್ಮವಾಗಿ ನೋಡಿದರೆ ಇವು ಆಂಶಿಕವಾಗಿಯಷ್ಟೇ ಸರಿಯಾಗಿವೆ. ಈ ಚುನಾವಣೆಗಳು ಅನಾವರಣಗೊಳಿಸಿದ ನಿಜವಾದ ಅಂಶಗಳು ಬೇರೆಯೇ ಇವೆ.

ಮೊದಲ ಸುತ್ತಿನ ವಿವಿಧ ರಾಜಕೀಯ ಧೋರಣೆಗಳ ಅಧ್ಯಕ್ಷೀಯ ಅಭ್ಯರ್ಥಿಗಳ ಮತಗಳಿಕೆ ನೋಡಿದರೆ ಬೇರೆಯೇ ಚಿತ್ರ ಮೂಡುತ್ತದೆ. ಮೊದಲ ಸುತ್ತಿನಲ್ಲಿ ಸಹ ಮ್ಯಾಕ್ರಾನ್ ಮೊದಲ ಸ್ಥಾನದಲ್ಲಿದ್ದರೂ ಅವರ ಮತಗಳಿಕೆ ಕೇವಲ ಶೇ. 27.85 ಆಗಿತ್ತು. ಲಿ ಪೆನ್ ಶೇ.23.15 ಮತ ಪಡೆದು ಎರಡನೆಯ ಸ್ಥಾನದಲ್ಲಿದ್ದರು. ಲಾ ಫ್ರಾನ್ಸ್ ಇನ್ಸೊಮಿಸ್ (ಐಈಖ) ಎಡ ಪಂಥೀಯ ಪಕ್ಷದ ಜೀನ್ ಲುಕ್ ಮೆಲೆಂಕೋನ್ ಶೇ.21.96 ಮತ ಪಡೆದಿದ್ದರು. ಕಮ್ಯುನಿಸ್ಟ್ ಪಕ್ಷ, ಗ್ರೀನ್ ಪಾರ್ಟಿ ಮತ್ತು ಎರಡು ಸಣ್ಣ ಎಡಪಕ್ಷಗಳ ಮತಗಳಿಕೆ ಸೇರಿಸಿದರೆ ಎಡಪಂಥೀಯ ಮತಗಳಿಕೆ ಶೇ. 31.38 ಆಗುತ್ತವೆ. ಹೀಗೆ ಮೊದಲ ಸುತ್ತಿನಲ್ಲಿ ಎಡಪಂಥೀಯರು ಐಕ್ಯತೆಯಿಂದ ಸ್ಪರ್ಧಿಸಿದ್ದರೆ ಮೊದಲ ಸ್ಥಾನದಲ್ಲಿರುತ್ತಿದ್ದರು. ಹಾಗೆನೇ ಇನ್ನೆರಡು ಉಗ್ರ ಬಲಪಂಥೀಯ ಪಕ್ಷಗಳು ಲಿ ಪೆನ್ ರನ್ನು ಬೆಂಬಲಿಸಿದ್ದರೆ ಉಗ್ರ ಬಲಪಂಥದ ಒಟ್ಟು ಮತಗಳಿಕೆ ಶೇ.32.28 ಆಗುತ್ತಿದ್ದು, ಅವರು ಮೊದಲ ಸ್ಥಾನದಲ್ಲಿರುತ್ತಿದ್ದರು. ಇವೆರಡೂ ಆಗಿದ್ದರೆ ಉಗ್ರಬಲಪಂಥೀಯರು ಮೊದಲ ಸ್ಥಾನ ಮತ್ತು ಎಡ ಪಂಥೀಯರು ಎರಡನೆಯ ಸ್ಥಾನದಲ್ಲಿದ್ದು, ಮ್ಯಾಕ್ರಾನ್ ಎರಡನೆಯ ಸುತ್ತಿಗೆ ಬರುತ್ತಿರಲಿಲ್ಲ!

ಎರಡನೆಯ ಸುತ್ತಿನಲ್ಲಿ ಎಡ ಅಭ್ಯರ್ಥಿ ಇಲ್ಲದಿರುವುದರ ಪರಿಣಾಮವಾಗಿ ಇನ್ನೂ ಕೆಲವು ಅಂಶಗಳು ಮತಗಳಿಕೆಯ ರಾಜಕೀಯ ವಿಶ್ಲೇಷಣೆಯನ್ನು ವಿರೂಪಗೊಳಿಸುತ್ತವೆ. ಎರಡನೆಯ ಸುತ್ತಿನಲ್ಲಿ ನಡೆದ ಶೇ.72 ಮತದಾನ (ಮೊದಲ ಸುತ್ತಿನಲ್ಲಿ ಶೇ.73.7 ಇತ್ತು), 1969ರ ನಂತರ ನಡೆದ ಅತಿ ಕಡಿಮೆ ಮತದಾನ ಪ್ರಮಾಣವೆಂದು ದಾಖಲಾಗಿದೆ. ಅದೇ ರೀತಿ ಕುಲಗೆಟ್ಟ ಮತಗಳ (ಶೇ.2.25) ಮತ್ತು ಶೂನ್ಯ ಮತಪತ್ರ (ಶೇ.6.35) ಗಳ ಪ್ರಮಾಣ ಈ ಬಾರಿ ಅತ್ಯಧಿಕ ಮಟ್ಟವನ್ನು (ಶೇ.8.6) ಮುಟ್ಟಿತ್ತು. ಮೊದಲ ಸುತ್ತಿನಲ್ಲಿ ಇದು ಕೇವಲ ಶೇ.2.2 ಇತ್ತು. ಪ್ರಧಾನವಾಗಿ ಎಡಪಂಥಿಯ ಮತದಾರರ ವಿಭಾಗವೊಂದು ಲಿ ಪೆನ್ ಮತ್ತು ಮ್ಯಾಕ್ರಾನ್ ರಿಂದ ರೋಸಿ ಹೋಗಿದ್ದು ಇಬ್ಬರಿಗೂ ಮತದಾನ ಮಾಡಲು ಮನಸ್ಸಾಗದೆ ದೂರವುಳಿದರು. ಇದು ಮ್ಯಾಕ್ರಾನ್ ವಿಜಯ ಎಷ್ಟು ಟೊಳ್ಳು ಎಂದು ತೋರಿಸುತ್ತದೆ. ಇದೇ ಜೂನ್‌ನಲ್ಲಿ ನಡೆಯಲಿರುವ ಪಾರ್ಲಿಮೆಂಟರಿ ಚುನಾವಣಾ ಫಲಿತಾಂಶದ ಮೇಲೆ ಇದು ತೀವ್ರ ಪ್ರಭಾವ ಬೀರಲಿದೆ. ಮ್ಯಾಕ್ರಾನ್ ಅವರ ಪಕ್ಷ ಬಹುಮತ ಉಳಿಸಿಕೊಳ್ಳಲು ಹೆಣಗಾಡಬೇಕಾದೀತು. ಸೋತರೂ ಆಶ್ಚರ್ಯ ಪಡಬೇಕಾಗಿಲ್ಲ. ಇದಕ್ಕಾಗಿಯೇ ಮ್ಯಾಕ್ರಾನ್ ಗೆದ್ದರೂ ಸೋತಿದ್ದಾರೆ ಎನ್ನುವುದು ಹೆಚ್ಚು ಸರಿಯಾದ ವಿಶ್ಲೇಷಣೆ.

ಫ್ರಾನ್ಸ್ ನಲ್ಲಿ 1960ರ ದಶಕದಿಂದ ಮೊದಲ ಎರಡು ಸ್ಥಾನಗಳಲ್ಲಿದ್ದು ರಾಜಕಾರಣದಲ್ಲಿ ಅಧಿಪತ್ಯ ಸಾಧಿಸಿದ್ದ ನಡುಪಂಥೀಯ ಪಕ್ಷಗಳ ಬಲ ಕಡಿಮೆಯಾಗುತ್ತಾ ಬಂದಿದ್ದು, ಈ ಬಾರಿ ಅಪಾರವಾಗಿ ಕುಸಿದಿದೆ. ಮ್ಯಾಕ್ರಾನ್ ಅವರನ್ನು ನಡುಪಂಥೀಯವೆಂದು (ಇವರು 2012–17 ಅವಧಿಯಲ್ಲಿ ಸೋಶಲಿಸ್ಟ್ ಸರಕಾರದ ಪ್ರಧಾನಿಯಾಗಿದ್ದರು) ಪರಿಗಣಿಸಿದರೆ, ನಡು–ಬಲಪಂಥೀಯ ರಿಪಬ್ಲಿಕನ್ ಪಕ್ಷ (ಶೇ.4.78) ಮತ್ತು ನಡು–ಎಡ ಪಂಥೀಯ ಸೋಶಲಿಸ್ಟ್ ಪಕ್ಷ (ಶೇ. 1.7) ಮತಗಳಿಕೆಗಳನ್ನೂ ಸೇರಿಸಿದರೆ, ಒಟ್ಟಾಗಿ (ಇವು ಒಟ್ಟಾಗಿ ಸ್ಪರ್ಧಿಸುವ ಸಾಧ್ಯತೆಯಿರಲೇ ಇಲ್ಲವಾದರೂ) ನಡುಪಂಥೀಯ ಮತಗಳಿಕೆ ಶೇ. 34.33 ಆಗುತ್ತದೆ. 2012ರ ಮೊದಲ ಸುತ್ತಿನಲ್ಲಿ ನಡುಪಂಥೀಯ ಮತಗಳಿಕೆ ಶೇ.58ರಷ್ಟಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಇದೇ ಮೊದಲ ಬಾರಿಗೆ ಎಡ ಮತ್ತು ಉಗ್ರಬಲಪಂಥೀಯ ಮತಗಳಿಕೆ ಶೇ.50 ಮಟ್ಟವನ್ನು ದಾಟಿವೆ. ಮಾತ್ರವಲ್ಲ ಶೇ.63 ಆಗಿದ್ದು, ಮೂರನೆಯ ಎರಡರಷ್ಟು ಪ್ರಮಾಣಕ್ಕೆ ಹತ್ತಿರ ಬರುತ್ತವೆ. ಹಾಗಾಗಿ ರಾಜಕಾರಣದಲ್ಲಿ ನಡುಪಂಥೀಯತೆಯ ಮುಖ್ಯಧಾರೆಯನ್ನು ಮ್ಯಾಕ್ರಾನ್ ಕಾಪಾಡಿಕೊಳ್ಳುವ ಬದಲು ತಮ್ಮ 5 ವರುಷಗಳ ದುರಾಡಳಿತದಿಂದ ನಾಶಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅದರಿಂದಾಗಿ ಉಗ್ರಬಲಪಂಥೀಯತೆ ಮುನ್ನೆಲೆಗೆ ಬಂದು ಇನ್ನಷ್ಟು ಅಪಾಯಕಾರಿಯಾಗಿದೆ. ನಡುಪಂಥೀಯತೆಯ ಹೆಸರಲ್ಲಿ ಜನವಿರೋಧಿ ಉಗ್ರ ಬಲಪಂಥೀಯ ಧೋರಣೆಗಳನ್ನು ಹೇರುವ ಶಕ್ತಿಗಳು ಉಗ್ರ ಬಲಪಂಥೀಯ ಶಕ್ತಿಗಳನ್ನು ಬಲಗೊಳಿಸುತ್ತವೆ. ಅದನ್ನು ಮಟ್ಟ ಹಾಕಲು ಎಡಪಂಥೀಯ ಶಕ್ತಿಗಳಿಂದ ಮಾತ್ರ ಸಾಧ್ಯ ಎಂದು ಫ್ರಾನ್ಸ್ ನ ಎರಡು ಸುತ್ತಿನ ಮತಗಳಿಕೆ ಅಂಕೆ ಸಂಖ್ಯೆಗಳು ತೋರಿಸುತ್ತವೆ.

ಎಡಪಕ್ಷಗಳು ತಮ್ಮ ಅನೈಕ್ಯತೆಯ ಪರಿಣಾಮವಾಗಿ ಉಗ್ರಬಲಪಂಥ ಬಲಗೊಂಡಿದ್ದನ್ನು ಮನಗಂಡಿದ್ದು, ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಮೊದಲ ಸುತ್ತಿನಲ್ಲಿಯೇ ಉಗ್ರಬಲಪಂಥಕ್ಕೆ ಸವಾಲು ಒಡ್ಡಬೇಕು ಎಂದು ನಿರ್ಧರಿಸಿವೆ. ಎಡಪಕ್ಷಗಳು ಐಕ್ಯತೆಯಿಂದ ಆಕ್ರಾಮಕವಾಗಿ ಚುನಾವಣಾ ಕಣ ಪ್ರವೇಶಿಸಿದರೆ, ಉಗ್ರಬಲಪಂಥವನ್ನು ಪಾರ್ಲಿಮೆಂಟಲ್ಲಿ ಸಹ ಬಲಗೊಳ್ಳಲು ಬಿಡಬಾರದು ಎಂಬ ಛಲವಿರುವ ನಡುಪಂಥೀಯ (ಇದರ ದೊಡ್ಡ ವಿಭಾಗ ಸೋಶಲಿಸ್ಟ್ ಪಕ್ಷದ ಬೆಂಬಲಿಗರು) ಮತದಾರರ ಮತ್ತು ನಡುಪಂಥೀಯ ದುರಾಡಳಿತದಿಂದ ಬೇಸತ್ತು ಉಗ್ರಬಲಪಂಥದ ಜಾಣಮಾತುಗಳಿಂದ ಮೋಸಹೋದ ದುಡಿಯುವ ಜನರ ವಿಭಾಗವನ್ನು ಆಕರ್ಷಿಸುವ ಸಾಧ್ಯತೆಯಿದೆ. ಸಾಮಾನ್ಯವಾಗಿ ಮೊದಲು ಸುತ್ತಿನ ರಾಜಕೀಯ ಆಯ್ಕೆ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಬಿಂಬಿತವಾಗುತ್ತವೆ ಎನ್ನಲಾಗಿದೆ.

ಹಾಗಾಗಿ ಫ್ರೆಂಚ್ ಅಧ್ಯಕ್ಷೀಯ ಚುನಾವಣಾ ಮತದಾನದ ಸೂಕ್ಷ್ಮ ವಿಶ್ಲೇಷಣೆ ಮಾಡಿದರೆ ಒಟ್ಟಾರೆಯಾಗಿ ಹೀಗೆ ಹೇಳಬಹುದು – ನಡುಪಂಥೀಯರ ದುರಾಡಳಿತ ಮತ್ತು ಜನವಿರೋಧಿ ನೀತಿಗಳಿಂದ ಫ್ರೆಂಚ್ ರಾಜಕಾರಣ ಬಲಪಂಥೀಯತೆಯತ್ತ ಹೊರಳಿರುವುದು ನಿಜ. ಆದರೆ ಎಡಪಂಥೀಯರು ಗಮನಾರ್ಹ ಮುನ್ನಡೆ ಸಾಧಿಸಿದ್ದಾರೆ. ಮ್ಯಾಕ್ರಾನ್ ಮತ್ತು ನಡುಪಂಥೀಯತೆ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದರೂ ಸೋತು ಕುಸಿಯುತ್ತಿದೆ. ಎಡಪಂಥೀಯತೆ ಗಮನಾರ್ಹ ಮುನ್ನಡೆ ಸಾಧಿಸಿದೆ. ರಾಜಕಾರಣದಲ್ಲಿ ಮೊದಲ ಎರಡು ಸ್ಥಾನಗಳಿಗೆ ಎಡ ಮತ್ತು ಉಗ್ರಬಲಪಂಥೀಯತೆ ನಡುವೆ ಹಣಾಹಣಿ ನಡೆದಿದೆ. ಜೂನ್ ಪಾರ್ಲಿಮೆಂಟರಿ ಚುನಾವಣೆಗಳು ಇದನ್ನು ಇನ್ನಷ್ಟು ಸ್ಪಷ್ಟವಾಗಿ ತೋರಿಸಲಿವೆ.



JANASHAKTHI KANNADA VARA PATRIKE MAY 2-8, 2022 Price: Rs. 10/- Date of Publication: 29 APRIL 2022 RNI No. KARKAN /2006/17926 Posted on 2-05-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಡಾ. ವಿಠ್ಠಲ ಭಂಡಾರಿಯನ್ನು ಕಳೆದುಕೊಂಡು ಒಂದು ವರ್ಷವಾಗಲಿದೆ. ಈ ಸಂದರ್ಭದಲ್ಲಿ ಮೇ 7 ರಂದು 'ಪ್ರೀತಿ ಪದಗಳ ಸಹಯಾನಿ ವಿಠ್ಠಲ' ಎಂಬ ನೆನಪಿನ ಕಾರ್ಯಕ್ರಮವನ್ನು ಅವರು ಒಡನಾಡಿದ್ದ ಎಲ್ಲ ಸಂಘಟನೆಗಳು ಸೇರಿ ಕೆರೆಕೋಣದಲ್ಲಿ ಹಮ್ಮಿಕೊಂಡಿವೆ. ಮೇ 8ರಂದು ವಾರ್ಷಿಕ ಸಹಯಾನ ಸಾಹಿತ್ಯೋತ್ಸವ ನಡೆಯಲಿದೆ. ಈ ಎರಡು ಕಾರ್ಯಕ್ರಮಗಳಲ್ಲಿ ವಿಠ್ಠಲ ನೆನಪಿನ ಪುಸ್ತಕವಲ್ಲದೆ ಅವರು ಬರೆದ ಪುಸ್ತಕಗಳ ಬಿಡುಗಡೆ ಆಗಲಿದೆ. ಈ ಸಂದರ್ಭದಲ್ಲಿ ಪ್ರಗತಿಪರ ಸಾಂಸ್ಕೃತಿಕ ಚಳುವಳಿಗೆ ವಿಠ್ಠಲ ಭಂಡಾರಿ ಅವರ ವಿಶಿಷ್ಟ ಕೊಡುಗೆ ನೆನಪಿಸುವ ಲೇಖನ.



ವಿಠ್ಠಲ ರೂಪಿಸಿದ 'ಕೆರೆಕೋಣ ಮಾದರಿ'ಯನ್ನು ನಾಡಿನ ತುಂಬಾ ಹರಡೋಣ!

ವಸಂತರಾಜ ಎನ್.ಕೆ.

ವಿಠ್ಠಲ ವ್ಯಕ್ತಿಯಾಗಿ ಹಲವು ಉತ್ಕೃಷ್ಟ ಗುಣಗಳನ್ನು ಮೈಗೂಡಿಸಿಕೊಂಡಿದ್ದ, ಹಲವು ಪಾತ್ರಗಳನ್ನು ವಹಿಸಬಲ್ಲವನಾಗಿದ್ದ. ಅವನಿಗೆ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಸಮಗ್ರವಾದ ಆಳವಾದ ಅರಿವಿತ್ತು. ವಿದ್ಯಾರ್ಥಿಗಳಿಗೆ ಪ್ರಿಯವಾಗಿದ್ದ ನುರಿತ ಶಿಕ್ಷಕನಾಗಿದ್ದ. ಸಾಹಿತ್ಯ ವಿಮರ್ಶೆ, ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ಚರಿತ್ರೆ, ಜಾನಪದ, ಬುಡಕಟ್ಟು ಅಧ್ಯಯನ – ಹೀಗೆ ಹಲವು ಕ್ಷೇತ್ರಗಳಲ್ಲಿ ಸಂಶೋಧಕನೂ ಆಗಿದ್ದ. ಆತ ಯಾವುದೇ ಕ್ಷೇತ್ರದಲ್ಲಿ ಸಂಘಟನಾ ಕೆಲಸ ಮಾಡಬಲ್ಲ ಅಪ್ರತಿಮ ಸಂಘಟಕ. ರಾಜಕೀಯ ಸ್ಪಷ್ಟತೆ ಇರುವ ಕಟ್ಟಾ ಸಮಾಜವಾದಿ. ಎಲ್ಲ ಕ್ಷೇತ್ರಗಳಲ್ಲಿ (ಅಕಾಡೆಮಿಕ್, ಸಾಹಿತ್ಯ, ಕಲೆ, ರಾಜಕೀಯ, ಅಧಿಕಾರಿ ವರ್ಗ ಇತ್ಯಾದಿ) ಎಲ್ಲ ಹಂತಗಳಲ್ಲಿ ವ್ಯಾಪಕ ಸಂಪರ್ಕ ಸ್ನೇಹ ಒಡನಾಟ ಆತನ ಅತಿ ದೊಡ್ಡ ಗುಣ. ಸರಕಾರಿ, ಸಾಂಸ್ಥಿಕ ಯೋಜನೆಗಳನ್ನು ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವ ಚಾಕಚಕ್ಯತೆ, ದೊಡ್ಡ ಕನಸುಗಳನ್ನು ಕಂಡು ಅದನ್ನು ಸಾಕಾರಗೊಳಿಸಬಲ್ಲ ಛಲ, ಸಾಮರ್ಥ್ಯ ಸಹ ಆತನಿಗೆ ವಿಶಿಷ್ಟವಾಗಿತ್ತು. ಆತ ನಿರರ್ಗಳ ಮಾತುಗಾರ. ಅದು ಕಾರ್ಯಕ್ರಮದ ಪ್ರಸ್ತಾವನೆಯಾಗಿರಲಿ, ಪ್ರಬಂಧವಾಗಿರಲಿ, ಸಂಕೀರ್ಣ ವಿಷಯಗಳನ್ನು ಎಲ್ಲ ರೀತಿಯ (ಸಾಹಿತಿ–ಕಲಾವಿದರು, ವಿದ್ಯಾರ್ಥಿಗಳು, ಕಾರ್ಯಕರ್ತರು, ಸಾರ್ವಜನಿಕರು) ಎಲ್ಲ ಹಂತದವರಿಗೂ ಅರ್ಥ ಮಾಡಿಸುವ ಸಂವಹನ ಸಾಧಿಸುವ ಕೌಶಲ್ಯವಿತ್ತು ಆತನಿಗೆ.

ಯಾವುದೇ ಸಂಘಟನೆಯ ಒಳಗೆ ಭಿನ್ನಾಭಿಪ್ರಾಯ, ವಾಗ್ವಾದಗಳು ಸಾಮಾನ್ಯ. ಸಾಂಸ್ಕೃತಿಕ ಸಂಘಟನೆಗಳಲ್ಲಿ ಅದು ಇನ್ನೂ ಹೆಚ್ಚೇ. ಅದು ವಿಕೋಪಕ್ಕೆ ಹೋದಾಗ ಸಂಘರ್ಷಕ್ಕೆ ಹಾದಿ ಮಾಡಿಕೊಟ್ಟಾಗ ಅದನ್ನು ಪರಿಹರಿಸುವ ಕಲೆ ವಿಠ್ಠಲನಿಗೆ ಸಿದ್ಧಿಸಿತ್ತು. ಆತ ಕೆಲಸ ಮಾಡುವ ಎಲ್ಲ ಸಂಘಟನೆಗಳಲ್ಲೂ ಎಲ್ರರನ್ನೂ ಬೆಸೆಯುವ ಒಂದುಗೂಡಿಸುವ 'ಗೋಂದು' ಆಗಿದ್ದ. ಸಂಘಟನೆಯ ಉದ್ದೇಶಗಳಿಗೆ ಎಲ್ಲರನ್ನು ಒಪ್ಪಿಸಿ ಒಗ್ಗೂಡಿಸಿ ಕೊಂಡೊಯ್ಯುವ ತಾಳ್ಮೆ, ಕೌಶಲ್ಯ ಅವನ ವಿಶೇಷತೆಯಾಗಿತ್ತು. ತನ್ನ ಸಂಘಟನೆಯೊಳಗೆ ಮಾತ್ರವಲ್ಲ, ಇತರ ಸಾಂಸ್ಕೃತಿಕ ಸಂಘಟನೆಗಳೊಂದಿಗೆ ಜಾಲ ಕಟ್ಟುವ ಸಾಮರ್ಥ್ಯ ಸಹ ಅವನಿಗಿತ್ತು. ಇಂತಹ ಕೆಲವು ಕೆಲಸಗಳನ್ನು ಮಾಡುವವರು ಕುಟುಂಬದ ಜವಾಬ್ದಾರಿಯನ್ನು ನಿರ್ಲಕ್ಷಿಸುವುದು ಸಾಮಾನ್ಯ. ಆದರೆ ಇಂತಹ ಹಲವು ಕೆಲಸಗಳನ್ನು ಮಾಡುತ್ತಾ ವಿಠ್ಠಲ ಮಾತ್ರ ಆದರ್ಶ ಮಾಮ, ಗಂಡ, ತಮ್ಮ, ಮಗ ಎಲ್ಲವೂ ಆಗಿದ್ದ. ಒಬ್ಬ ವ್ಯಕ್ತಿ ಇಷ್ಟೆಲ್ಲ ಉತ್ಕೃಷ್ಟ ಗುಣಗಳನ್ನು ಮೈಗೂಡಿಸಿಕೊಳ್ಳುವುದು, ಇಷ್ಟೆಲ್ಲ ಕೆಲಸಗಳನ್ನು ಒಂದೇ ಸಮಯದಲ್ಲಿ ಮಾಡುವುದು, ಇಷ್ಟೆಲ್ಲ ಪಾತ್ರಗಳನ್ನು ವಹಿಸುವುದು ಸಾಧ್ಯ ಎಂದು ವಿಠ್ಠಲನನ್ನು ನಿಕಟವಾಗಿ ಬಲ್ಲವರು ಮಾತ್ರ ನಂಬಬಹುದು.

ವಿಠ್ಠಲನ ವಿಶಿಷ್ಟ ಬಳುವಳಿ 'ಕೆರೆಕೋಣ ಮಾದರಿ'

ಆದರೆ ವಿಠ್ಠಲ ನಮಗೆಲ್ಲ ಬಿಟ್ಟುಹೋದ ಅತ್ಯಂತ ಪ್ರಮುಖವಾದ ವಿಶಿಷ್ಟವಾದ ಬಳುವಳಿ ಒಂದರ ಬಗ್ಗೆ ನಾನು ಹೇಳಲೇಬೇಕು. ಅದು ಅವನು ಬೆಳೆಸಿದ ಪ್ರಗತಿಪರ ಜನಪರ ಸಾಂಸ್ಕೃತಿಕ ಚಳುವಳಿ ಕಟ್ಟುವ ಒಂದು ಹೊಸ ಮಾದರಿ. ಅದನ್ನು ನಾನು 'ಕೆರೆಕೋಣ ಮಾದರಿ' ಅಂತ ಕರೆಯುತ್ತೇನೆ.

ಕೆರೆಕೋಣ ಗ್ರಾಮದಿಂದ ಆರಂಭಿಸಿ, ಅದನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಮುತ್ತ ಹಾಗೂ ಹೊನ್ನಾವರ ತಾಲೂಕು, ಉತ್ತರ ಕನ್ನಡ ಜಿಲ್ಲೆ, ರಾಜ್ಯ ಮಟ್ಟಕ್ಕೆ ಹರಡುವ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಘಟನೆ ಇದರ ಮುಖ್ಯ ಅಂಶ. ಇದರಲ್ಲಿ ಸ್ಥಳೀಯವಾಗಿ ಅತ್ಯಂತ ಸಕ್ರಿಯವಾದ ಸಾಹಿತಿ–ಕಲಾವಿದರು ಇದ್ದು, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇವು ಕೆಳಗಿಂದ ಮೇಲಕ್ಕೆ ಹರಡುತ್ತಾ ಇತರ ಮೇಲಿನ ಹಂತದ ಕಾರ್ಯಕ್ರಮಗಳೊಂದಿಗೆ ಬೆಸೆದುಕೊಳ್ಳುತ್ತದೆ. ಮೇಲಿನ ಹಂತದ ಸಂಘಟನೆಗಳೊಂದಿಗೆ ಸಂಪರ್ಕ ಸಹಯೋಗ ಸಾಧಿಸುತ್ತದೆ. ತಾಲೂಕು/ಜಿಲ್ಲಾ ಮಟ್ಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದ 'ಚಿಂತನ ರಂಗ ಅಧ್ಯಯನ ಕೇಂದ್ರ' ಸಮುದಾಯ ಕರ್ನಾಟಕಕ್ಕೆ ಸಂಯೋಜನೆಯಾದ್ದು ಇದಕ್ಕೆ ಉದಾಹರಣೆ. ಈ ಮೇಲಿನ ಹಂತದ ಕೆಲವು ಕಾರ್ಯಕ್ರಮಗಳನ್ನು ಗ್ರಾಮ ಮಟ್ಟದಲ್ಲೇ ಸಂಘಟಿಸಲಾಗುತ್ತದೆ. (ಉದಾ: ತಾಲೂಕು/ಜಿಲ್ಲಾ ಮಟ್ಟದ ಮಕ್ಕಳ ಬೇಸಿಗೆ ಶಿಬಿರ, ರಾಜ್ಯ ಮಟ್ಟದ ಸಹಯಾನ ಸಾಹಿತ್ಯೋತ್ಸವ ಕೆರೆಕೋಣದಲ್ಲಿ ನಡೆಯುತ್ತದೆ) ಇದು ಕೆಳಗಿಂದ ಮೇಲಕ್ಕೆ, ಮೇಲಿನಿಂದ ಕೆಳಕ್ಕೆ ಹರಡುವ ವಿಕೇಂದ್ರೀಕೃತ ಮಾದರಿ.

ಸಾಂಸ್ಕೃತಿಕ ಪ್ರಕಾರಗಳ ವೈವಿಧ್ಯತೆ ಇದರ ಇನ್ನೊಂದು ಲಕ್ಷಣ. ಮಕ್ಕಳ ಬೇಸಿಗೆ/ನಾಟಕ ಶಿಬಿರ, ಬೀದಿನಾಟಕ, ನಾಟಕ, ನೃತ್ಯ, ಸಂಗೀತ, ಯಕ್ಷಗಾನ, ತಾಳಮದ್ದಲೆ, ನಾಟಕೋತ್ಸವ, ಡಿ.31 ಹೊಸ ವರ್ಷದ ಮತ್ತಿತರ ಸಂದರ್ಭಗಳಲ್ಲಿ ಕವಿಗೋಷ್ಠಿ, ಸಾಂಸ್ಕೃತಿಕ ವಿಚಾರ ಸಂಕಿರಣಗಳು, ಪುಸ್ತಕ ಬಿಡುಗಡೆ/ಮಾರಾಟ, ಕ್ಷೇತ್ರ ಕಾರ್ಯ/ಸಂಶೋಧನೆ – ಇವೆಲ್ಲ ವೈವಿಧ್ಯಮಯ ಚಟುವಟಿಕೆಗಳು. ಪ್ರಸ್ತುತ ಸಾಮಾಜಿಕ ರಾಜಕೀಯ ಸಾಂಸ್ಕೃತಿಕ ವಿದ್ಯಮಾನಗಳಿಗೆ ಪ್ರತಿಕ್ರಿಯೆ ಈ 'ಮಾದರಿ'ಯ ಅನಿವಾರ್ಯ ಅಂಗ. ಕಾರ್ಮಿಕರು, ರೈತರು, ಯುವಜನರು, ಮಹಿಳೆಯರು, ವಿದ್ಯಾರ್ಥಿಗಳು, ಅಧ್ಯಾಪಕರು, ಸಾಹಿತಿ–ಕಲಾವಿದರು, ಬುದ್ಧಿಜೀವಿಗಳ ಜತೆಗೆ ನಿರಂತರ ಸಂಪರ್ಕ ಸಹ ಅದರ ಭಾಗ. ಅವರೇ ಈ ಕಾರ್ಯಕ್ರಮಗಳಿಗೆ ಪ್ರೇಕ್ಷಕರು, ಆಧಾರ ಎಲ್ಲವೂ.

ಇಂತಹ ಹಲವು ಸ್ಥಳೀಯ ಜನಪರ ಪ್ರಗತಿಪರ ಸಾಂಸ್ಕೃತಿಕ ಚಳುವಳಿಗಳು ಸಂಘಟನೆಗಳು ತಾಲೂಕು, ಜಿಲ್ಲಾ, ರಾಜ್ಯ ಮಟ್ಟದ ಇಂತಹುದೆ ಚಳುವಳಿಗಳು, ಸಂಘಟನೆಗಳೊಂದಿಗೆ ಸಹಕಾರ, ಸಹಯೋಗ, ಸಂಯೋಜನೆ ಸಾಧ್ಯವಾದಾಗ ಈ ಆಶಯಗಳು ವಿಸ್ತಾರವಾಗುತ್ತವೆ. ಇದಕ್ಕೆ ಮುಂದಾಳತ್ವ ಜಿಲ್ಲಾ/ರಾಜ್ಯ ಮಟ್ಟದಿಂದ ಅಥವಾ ಸ್ಥಳೀಯ ಮಟ್ಟದಿಂದ ಬರಬಹುದು. ಉತ್ತರ ಕನ್ನಡದ ಜನಪರ ಪ್ರಗತಿಪರ ಸಾಂಸ್ಕೃತಿಕ ಚಳುವಳಿಯನ್ನು ಕಟ್ಟಿ ಬೆಳೆಸಿದ್ದು, ಈ ಮಾದರಿಯನ್ನು ರಾಜ್ಯಕ್ಕೆ ವಿಸ್ತರಿಸಿದ್ದು ವಿಠ್ಠಲನ ಪ್ರಮುಖ ಕೊಡುಗೆ. ಸಮುದಾಯ ಕರ್ನಾಟಕ ಇತ್ತೀಚಿನ ವರ್ಷಗಳಲ್ಲಿ ಪ್ರತಿ ವರ್ಷ ಐದು ಪ್ರಕಾರಗಳ (ನಾಟಕ, ಸಂಗೀತ, ಸಾಹಿತ್ಯ, ಸೈದ್ಧಾಂತಿಕ, ಬುಡಕಟ್ಟು) ರಾಜ್ಯ ಮಟ್ಟದ ಮೆಗಾ ಕಾರ್ಯಕ್ರಮಗಳನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಹಮ್ಮಿಕೊಂಡದ್ದರಲ್ಲಿ ವಿಠ್ಠಲನ ಪಾತ್ರ ಹಿರಿದಾಗಿತ್ತು. ಈ 'ಮಾದರಿ'ಯ ಎರಡು ಪ್ರಮುಖ ಲಕ್ಷಣಗಳನ್ನು (ವೈವಿಧ್ಯತೆ, ವಿಕೇಂದ್ರೀಕರಣ) ಅದು ಒಳಗೊಂಡಿತ್ತು. ಹಿಂದೆ ಇಂತಹ ರಾಜ್ಯ ಮಟ್ಟದ ಕಾರ್ಯಕ್ರಮಗಳು ನಾಟಕೋತ್ಸವಕ್ಕೆ ಸೀಮಿತವಾಗಿದ್ದವು. ಅದೇ ರೀತಿ ವಿಠ್ಠಲ ಜಿಲ್ಲೆಯಲ್ಲಿ ಮಾಡುತ್ತಿದ್ದ ಜಾನಪದ ಬುಡಕಟ್ಟು ಸಾಂಸ್ಕೃತಿಕ ಅಭಿವ್ಯಕ್ತಿಗಳ ಸಂಗ್ರಹ, ಜಾನಪದ ಬುಡಕಟ್ಟು ಕಲಾವಿದರಿಗೆ ಪ್ರೋತ್ಸಾಹ, ಸಹಾಯಗಳನ್ನು ಸಹ ರಾಜ್ಯದ ಇತರೆಡೆಗೆ ಹಬ್ಬಿಸಲು ಸಾಧ್ಯವಾಗಿತ್ತು.

ಸರಕಾರದ ಇಲಾಖೆಗಳು, ಅಕಾಡೆಮಿಗಳು, ವಿ.ವಿ.ಗಳು ಮತ್ತು ಇತರ ಸಾಂಸ್ಕೃತಿಕ ಸಂಸ್ಥೆಗಳ ಉತ್ತಮ ಯೋಜನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಅದನ್ನು ಹೆಚ್ಚು ಅರ್ಥಪೂರ್ಣವಾಗಿಸುವುದು ಸಹ ವಿಠ್ಠಲ ರೂಪಿಸಿದ ಈ 'ಮಾದರಿ'ಯ ಮತ್ತೊಂದು ಲಕ್ಷಣ. ಡಾ.ಅಂಬೇಡ್ಕರ್ 125ನೆಯ ಜನ್ಮವಾರ್ಷಿಕೋತ್ಸವದ ಸಂದರ್ಭದಲ್ಲಿ ಹಮ್ಮಿಕೊಂಡ ಯೋಜನೆ, ಕನ್ನಡ ಪುಸ್ತಕ ಪ್ರಾಧಿಕಾರದ 'ಓದುವ ಅಭಿರುಚಿಯ ಕಾರ್ಯಾಗಾರ'ಗಳು ಇದಕ್ಕೆ ಉತ್ತಮ ಉದಾಹರಣೆಗಳು. ಸರಕಾರದ ಇಲಾಖೆಗಳು, ಅಕಾಡೆಮಿಗಳು, ವಿ.ವಿ.ಗಳು ಮತ್ತು ಇತರ ಸಾಂಸ್ಕೃತಿಕ ಸಂಸ್ಥೆಗಳ ಸಹಯೋಗದಲ್ಲಿ ಜನಪರ ಪ್ರಗತಿಪರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಅವುಗಳ ಕಟ್ಟುಪಾಡುಗಳಿಗೆ ಕಟ್ಟು ಬೀಳದೆ ಪೂರ್ಣವಾಗಿ ಅವಲಂಬಿಸದೆ, ಕಾರ್ಯಕ್ರಮದ ಆಶಯಗಳ ಸ್ವಾತಂತ್ರ್ಯ ಉಳಿಸಿಕೊಂಡು ನಡೆಸುವ ಚಾಕಚಕ್ಯತೆ, ಕಲೆ ಸಹ ಈ 'ಮಾದರಿ'ಯ ಭಾಗ. ಬಹುಶಃ ವಿಠ್ಠಲ ಪ್ರಮುಖ ಪಾತ್ರ ವಹಿಸಿದ 'ಸಂವಿಧಾನ ಓದು' ಅಭಿಯಾನ ಇದರ ಅತ್ಯುತ್ತಮ ಉದಾಹರಣೆ.

ಪ್ರಗತಿಪರ ಜನಪರ ಸಾಮಾಜಿಕ, ರಾಜಕೀಯ ಚಳುವಳಿಗಳ ಸಂಘಟನೆಗಳ ಜತೆ (ಅವುಗಳ ಬಾಲಂಗೋಚಿಯಾಗದೆ) ಸಾವಯವ ಸಂಬಂಧ, ಸೌಹಾರ್ದತೆ, ಸಹಯೋಗ ಸಾಧಿಸುವುದೂ ಈ 'ಮಾದರಿ'ಯ ಭಾಗವಾಗಿತ್ತು. ತೀವ್ರ ಸಾಂಸ್ಕೃತಿಕ ಪರಿಣಾಮ ಬೀರಬಲ್ಲ ಪ್ರಸ್ತುತ ರಾಜಕೀಯ ವಿದ್ಯಮಾನಗಳಿಗೆ ಸಮಗ್ರ ವ್ಯಾಪಕ ಪ್ರತಿಕ್ರಿಯೆ ವ್ಯಕ್ತಪಡಿಸುವುದೂ ಈ 'ಮಾದರಿ'ಯಲ್ಲಿತ್ತು. 'ಸಂವಿಧಾನ ಓದು' ಅಭಿಯಾನ ಮತ್ತು 'ಕಾವ್ಯರಂಗ' ಜಾಥಾ ಇದಕ್ಕೆ ಅತ್ಯುತ್ತಮ ಉದಾಹರಣೆಗಳು. ಇದಕ್ಕಾಗಿ ಹಲವು ರಾಜ್ಯ/ಸ್ಥಳೀಯ ಮಟ್ಟದ ಸಾಂಸ್ಕೃತಿಕ ವೇದಿಕೆಗಳೊಂದಿಗೆ ಸಹಯೋಗ ಸಾಧಿಸುವುದನ್ನೂ, ಇಂತಹ ವೇದಿಕೆ, ಸಂಘಟನೆ, ಚಳುವಳಿಗಳ ಜಾಲದ ನಿರ್ಮಾಣ ಮಾಡುವುದನ್ನೂ 'ಮಾದರಿ' ಒಳಗೊಂಡಿತ್ತು. ಜನನುಡಿ, ನಾವು–ನಮ್ಮವರು ಮುಂತಾದ ಇತರ ಸಾಂಸ್ಕೃತಿಕ ವೇದಿಕೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಅವುಗಳೊಂದಿಗೆ ಸಹಕಾರ, ಸಹಯೋಗ ಇದಕ್ಕೆ ಉದಾಹರಣೆ. ಸಮುದಾಯ ಕರ್ನಾಟಕದ ರಾಜ್ಯ ಸಮ್ಮೇಳನದೊಂದಿಗೆ ಇಂತಹ ಜಾಲದ ಸಭೆ ವಿಠ್ಠಲನ ಕನಸು ಈ 'ಮಾದರಿ'ಯ ಜಾರಿಯಾಗದ ಭಾಗ.

ಕರ್ನಾಟಕದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಇರುವ ಇಂತಹ ಇನ್ನೊಂದು ಮಾದರಿ ಎಂದರೆ 'ಹೆಗ್ಗೋಡು ಮಾದರಿ'. ಈ ಮಾದರಿಯೊಂದಿಗೆ 'ಕೆರೆಕೋಣ ಮಾದರಿ;ಗೆ ಹಲವು ಸಾಮ್ಯಗಳಿದ್ದರೂ ಪ್ರಮುಖ ವಿಭಿನ್ನತೆಗಳೂ ಇವೆ. ಸ್ಥಳೀಯವಾಗಿ ವೈವಿಧ್ಯಮಯ ಚಟುವಟಿಕೆಗಳನ್ನು ಸಂಘಟಿಸುವುದು, ಕಲೆಯನ್ನು ಜನರ ಬಳಿ ರಾಜ್ಯ ಮಟ್ಟದ ತಿರುಗಾಟಗಳ ಮೂಲಕ ಒಯ್ಯುವುದು –ಇವು ಸಾಮ್ಯತೆಗಳು ಎನ್ನಬಹುದು. ಆದರೆ ಜನಪರ ಪ್ರಗತಿಪರ ಆಶಯಗಳು 'ಹೆಗ್ಗೋಡು ಮಾದರಿ'ಯ ಭಾಗವಲ್ಲ. ಈಗ ಜನ–ವಿರೋಧಿ ಪ್ರತಿಗಾಮಿ ಆಶಯಗಳೂ ಅಲ್ಲಿ ನುಸುಳುತ್ತಿವೆ. 'ಕಲೆಗಾಗಿ ಕಲೆ'ಯೇ ಅದರ ಪ್ರಧಾನ ಧೋರಣೆಯಾಗಿದೆ.

ಹಾಗಂತ ಈ 'ಕೆರೆಕೋಣ ಮಾದರಿ' ವಿಠ್ಠಲನ ಮೂಲ ಅವಿಷ್ಕಾರವೂ ಅಲ್ಲ. ಅಥವಾ ಆಕಾಶದಿಂದ ಉದುರಿದ್ದೂ ಅಲ್ಲ. ಬಂಡಾಯ, ದಲಿತ, ಸಮುದಾಯ ಚಳುವಳಿಗಳು 1970–80 ರ ದಶಕಗಳಲ್ಲಿ ರೂಪಿಸಿದ ಪ್ರಗತಿಪರ ಜನಪರ ಸಾಂಸ್ಕೃತಿಕ ಚಳುವಳಿಯ ಮಾದರಿಯ ಮೇಲೆ ಆಧಾರಿತವಾದ್ದು. ಅದರ ವಿಸ್ತರಣೆ. ಅದನ್ನು ಆಳಗೊಳಿಸಿದ ಸಮಕಾಲೀನಗೊಳಿಸಿದ ರೂಪ. 'ಕೆರೆಕೋಣ ಮಾದರಿ'ಯಲ್ಲಿ ಡಾ.ಆರ್.ವಿ.ಭಂಡಾರಿ ಅವರ ಮತ್ತು ಬಂಡಾಯ ಉ.ಕ ದ ಸಾಂಸ್ಕೃತಿಕ ಚಟುವಟಿಕೆಗಳ ಪರಂಪರೆಯ ದೊಡ್ಡ ಪಾಲಿದೆ. ಈ ಮಾದರಿಯನ್ನು ಬೆಳೆಸಿ ಮುಂದುವರೆಸಿ ರಾಜ್ಯ ಮಟ್ಟಕ್ಕೆ ವಿಸ್ತರಿಸಿದ್ದು ಹಲವು ಅಂಶಗಳನ್ನು ಸೇರಿಸಿದ್ದು, ಆತ ಕೆಲಸ ಮಾಡಿದ 'ಸಮುದಾಯ ಕರ್ನಾಟಕ'ದಂತಹ ಸಂಘಟನೆಗಳ ಒಳಗೆ ಈ ಮಾದರಿಯ 'ಛಾಂಪಿಯನ್' ಆಗಿದ್ದು ಜಾರಿಗೊಳಿಸಿದ್ದು ವಿಠ್ಠಲನ ನಿರ್ದಿಷ್ಟ ಕೊಡುಗೆ.

ಈ 'ಮಾದರಿ'ಯನ್ನು ಅಂತರ್ಗತ ಮಾಡಿಕೊಂಡು, ರಾಜ್ಯದ ಜನಪರ ಪ್ರಗತಿಪರ ಸಾಂಸ್ಕೃತಿಕ ಚಳುವಳಿ ಅದನ್ನು ತನ್ನ 'ಕಾಮನ್ ಸೆನ್ಸ್' ಮಾಡಿಕೊಳ್ಳಬೇಕಾಗಿದೆ. ರಾಜ್ಯದ ತುಂಬಾ ಹರಡಬೇಕಿದೆ. ಈ ಮಾದರಿಯ ನೂರು ಕೆರೆಕೋಣಗಳು ಮೂಡಿ ಬರಲಿ. ವಿಠ್ಠಲ ಬಿಟ್ಟು ಹೋದ ಈ ಅಮೂಲ್ಯ 'ಮಾದರಿ'ಯ ಅನ್ವಯ ಮತ್ತು ಅದರ ಅಪೂರ್ಣ ಕೆಲಸಗಳನ್ನು ರಭಸದಿಂದ ಮುನ್ನಡೆಸೋಣ. ಇದು ಮಾತ್ರ ವಿಠ್ಠಲ ನ ನೆನಪಿಗೆ ಸಲ್ಲಿಸಬಹುದಾದ ನಿಜವಾದ ಗೌರವ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**